ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 26 ಸೋಮವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 71 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಾಳೆ ನಾಡಪ್ರಭು ಕೆಂಪೇಗೌಡರ ಜಯಂತಿ



ಮೈಸೂರು,ಜೂ.25– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಾಡಪ್ರಭು ಕೆಂಪೇಗೌಡ'ರ' ಜಯಂತಿಯನ್ನು ಜೂನ್ 27ರಂದು ಬೆಳಗ್ಗೆ 11.30ಕ್ಕೆ ಕರ್ನಾಟಕ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ವಹಿಸುವರು.

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಸಿ.ಅನಿಲ್ ಕುಮಾರ್, ಡಿ.ರವಿಶಂಕರ್, ಜಿ.ಡಿ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ತಿನ ಸದಸ್ಯರಾದ ಮರಿತಿಬ್ಬೆಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಹಾಗೂ ಸಿ.ಎನ್.ಮಂಜೇಗೌಡ, ಭಾಗವಹಿಸುವರು.

ಸಮಾರಂಭದ ಅತಿಥಿಗಳಾಗಿ ಉಪಮೇಯರ್ ಡಾ.ಜಿ.ರೂಪ ಹಾಗೂ ಮುಖ್ಯ ಭಾಷಣಕಾರರಾಗಿ ಸಾಹಿತಿ ಮತ್ತು ಪತ್ರಕರ್ತರೂ ಆದ ಬನ್ನೂರು ಕೆ.ರಾಜು ಭಾಗವಹಿಸುವರು. ಕಾರ್ಯಕ್ರಮದ ಅಂಗವಾಗಿ ಜಯಂತಿಯ ದಿನದಂದು ಬೆಳಗ್ಗೆ 9:30 ಗಂಟೆಗೆ ಅರಮನೆ ಆವರಣದಲ್ಲಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಮೆರವಣಿಗೆ ಹೊರಟು ಕಲಾಮಂದಿರ ತಲುಪುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸೌಲಭ್ಯಗಳು ಮರೀಚಿಕೆ

ಪೆಟ್ರೋಲ್ ಬಂಕ್‌ಗಳಿಲ್ಲ, ವಿಶ್ರಾಂತಿ ಕೊಠಡಿಗಳಿಲ್ಲ, ಶೌಚಾಲಯಗಳಿಲ್ಲ

ಮೈಸೂರು,ಜೂ.25(ಬಿಎಲ್‌ಯು)–ಇಡೀ ದೇಶದ ಹೆದ್ದಾರಿಗಳ ನಿರ್ಮಾಣಕ್ಕೆ ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ಮಾದರಿ ಎಂದು ಬಿಜೆಪಿ ಸರ್ಕಾರ ತನ್ನ ಬೆನ್ನು ತಾನೆ ತಟ್ಟಿಕೊಳ್ಳುತ್ತದೆ. ಆಧುನಿಕತೆಗೆ ತಕ್ಕಂತೆ ವೈಜ್ಞಾನಿಕ ರೀತಿಯಲ್ಲಿ ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಿದ್ದೇವೆ ಎಂತಲೂ ಬಡಾಯಿ ಕೊಚ್ಚಿಕೊಳ್ಳುತ್ತದೆ ಆದರೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಇರಬೇಕಾದ ಕನಿಷ್ಠ ಸೌಲಭ್ಯಗಳು ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಇಲ್ಲ. ದುಬಾರಿ ಟೋಲ್ ಶುಲ್ಕ ಪಾವತಿಸಿದರೂ ಸೌಲಭ್ಯ ಮರೀಚಿಕೆಯಾಗಿದೆ. ಇದರಿಂದ ಎಕ್ಸ್‌ಪ್ರೆಸ್ ವೇನಲ್ಲಿ ಹೋಗುವ ವಾಹನ ಸವಾರರು ಪ್ರತಿದಿನ ಹಲವು ತೊಂದರೆಗಳನ್ನು ಎದುರಿಸುತ್ತಿದ್ದಾರೆ.



ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇಯನ್ನು 8,066 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಈ ಮೂಲಕ ಬೆಂಗಳೂರು ಹಾಗೂ ಮೈಸೂರು ನಡುವಿನ ಪ್ರಯಾಣದ ಸಮಯವನ್ನು 3 ಗಂಟೆಯಿಂದ 90 ನಿಮಿಷಕ್ಕೆ ಇಳಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ 275ರ ಈ ಹೆದ್ದಾರಿಯಲ್ಲಿ 10 ಲೇನ್‌ಗಳಿವೆ. ಆದರೆ ಹೆದ್ದಾರಿಯಲ್ಲಿ ಕಡ್ಡಾಯವಾಗಿ ಇರಬೇಕಾದ ಕನಿಷ್ಠ ಸೌಲಭ್ಯಗಳು ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಇಲ್ಲ. ತುರ್ತು ಚಿಕಿತ್ಸಾ ಘಟಕ, ಪೆಟ್ರೋಲ್ ಬಂಕ್, ವಿಶ್ರಾಂತಿ ಕೊಠಡಿ, ಶೌಚಾಲಯ ಸೇರಿದಂತೆ ಯಾವುದೇ ಸೌಲಭ್ಯಗಳಿಲ್ಲ.

ಮೈಸೂರಿನಿಂದ ಒಂದು ಸಲ ಎಕ್ಸ್‌ಪ್ರೆಸ್ ವೇಗೆ ಪ್ರವೇಶ ಪಡೆದರೆ ಬೆಂಗಳೂರು ತನಕ ಯಾವುದೇ ಮೂಲಭೂತ ಸೌಕರ್ಯವಿಲ್ಲ. ಅಪಘಾತವಾದರೆ ತುರ್ತು ಚಿಕಿತ್ಸಾ ಕೇಂದ್ರವಿಲ್ಲ, ಪೆಟ್ರೋಲ್ ಅಥವಾ ಡೀಸೆಲ್ ಮುಗಿದರೆ ಪೆಟ್ರೋಲ್ ಬಂಕ್ ಇಲ್ಲ, ವಾಹನ ಚಲಾಯಿಸಿ ಸುಸ್ತಾಯಿತು ಅಂದರೆ ವಿಶ್ರಾಂತಿ ಪಡೆಯಲು ವಿಶ್ರಾಂತಿ ಕೊಠಡಿಗಳಿಲ್ಲ, ಮೂತ್ರ ವಿಸರ್ಜನೆ ಮಾಡಲು ಶೌಚಾಲಯವಿಲ್ಲ.

ಎಕ್ಸ್‌ಪ್ರೆಸ್ ವೇ ಮಧ್ಯೆ ವಾಹನ ಕೆಟ್ಟು ನಿಂತರೆ, ಪಂಕ್ಚರ್ ಆದರೆ, ಪೆಟ್ರೋಲ್ ಅಥವಾ ಡೀಸೆಲ್ ಮುಗಿದರೆ ಕಥೆ ಮುಗಿಯಿತು. ವಾಹನ ಸವಾರರ ಪಾಡು ಹೇಳ ತೀರದಾಗುತ್ತದೆ. ಪ್ರತಿ ದಿನ ಕೆಲವು ವಾಹನ ಸವಾರರು ಇಂತಹ ಸಮಸ್ಯೆ ಎದುರಿಸುತ್ತಲೆ ಇದ್ದಾರೆ. ಸಮಸ್ಯೆಯಾದರೆ ಸರ್ವಿಸ್ ರೋಡ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಹೋಗಿ ಈ ಸೌಲಭ್ಯ ಪಡೆಯಬೇಕು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾರ್ಚ್ 11ರಂದು ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆ ಮಾಡಿದರು.

ಉದ್ಘಾಟನೆ ನಂತರ ಕೆಲವೇ ದಿನಗಳಲ್ಲಿ ಈ ಸೌಲಭ್ಯ ಕಲ್ಪಿಸಲಾಗುತ್ತದೆ ಎಂದು ಜನರು ನಿರೀಕ್ಷೆ ಮಾಡಿದ್ದರು. ಆದರೆ ಉದ್ಘಾಟನೆಯಾಗಿ ನಾಲ್ಕು ತಿಂಗಳಾದರೂ ಪ್ರಯಾಣಿಕರಿಗೆ ಯಾವುದೇ ಸೌಲಭ್ಯ ಕಲ್ಪಿಸುವ ಲಕ್ಷಣಗಳು ಕಾಣಿಸುತ್ತಿಲ್ಲ.

ಭಾರತದ ಉದ್ದದ ರಾಷ್ಟ್ರೀಯ ಹೆದ್ದಾರಿ ಶ್ರೀನಗರ ಹಾಗೂ ಕನ್ಯಾಕುಮಾರಿ ಸಂಪರ್ಕಿಸುವ ಎನ್.ಹೆಚ್.–44ನಲ್ಲಿ ಈ ಎಲ್ಲಾ ಸೌಲಭ್ಯಗಳಿವೆ. 3,745 ಕಿಲೋ ಮೀಟರ್ ಉದ್ದದ ಈ ಎಕ್ಸ್‌ಪ್ರೆಸ್ ವೇನಲ್ಲಿ ಹಲವು ಸೌಲಭ್ಯ ಕಲ್ಪಿಸಲಾಗಿದೆ. ಆದರೆ ಈಗ ನಿರ್ಮಾಣವಾಗಿರುವ ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಯಾವುದೇ ಸೌಲಭ್ಯಗಳಿಲ್ಲ.

ಹಿಟ್ ಅಂಡ್ ರನ್ ಪ್ರಕರಣ: ಪರಿಹಾರಕ್ಕೆ ಜಿಲ್ಲಾ ಸಮಿತಿ ರಚನೆಗೆ ಅನುಮತಿ

ಮೈಸೂರು, ಜೂ.25 (ಎಸ್‌ಪಿಎನ್)– 'ಹಿಟ್ ಅಂಡ್ ರನ್' ಅಪಘಾತ ಪ್ರಕರಣಗಳಲ್ಲಿ ಮರಣ ಹೊಂದಿದವರಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ಹಣ ನೀಡಲು ಆಯಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಸಮಿತಿ ರಚಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ ಎಂದು ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ವಿ.ಎಸ್.ಪುಷ್ಪ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು ನೀಡಿರುವ ವರದಿ ಅನುಸಾರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅಧಿಸೂಚನೆಯಲ್ಲಿ 'ಹಿಟ್ ಮತ್ತು ರನ್' ಅಪಘಾತಗಳ ಸಂತ್ರಸ್ತರಿಗೆ ಪರಿಹಾರ ಯೋಜನೆಯನ್ನು ಪ್ರಕಟಿಸಲಾಗಿದೆ, 'ಹಿಟ್' ಅಂಡ್ 'ರನ್' ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರಿಗೆ 2 ಲಕ್ಷ ಹಾಗೂ ಗಾಯಗೊಂಡವರಿಗೆ 50 ಸಾವಿರ ರೂ ಪರಿಹಾರ ನೀಡಲು ಸೂಚಿಸಲಾಗಿದೆ.

'ಹಿಟ್' ಮತ್ತು 'ರನ್' ಮೋಟಾರು ಅಪಘಾತಗಳ ಸಂತ್ರಸ್ತರಿಗೆ ಪರಿಹಾರ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಜಿಲ್ಲಾಮಟ್ಟದ ಸಮಿತಿಯನ್ನು ರಚಿಸಲು ರಾಜ್ಯ ಸರ್ಕಾರ ಸೂಚಿಸಿದೆ.

> "'ಹಿಟ್ ಅಂಡ್ ರನ್' ಕೇಸ್‌ನಲ್ಲಿ ಡಿಕ್ಕಿ ಹೊಡೆದಾಗ ವ್ಯಕ್ತಿಯು ಮೃತಪಟ್ಟರೇ, ಆತನ ಸಹಜ ಅಥವಾ ಅಸಹಜ ಸಾವಿನ ಕುರಿತು ಸಂಚಾರಿ ಪೊಲೀಸ್ ಇಲಾಖೆಯಿಂದ 'ಸಿ' ರಿಪೋರ್ಟ್ ಅನ್ನು ಆಯಾ ಜಿಲ್ಲೆಯ ಜಿಲ್ಲಾ ಸಮಿತಿಗೆ ಸಲ್ಲಿಸಿದರೆ, ಮಾತ್ರ ಈ ಯೋಜನೆ ಅಂಗೀಕರಿಸುವಂತೆ ಮನವಿ ಮಾಡಲಾಗಿದೆ.
> **–ಪರಶುರಾಮಪ್ಪ, ಎಸಿಪಿ, ಸಂಚಾರ ವಿಭಾಗ**

ಜಿಲ್ಲಾಮಟ್ಟದ ಸಮಿತಿಯಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಲಿದ್ದಾರೆ, ಸದಸ್ಯರಾಗಿ ವಿಭಾಗಾಧಿಕಾರಿ ಇಲ್ಲವೇ ತಹಶೀಲ್ದಾರ್, ಜಿಲ್ಲಾ ಎಸ್ಪಿ ಅಥವಾ ಪೊಲೀಸ್ ಉಪಾಧೀಕ್ಷಕ, ಜಿಲ್ಲಾ ಶಸ್ತ್ರಚಿಕಿತ್ಸಕರು, ಪ್ರಾದೇಶಿಕ ಸಾರಿಗೆ ಅಧಿಕಾರಿ, ರಸ್ತೆ ಸುರಕ್ಷತೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಯ ಸದಸ್ಯರನ್ನು ಆಯಾ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ನೇಮಿಸಬೇಕು.

ನಾಮನಿರ್ದೇಶನ ಮಾಡಿರುವ ಅಧಿಕಾರಿಯನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದ್ದು, ಅಧಿಸೂಚನೆಯ ಜವಾಬ್ದಾರಿ ಮತ್ತು ಕರ್ತವ್ಯ ನಿರ್ವಹಿಸತಕ್ಕದ್ದು ಎಂದು ಸೂಚಿಸಲಾಗಿದೆ.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಮಹಾನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಅವರನ್ನು ಆಟೋ ಚಾಲಕರು, ಮಾಲೀಕರು ಆತ್ಮೀಯವಾಗಿ ಅಭಿನಂದಿಸಿದರು. ಇದೇ ವೇಳೆ ಆಟೋ ಚಾಲಕರು, ಮಾಲೀಕರಿಗೆ ಸಮವಸ್ತ್ರ ವಿತರಿಸಲಾಯಿತು. ಎಸ್‌ಬಿಎಂ ಮಂಜು ಸ್ನೇಹ ಬಳಗದ ಅಧ್ಯಕ್ಷ ಮಹದೇವ್, ಫಾಲ್ಕನ್ ಬೋರೇಗೌಡ, ಹೆಬ್ಬಾಳ್ ನಾಗೇಂದ್ರ, ಸತೀಶ್, ಗೋಕುಲಂ ರಮೇಶ್, ಬೃಂದಾವನ ರಘು, ಮಂಜುನಾಥಪುರ ಅರುಣ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.25– ಜೂ.27ರ ಮಂಗಳವಾರ ಬೆಳಗ್ಗೆ 10ರಿಂದ ಸಂಜೆ 530ರವರೆಗೆ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ರಾಮಾನುಜ ರಸ್ತೆ 1ರಿಂದ 9ನೇ ಕ್ರಾಸ್‌ವರೆಗೆ, ಹೊಸಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ತ್ಯಾಗರಾಜ ರಸ್ತೆ, ಚಾಮುಂಡಿಬೆಟ್ಟ ಮತ್ತು ಪಾದ, ಗುಂಡುರಾವ್‌ನಗರ, ದತ್ತನಗರ, ಮುನೇಶ್ವರನಗರ, ಗೌರಿಶಂಕರನಗರ, ನಂಜನಗೂಡು ಟೋಲ್ ಗೇಟ್, ತಾವರೆಕೆರೆ, ಜಾಕಿ ಕ್ವಾಟ್ರಸ್, ರೇಸ್ ಕೋರ್ಸ್ ಹಿಂಭಾಗ, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತಮುತ್ತ, ಸರ್ಕಾರಿ ಅಥಿತಿ ಗೃಹ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು, ತಾಲ್ಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ, ಬಿ.ಎನ್. ರಸ್ತೆ, ಚಾಮುಂಡಿಬೆಟ್ಟ, ಸಿದ್ಧಾರ್ಥನಗರ, ಆಲನಹಳ್ಳಿ ಸುತ್ತಮುತ್ತ, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತಮುತ್ತ, ಶ್ರೀಹರ್ಷ ರಸ್ತೆ, ಸಯ್ಯಾಜೀರಾವ್ ರಸ್ತೆ, ಇರ್ವಿನ್ ರಸ್ತೆ ಸುತ್ತಮುತ್ತ, ಧನ್ವಂತರಿ ರಸ್ತೆ, ಶಿವರಾಂಪೇಟೆ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಆರ್ಯ ವೈಶ್ಯ ಮಹಾಸಭಾದ ವಾಸವಿ ಭವನ ಉದ್ಘಾಟನೆ

ಧಾರ್ಮಿಕ ಸಂಸ್ಕೃತಿಯಿಂದ ಮಾತ್ರ ಸಾಧನೆ ಸಾಧ್ಯ: ಶ್ರೀ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿ ಅಭಿಮತ





ಮೈಸೂರು,ಜೂ.25(ಜಿಎ)–ವಿದೇಶದಲ್ಲಿರುವವರು ನಮ್ಮ ಸಂಸ್ಕೃತಿಯನ್ನು ಪಾಲಿಸುತ್ತಿದ್ದಾರೆ. ಆದರೆ, ಇಲ್ಲಿರುವವರು ಪಾಲಿಸುತ್ತಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದ ಶ್ರೀವಾಸವಿ ಪೀಠ ಪೀಠಾಧಿಪತಿ ಶ್ರೀ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳು ಧಾರ್ಮಿಕ ಸಂಸ್ಕೃತಿ ಪಾಲಿಸಿದರೆ, ಸಾಧನೆ ಮಾಡಲು ಯಾವುದೇ ಅಡೆತಡೆಗಳು ಎದುರಾಗುವುದಿಲ್ಲ ಎಂದರು.

ಕರ್ನಾಟಕ ಆರ್ಯವೈಶ್ಯ ಮಹಾಸಭಾ ವತಿಯಿಂದ ಮೈಸೂರಿನ ಗೀತ ಮಂದಿರ ರಸ್ತೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ವಾಸವಿ ಭವನ ಉದ್ಘಾಟಿಸಿ ನಂತರ ಕಲಾಮಂದಿರದಲ್ಲಿ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸಮಾಜ ಗಟ್ಟಿಯಾಗಿ ಉಳಿಸುವ ಕಾರ್ಯಗಳು ಆಗಬೇಕಿದೆ. ಸಮಾಜ ಯಾರದು ಅಲ್ಲ. ಅದು ನಮ್ಮದೇ ಎಂಬ ಮನೋಭಾವ ಇರಬೇಕು. ದೇವಸ್ಥಾನಗಳನ್ನು ನಿರ್ಮಾಣ ಮಾಡುವುದು ಕಷ್ಟವಲ್ಲ. ಆದರೆ, ಅದನ್ನು ನಿರ್ವಹಣೆ ಮಾಡುವುದು ಬಹಳ ಕಷ್ಟಕರ ಕೆಲಸ. ಪ್ರತಿ ಶುಕ್ರವಾರ ವಾಸವಿ ದೇವಾಲಯದಲ್ಲಿ ಬೆರಳೆಣಿಕೆಯಷ್ಟು ಮಂದಿ ಮಾತ್ರ ಇರುತ್ತಾರೆ. ಇದು ಬದಲಾಗಬೇಕು. ಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರ ಬಗ್ಗೆ ನಮ್ಮ ಸಂಸ್ಕೃತಿ ಕುರಿತು ತಿಳಿಸಬೇಕು ಎಂದು ತಿಳಿ ಹೇಳಿದರು.

ನಮ್ಮಲ್ಲಿ ಮಾತ್ರ ದೇವಾಸ್ಥನಕ್ಕೆ ಭೇಟಿ ನೀಡಲು ಹಿಂದೇಟು ಹಾಕುತ್ತಾರೆ. ಆದರೆ, ಅಮೇರಿಕದಲ್ಲಿ 12 ವಾಸವಿ ದೇವಾಲಯಗಳಿದ್ದು, ಅಲ್ಲಿಗೆ ಪ್ರತಿ ಶುಕ್ರವಾರ ಪೂಜೆ ಸಮಯಕ್ಕೆ ಸಂಪೂರ್ಣ ಕುಟುಂಬದ ಸದಸ್ಯರು ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ವಸ್ತ್ರ ಧರಿಸಿ ಬರುತ್ತಾರೆ. ಅಲ್ಲಿ ನಮ್ಮ ಸಂಸ್ಕೃತಿ ಪಾಲಿಸುತ್ತಿರುವ ಹಾಗೇ ಇಲ್ಲೂ ಪಾಲಿಸಬೇಕು ಎಂದರು.

ಈ ವೇಳೆ ಮಾಜಿ ಸಭಾಪತಿ ಡಿ.ಎಚ್.ಶಂಕರಮೂರ್ತಿ ಮಾತನಾಡಿ, ಬೆಂಗಳೂರಿನಲ್ಲಿ ಮಹಾರಾಜರು ಆರ್ಯವೈಶ್ಯ ಮಹಾಸಭಾಗೆ ಸ್ಥಳವನ್ನು ನೀಡಿದ್ದರು. ಅಲ್ಲಿ ಆಗಲೇ ವಿದ್ಯಾರ್ಥಿನಿಲಯ ನಿರ್ಮಾಣವಾಗಿ ಉತ್ತಮ ರೀತಿ ಸಾಗುತ್ತಿದೆ. ಅದರಂತೆ ಮೈಸೂರಿನಲ್ಲಿ ದಾನಿಗಳು ಈ ಸ್ಥಳವನ್ನು ನೀಡಿದ್ದು, 3 ವರ್ಷಗಳ ಹಿಂದೆ ನಾನೇ ಶಂಕುಸ್ಥಾಪನೆ ನೆರವೇರಿಸಿದ್ದೆ. ಕೊರೊನಾ ಹಿನ್ನೆಲೆಯಲ್ಲಿ ಕಾಮಗಾರಿ ಕುಂಠಿತವಾಗಿತ್ತು ಇಂದು ನಾನೇ ಉದ್ಘಾಟನೆ ಮಾಡುತ್ತಿರುವುದಕ್ಕೆ ಸಂತಸವಾಗಿದೆ ಎಂದರು. ಗೀತ ಮಂದಿರ ರಸ್ತೆಯಲ್ಲಿ ನಿರ್ಮಾಣವಾಗಿರುವ ಭವನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮಹಾಸಭಾದ ಅಧ್ಯಕ್ಷ ಆರ್.ಪಿ.ರವಿಶಂಕರ್, ಪದಾಧಿಕಾರಿಗಳು ಉಪಸ್ಥಿತರಿದ್ದರು. ಕಲಾ ಮಂದಿರದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ರಾಜ್ಯದ 18 ಜಿಲ್ಲೆಗಳಿಂದ ಆರ್ಯವೈಶ್ಯ ಸಮುದಾಯದವರು ಭಾಗವಹಿಸಿದ್ದರು. ಮಕ್ಕಳು ರಾಮಾಯಣ ವನ್ನು ನೃತ್ಯರೂಪಕದ ಮೂಲಕ ಪ್ರದರ್ಶಿಸಿ, ಗಮನ ಸೆಳೆದರು.



ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಯುವಕರ ಸಂಘ (ಪೌರ ಕಾರ್ಮಿಕ)ದ ವತಿಯಿಂದ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿ, ಕಾಂಗ್ರೆಸ್ ಪಕ್ಷದ ಯುವ ಮುಖಂಡ ಎಂ.ಪಳನಿಸ್ವಾಮಿಗೆ ಅಧಿಕಾರೇತರ ನಿಗಮ–ಮಂಡಳಿಗಳಲ್ಲಿ ಸೂಕ್ತ ಸ್ಥಾನಮಾನ ಕಲ್ಪಿಸುವಂತೆ ಸರ್ಕಾರವನ್ನು ಒತ್ತಾಯಿಸಲು ನಿರ್ಣಯ ಕೈಗೊಳ್ಳಲಾಯಿತು. ಈ ವೇಳೆ ನಿರ್ಣಯವನ್ನು ಬೆಂಬಲಿಸಿ, ಸರ್ಕಾರವನ್ನು ಒತ್ತಾಯಿಸಲು ಕೋರಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್‌ಗೆ ಮನವಿ ಪತ್ರ ನೀಡಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಮೇಯರ್ ಪುರುಷೋತ್ತಮ್, ನಾಗರತ್ನ ಮಂಜುನಾಥ್, ಮುರುಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಭಾರತದಲ್ಲಿ ಸಂಶೋಧನೆಗೆ ಹೆಚ್ಚು ಆದ್ಯತೆ ನೀಡಿಲ್ಲ: ಪ್ರೊ.ಸಿದ್ದೇಗೌಡ



ಮೈಸೂರು,ಜೂ.25 (ಎಂಟಿವೈ)– ಭಾರತದಲ್ಲಿ ಸಂಶೋಧನೆಗೆ ಹೆಚ್ಚಿನ ಗಮನ ನೀಡದ ಕಾರಣ ವಿಶ್ವದ 100 ವಿಶ್ವವಿದ್ಯಾನಿಲಯಗಳ ಪಟ್ಟಿಯಲ್ಲಿ ದೇಶದ ಒಂದೇ ಒಂದು ವಿಶ್ವವಿದ್ಯಾನಿಲಯವೂ ಸೇರಿಲ್ಲ ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಕರ್ನಲ್ ಪ್ರೊ ವೈ.ಎಸ್.ಸಿದ್ದೇಗೌಡ ವಿಷಾದಿಸಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಜೆಎಸ್‌ಎಸ್ ಕಾಲೇಜು ಹಾಗೂ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಸಂಶೋಧನಾ ವಿಧಾನ' ಕುರಿತ ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ದೇಶದುದ್ದಗಲಕ್ಕೂ ಸಂಶೋಧನೆಗೆ ನೀಡಬೇಕಾದ ಮಹತ್ವವನ್ನು ಯಾವುದೇ ವಿಶ್ವವಿದ್ಯಾನಿಲಯಗಳೂ ನೀಡುತ್ತಿಲ್ಲ. ಇದರಿಂದ ಪರಿಣಾಮಕಾರಿ ಸಂಶೋಧನೆಗಳು ನಡೆಯುತ್ತಿಲ್ಲ. ಭಾರತದ ಜಿಡಿಪಿಯಲ್ಲಿ ಕೇವಲ ಶೇ.1.77ರಷ್ಟನ್ನು ಸಂಶೋಧನೆ ಮತ್ತು ಅಭಿವೃದ್ಧಿಗೆ ಬಳಸಲಾಗುತ್ತದೆ. ಆದರೆ, ನಿಯಮಾನುಸಾರ ಶೇ.6ರಷ್ಟು ಹಣವನ್ನು ಸಂಶೋಧನೆಗೆ ಬಳಸಲು ಅವಕಾಶವಿದೆ. ಆದರೂ ಸಂಶೋಧನೆಗೆ ಆದ್ಯತೆ ನೀಡುತ್ತಿಲ್ಲ ಎಂದರು.

ಭಾರತದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಗುಣಮಟ್ಟದ ಸಂಶೋಧನೆ ನಡೆಸಲು ಮುಂದಾಗದ ಕಾರಣ ಕೇವಲ ಶೇ.5.5ರಿಂದ 6ರಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗ ಗಿಟ್ಟಿಸಿಕೊಳ್ಳಲು ಸಫಲರಾಗುತ್ತಿದ್ದಾರೆ. ಅಮೆರಿಕದಲ್ಲಿ ವಿದ್ಯಾರ್ಥಿಗಳು ಸಂಶೋಧನೆ ನಡೆಸುವಾಗ ಫೀಲ್ಡ್‌ಗೆ ಇಳಿದು ಸಂಶೋಧನೆ ಮಾಡುತ್ತಾರೆ. ಆ ದೇಶದಲ್ಲಿನ ವಿದ್ಯಾರ್ಥಿಗಳು ಮಾಡುವ ಸಂಶೋಧನೆಗೆ ಪೇಟೆಂಟ್ ಪಡೆದುಕೊಳ್ಳುತ್ತಾರೆ. ಆದರೆ, ಭಾರತದಲ್ಲಿ ಸಂಶೋಧನೆ ಮಟ್ಟ ಹೇಗಿರುತ್ತದೆ ಎಂದು ಎಲ್ಲರೂ ಅವಲೋಕಿಸಬೇಕು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ಪರಿಸ್ಥಿತಿಯನ್ನು ಆತ್ಮವಿಶ್ವಾಸದಿಂದ ಎದುರಿಸಲು ಶಿಸ್ತು, ಸಾಮರ್ಥ್ಯವರ್ಧನೆ, ಸಂವಹನ, ನಿರರ್ಗಳ ಮಾತು, ಮುಕ್ತ ಆಯ್ಕೆ ಮತ್ತು ಮೌಲ್ಯ ಅಭ್ಯಾಸಗಳ ಮೂಲಕ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಿ.ಆನಂದ್, ಪ್ರಾಂಶುಪಾಲ ಎಂ.ಪಿ. ವಿಜಯೇಂದ್ರಕುಮಾರ್ ಇನ್ನಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.6.2023 ಸೋಮವಾರ, ಮಳೆ ನಕ್ಷತ್ರ: ಆರಿದ್ರಾ 22.06.2023ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಉತ್ತರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9ರಿಂದ ರುದ್ರ ಹೋಮ, ಸಂಜೆ 6 ಗಂಟೆಯಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀಶಂಕರ ಪ್ರಾರ್ಥನಾ ಮಂದಿರ.
- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** ಶ್ರೀ ಮಹಾವಾರಾಹಿ ಗುಪ್ತ (ಆಷಾಢ) ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ರಿಂದ ಶ್ರೀ ದಶವಾರಾಹಿ ಹೋಮ ಮತ್ತು ಶತ್ರು ಸ್ತಂಭನ ಕಾರಿಣಿ, ಶ್ರೀ ಬಗಳಾಮುಖಿ ಹೋಮ, ಶ್ರೀ ಲಘು ವಾರಾಹಿ, ಶ್ರೀ ತಿರಸ್ಕಾರಿಣಿ ವಾರಾಹಿ, ಶ್ರೀಸ್ವಪ್ನ ವಾರಾಹಿ, ಶ್ರೀಧೂಮ್ರ ವಾರಾಹಿ, ಶ್ರೀ ಕಿರಾತ ವಾರಾಹಿ, ಶ್ರೀ ಅಶ್ವರೂಢ ವಾರಾಹಿ, ಶ್ರೀವಾರಾಹಿ ಪರಮೇಶ್ವರಿ, ಶ್ರೀ ಶತ್ರುಸಂಹಾರ ವಾರಾಹಿ, ಮಹಾವಾರಾಹಿ ಆವರಣಾಂಗ ಹೋಮ ಮತ್ತು ಶ್ರೀ ವನದುರ್ಗಾ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್ ಆವರಣ, ಜಯಲಕ್ಷ್ಮಿಪುರಂ.
- **ಉತ್ತರಾದಿಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಪಂಡಿತ್ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ ಮಠ, ಅಗ್ರಹಾರ, ಸಂಜೆ 6.30ರಿಂದ.
- **ಶ್ರೀಗುರು ರಾಘವೇಂದ್ರ ಸೇವಾ ಟ್ರಸ್ಟ್:** ಪಂಡಿತ್ ಶ್ರೀಕಾಂತಾಚಾರ್ಯ ಮುಕ್ಕುಂದಿ ಅವರಿಂದ ಭಗವದ್ಗೀತೆ ಪ್ರವಚನ–ಅಧ್ಯಾಯ 10 ಕುರಿತು ಉಪನ್ಯಾಸ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ ಸಂಜೆ 5ರಿಂದ.
- **ಕೋಟೆ ತ್ರಿನೇಶ್ವರ ದೇವಸ್ಥಾನ:** ಗಿರಿಜಾ ಕಲ್ಯಾಣ ಮಹೋತ್ಸವ, ಹಗಲು ರಾತ್ರಿ ಔಪಾಸನೆ, ಉಂಯಾಲೋತ್ಸವ, ಸ್ಥಳ: ದೇವಸ್ಥಾನ, ಕೋಟೆ ಆವರಣ, ಬೆಳಗ್ಗೆಯಿಂದ.
- **ದಿಗಂಬರ ಜೈನ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ:** ಆಷಾಢ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಉದ್ಘಾಟನೆ: ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಲತಾ ಸುದರ್ಶನ್, ಅಧ್ಯಕ್ಷತೆ: ಶ್ರೀದಿಗಂಬರ ಜೈನ ಸಮಾಜದ ಅಧ್ಯಕ್ಷ ಎಸ್.ಡಿ.ಮಹೇಶ್ ಪ್ರಸಾದ್, ಮೈಸೂರು ವಿವಿ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಪ್ರಾಧ್ಯಾಪಕ ಡಾ.ಅಭಿಜಿತ್ ಜೈನಶಾಸ್ತ್ರಿ ಅವರಿಂದ ಪ್ರವಚನ, ವಿಷಯ: ಗಾಥ 675 ರಿಂದ 600, ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 6.45ರಿಂದ.
- **ಸುಯೋಗ ಆಸ್ಪತ್ರೆ, ಸುಯೋಗ್ ಸಮೂಹ ಶಿಕ್ಷಣ ಸಂಸ್ಥೆಗಳು:** ಅಂತಾರಾಷ್ಟ್ರೀಯ ಮಾದಕ ದ್ರವ್ಯ ಮತ್ತು ಅಕ್ರಮ ಕಳ್ಳಸಾಗಾಣೆ ವಿರೋಧಿ ದಿನ, ಉದ್ಘಾಟನೆ: ಪೊಲೀಸ್ ಕಮಿಷನರ್ ಬಿ.ರಮೇಶ್ ಬಾನೋತ್, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಸಂಜೆ 4 ಗಂಟೆಗೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಕಣ್ಣಿನ ಅಲರ್ಜಿ' ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಹೆಲಿಪ್ಯಾಡ್ ಹತ್ತಿರ, ಆಲನಹಳ್ಳಿ, ಬೆಳಗ್ಗೆ 9.30ರಿಂದ.
- **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ಜಗದ್ಗುರು ರಾಜಗುರು ತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣಾರ್ಥ ಅಂತರ ಕಾಲೇಜು ಪುರುಷರ ವಾಲಿಬಾಲ್, ಥ್ರೋಬಾಲ್ ಮತ್ತು ಬಾಲ್ ಬ್ಯಾಡ್ಮಿಂಟನ್ ಹಾಗೂ ಮಹಿಳೆಯರ ಥ್ರೋಬಾಲ್ ಪಂದ್ಯಾವಳಿ, ಕೃಪಾಶೀರ್ವಾದ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಉದ್ಘಾಟನೆ: ಮೈಸೂರು ವಿವಿ ದೈಹಿಕ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ, ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮುಗೇಶಪ್ಪ, ಸ್ಥಳ: ಕಾಲೇಜಿನ ಆವರಣ, ಊಟಿ ರಸ್ತೆ, ಬೆಳಗ್ಗೆ 9.30ಕ್ಕೆ
- **ಮೈಸೂರು ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ತು, ಶೇಷಾದ್ರಿಪುರಂ ಪದವಿ ಕಾಲೇಜು, ಕನ್ನಡ ವಿಭಾಗ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ:** 2023–24ನೇ ಸಾಲಿನ ದತ್ತಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ದತ್ತಿ ಉಪನ್ಯಾಸ ಕಾರ್ಯಕ್ರಮ, ದತ್ತಿ: ಗೌಡರ ಸಿದ್ದಪ್ಪ ಮತ್ತು ಶರಣೆ ಮರಮ್ಮ ದತ್ತಿ, ಸ್ಥಳ: ಶೇಷಾದ್ರಿಪುರಂ ಪದವಿ ಕಾಲೇಜು, ಹೆಬ್ಬಾಳು, ಬೆಳಗ್ಗೆ 10.30ಕ್ಕೆ.
- **ಅಖಿಲ ಕರ್ನಾಟಕ ಒಕ್ಕಲಿಗರ ಸಂಘ, ಮೈಸೂರು ಜಿಲ್ಲಾ ಘಟಕ:** ನಾಡಪ್ರಭು ಶ್ರೀ ಕೆಂಪೇಗೌಡರ 514ನೇ ಜಯಂತಿ, ದಿವ್ಯ ಸಾನ್ನಿಧ್ಯ: ಯೋಗ ನರಸಿಂಹ ದೇವಸ್ಥಾನದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ, ಪುಷ್ಪಾರ್ಚನೆ: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ರಾಜ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಸ್ಥಳ: ಅಗ್ರಹಾರ ಸರ್ಕಲ್, ಬೆಳಗ್ಗೆ 11.30ಕ್ಕೆ.
- **ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭೆ:** ನಾಡಪ್ರಭು ಕೆಂಪೇಗೌಡರ 514ನೇ ಜಯಂತಿ, ಉದ್ಘಾಟನೆ: ಸಂಘದ ಗೌರವ ಅಧ್ಯಕ್ಷರಾದ ಸಾಹಿತಿ ಡಾ.ಸಿಪಿಕೆ, ಪುಷ್ಪಾರ್ಚನೆ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಡ್ಡಿಕೆರೆ ಗೋಪಾಲ್, ಸ್ಥಳ: ಸಂಘದ ಕಚೇರಿ ಆವರಣ, ವಿನೋಬ ರಸ್ತೆ, ಶಿವರಾಂಪೇಟೆ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ– ಡಾ. ಶ್ರೀ ರಾಂಭಟ್, 7.15 ಭಾವಗೀತೆಗಳು: ನಾಗಚಂದ್ರಿಕಾ ಭಟ್, ಪುತ್ತೂರು ನರಸಿಂಹ ನಾಯಕ್, ಮೈಸೂರು ಅನಂತಸ್ವಾಮಿ, 9.05 ವಸುಧೈವ ಕುಟುಂಬಕಂ– ಭಾರತ G20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮ ಸಾಹಿತಿ ಸಿದ್ಧಲಿಂಗಯ್ಯ ಅವರೊಂದಿಗೆ ಡಾ. ಮೈಸೂರು ಉಮೇಶ್ ಅವರು ನಡೆಸಿದ ಸವಾದದ 2ನೇ ಭಾಗ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 10.00 ಲಯ ಸಂಭ್ರಮ, ಮೃದಂಗದ ಪ್ರಾಚೀನತೆ, ಇತಿಹಾಸ ಮತ್ತು ಅದರ ಪರಂಪರೆ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ದೇವರ ನಾಮ: ಮದ್ವೇಶ್ ವೈ.ಎನ್, 12.45 ನಮ್ಮ ಆರೋಗ್ಯ: ವಿಶ್ವ ಮಾದಕ ವಸ್ತುಗಳ ಮತ್ತು ಔಷಧಗಳ ದುರ್ಬಳಕೆ ಹಾಗೂ ಕಳ್ಳಸಾಗಾಣಿಕೆ ಯ ವಿರೋಧಿ ದಿನಾಚರಣೆಯ ಸಂದೇಶ ಮತ್ತು ಮಹತ್ವ ಕುರಿತು ಡಾ.ಸುಧಾ ನಾಯಕ್ ಮತ್ತು ಡಾ. ಬಾನು ಬಿ.ಎಂ. ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ– ಡಾ. ಶಿಲ್ಪಾ ಹೆಗಡೆ, 3.00 ರಾಜಲಕ್ಷ್ಮಿ ರಾವರಾವ್– ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ; ಡಾಕ್ಟರ್ ಸಮಯ: ವಿಷಯ–ಮಹಿಳೆಯರ ಆಹಾರ, ಪೋಷಣೆ ಮತ್ತು ಆರೋಗ್ಯ. ಭಾಗವಹಿಸುವವರು– ಡಾ. ಅಸ್ನಾ ಉರೂಜ್, ಪ್ರಸ್ತುತಿ– ಕೆ.ಬಿ.ಮೀನಾ, 4.45 'ಹಿಂದಿ ಪಾಠ' ಪ್ರಸ್ತುತಿ–ಅನುರಾಧಾ ಮೂರ್ತಿ. 6.55 ಕೃಷಿರಂಗ: ಕಿಸಾನ್ ವಾಣಿ– ಮೈಸೂರು ಜಿಲ್ಲೆಯ ಕೃಷಿಕರಿಗೆ ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಬಿ.ಎಸ್.ಚಂದ್ರಶೇಖರ್, ಜಿಲ್ಲಾ ಜಂಟಿ ಕೃಷಿ ನಿದೇಶಕರು, ಪ್ರಸ್ತುತಿ– ಎನ್. ಕೇಶವಮೂರ್ತಿ. **ರಾತ್ರಿ:** 9.30 ಹಳ್ಳಿ ಹಾಡು: ಭಾಗವಹಿಸುವವರು ಹಿರೇನಂದಿ ಗ್ರಾಮದ ಚಾಮಮ್ಮ ಮತ್ತು ಲಕ್ಷ್ಮಮ್ಮ, 10.00 ನಾಟಕ, 10.30 ಸವಿನೆನಪು.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 26 ಸೋಮವಾರ 2023

ಸಂಪುಟ: 44 | ಸಂಚಿಕೆ: 71 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ - ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲಿಂಗಾಂಬುದಿಕೆರೆ ಆವರಣದ ಮೈಸೂರಿನ ಮೊದಲ
ಬೊಟಾನಿಕಲ್ ಗಾರ್ಡನ್‌ಗೆ ಒಳಚರಂಡಿ ನೀರಿನ ಶಾಪ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು, ಜೂ.25- ಮೈಸೂರಿನ ಲಿಂಗಾಂಬುದಿ ಕೆರೆ ಆವರಣದಲ್ಲಿ ನೂತನವಾಗಿ ನಳನಳಿಸುತ್ತಿರುವ ಬೊಟಾನಿಕಲ್ ಗಾರ್ಡನ್ ಉದ್ಘಾಟನೆಗೂ ಮುನ್ನವೇ ಒಳಚರಂಡಿ ನೀರು ಗಾರ್ಡನ್‌ಗೆ ಹೊಂದಿಕೊಂಡಂತಿರುವ ಕೊಳಕ್ಕೆ ತುಂಬಿಕೊಂಡಿದ್ದು, ವಾತಾವರಣವನ್ನು ಹದಗೆಡಿಸುತ್ತಿದೆ. ತಮಿಳುನಾಡಿನ ಊಟಿಯ ಬೊಟಾನಿಕಲ್ ಗಾರ್ಡನ್ ಹೊರತುಪಡಿಸಿದರೆ, ಮೈಸೂರಿನ ಮೊಟ್ಟ ಮೊದಲ ಬೊಟಾನಿಕಲ್ ಗಾರ್ಡನ್ ಪ್ರವಾಸಿಗರ ಕಣ್ಮನ ಸೆಳೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ತೋಟಗಾರಿಕಾ ಇಲಾಖೆ ಕಳೆದ 3-4 ವರ್ಷದಿಂದ ಬೊಟಾನಿಕಲ್ ಗಾರ್ಡನ್ ನಿರ್ಮಾಣಕ್ಕೆ ಸತತವಾಗಿ ಶ್ರಮಿಸಿ, ಸುಂದರವಾದ ಹಾಗೂ ನಯನ ಮನೋಹರವಾದ ಗಾರ್ಡನ್ ನಿರ್ಮಿಸಿದ್ದು, ಅದರಲ್ಲಿ 300ಕ್ಕೂ ಹೆಚ್ಚು ವೈವಿಧ್ಯಮಯ ಗಿಡ-ಮರಗಳನ್ನು ಬೆಳೆಸಿದೆ. ನೈಜ ವಾತಾವರಣ, ನೈಸರ್ಗಿಕವಾಗಿರುವ ಲಿಂಗಾಂಬುದಿಕೆರೆ ಹಾಗೂ ಕಿರು ಅರಣ್ಯ ಪ್ರದೇಶದೊಂದಿಗೆ ನಿರ್ಮಾಣವಾಗಿರುವ ಬೊಟಾನಿಕಲ್ ಗಾರ್ಡನ್ ಮೈಸೂರಿನ ಮತ್ತೊಂದು ಪ್ರವಾಸಿ ತಾಣವಾಗಿಯೂ ಮಾರ್ಪಡುವ ಎಲ್ಲಾ ಲಕ್ಷಣ ಹೊಂದಿದೆ. ▶ 6ನೇ ಪುಟಕ್ಕೆ



ಲಿಂಗಾಂಬುದಿಕೆರೆಯ ಬೊಟಾನಿಕಲ್ ಗಾರ್ಡನ್‌ನ ವಿಹಂಗಮ ನೋಟ.

● ಉದ್ಘಾಟನೆಗಾಗಿ ನಳನಳಿಸುತ್ತಿರುವ ಗಾರ್ಡನ್
● ನೈಸರ್ಗಿಕ ಪರಿಸರದಲ್ಲಿ ತಲೆ ಎತ್ತಿದ ಉದ್ಯಾನ

ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಲಿಂಗಾಂಬುದಿ ಕೆರೆ ಅಭಿವೃದ್ಧಿಪಡಿಸಲಾಗಿದೆ. 1828ರಲ್ಲಿ ಮಹಾರಾಣಿ ಕೃಷ್ಣವಿಲಾಸ ಲಿಂಗಾಜಮ್ಮಣ್ಣಿ ನೆನಪಿಗಾಗಿ ಕೆರೆ ನಿರ್ಮಿಸಿದರು. ಇದು 250 ಎಕರೆ ವಿಸ್ತೀರ್ಣ ಹೊಂದಿದ್ದು, ಇದರಲ್ಲಿ ಲಿಂಗಾಂಬುದಿ ಸರ್ವೆ ನಂ.23ರಲ್ಲಿ 51.3 ಎಕರೆ, ದಟ್ಟಗಳ್ಳಿ ಸರ್ವೆ ನಂ.82ರಲ್ಲಿ 136.11 ಎಕರೆ, ಅಯ್ಯಜ್ಜಯ್ಯನಹುಂಡಿ ಸರ್ವೆ ನಂ.11ರಲ್ಲಿ 28.23 ಎಕರೆ ಒಳಗೊಂಡಿದೆ. ಕೆರೆಯ 150 ಎಕರೆ ಪ್ರದೇಶ ನೀರಿನಿಂದ ಆವೃತವಾಗಿದ್ದರೆ, ಉಳಿದ 100 ಎಕರೆ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶ ಎಂದು ಘೋಷಿಸಲಾಗಿದೆ.



ಲಿಂಗಾಂಬುದಿಕೆರೆಗೆ ಒಳಚರಂಡಿ ನೀರು ಸೇರುತ್ತಿರುವುದು.

ಗ್ಯಾರಂಟಿ ಈಡೇರಿಸದಿದ್ದರೆ ಅಧಿಕಾರ ಬಿಟ್ಟು ತೊಲಗಿ



ಬೆಂಗಳೂರು,ಜೂ.25-ಕಾಂಗ್ರೆಸ್ ಸರ್ಕಾರ ಕೊಟ್ಟ ಮಾತಿನಂತೆ ಎಲ್ಲಾ 5 ಭರವಸೆಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಬೇಕು. ಇಲ್ಲದಿದ್ದರೆ, ಅಧಿಕಾರ ಬಿಟ್ಟು ತೊಲಗಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಾಂಗ್ರೆಸ್‌ಗೆ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಸರ್ಕಾರ ಎಲ್ಲಾ ಐದು ಭರವಸೆಗಳನ್ನು ಈಡೇರಿಸಬೇಕು. ಇಲ್ಲವೇ ಅಧಿಕಾರವನ್ನು ತ್ಯಜಿಸಬೇಕೆಂದು ಹೇಳಿದರು.

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಸೋಲಿಗೆ ಕಾಂಗ್ರೆಸ್‌ನ ಭರವಸೆಗಳೇ ಕಾರಣ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲೆ ವಿಶ್ವಾಸವಿಟ್ಟು ಜನರು ಮತ ಹಾಕಿದ್ದಾರೆ. ಗ್ಯಾರಂಟಿ ಯೋಜನೆಗಳ ಜಾರಿಗಾಗಿ ಇದೀಗ ಕಾಯುತ್ತಿದ್ದಾರೆ. ಕಾಂಗ್ರೆಸ್‌ನವರು ನುಡಿದಂತೆ ಗ್ಯಾರಂಟಿಗಳನ್ನು ಕೊಡಲಿ. ಉಚಿತ ಗ್ಯಾರಂಟಿ ಕೊಡುವರೆಗೂ ಬಿಜೆಪಿಯಿಂದ ಹೋರಾಟ ಮಾಡಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು. ▶ 9ನೇ ಪುಟಕ್ಕೆ

> “ ಚುನಾವಣೆಯಲ್ಲಿ ಬಿಜೆಪಿ ಸೋಲಾಗಲು ಅವರು ಮನೆ ಮನೆಗೆ ಹೋಗಿ ಕೊಟ್ಟ ಗ್ಯಾರಂಟಿ ಕಾರ್ಡ್ ಕಾರಣ. ಜನ ಅದನ್ನು ನಂಬಿ ಬಿಟ್ಟರು. ಬಿಜೆಪಿ ಕಾರ್ಯಕರ್ತರು ಎದೆಗುಂದಬೇಕಾಗಿಲ್ಲ, ಮತ್ತೊಮ್ಮೆ ಎದ್ದೇಳ ಬೇಕಾಗಿದೆ. ಸುಳ್ಳು ಭರವಸೆಗಳ ವಿರುದ್ಧ ಆಂದೋಲನ ಮಾಡಬೇಕಾಗಿದೆ. ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಗಳಿಸಬೇಕಾಗಿತ್ತು, ಅದು ಆಗಲಿಲ್ಲ. ಮುಂದಿನ ದಿನಗಳಲ್ಲಿ ಬಿಬಿಎಂಪಿ ಚುನಾವಣೆಯಲ್ಲಿ ಸ್ಪಷ್ಟ ಬಹುಮತದಲ್ಲಿ ಅಧಿಕಾರಕ್ಕೆ ಬರಬೇಕಿದೆ. ನಾವು ಎಲ್ಲರೂ ಆ ದಿಕ್ಕಿನಲ್ಲಿ ಪ್ರಯತ್ನಿಸಬೇಕು.
> -ಬಿ.ಎಸ್.ಯಡಿಯೂರಪ್ಪ, ಮಾಜಿ ಸಿಎಂ

ಪ್ರಧಾನಿ ಮೋದಿಗೆ ಈಜಿಪ್ಟ್‌ನ ಅತ್ಯುನ್ನತ
ಆರ್ಡರ್ ಆಫ್ ದಿ ನೈಲ್ ಪ್ರಶಸ್ತಿ



ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ ಈಜಿಪ್ಟ್‌ನ ಅತ್ಯುನ್ನತ 'ಆರ್ಡರ್ ಆಫ್ ದಿ ನೈಲ್' ಪ್ರಶಸ್ತಿಯನ್ನು ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಅಲ್-ಸಿಸಿ ಪ್ರದಾನ ಮಾಡಿದರು.

ಕೈರೋ, ಜೂ.25-ಪ್ರಧಾನಿ ನರೇಂದ್ರ ಮೋದಿ ಅವರಿಗೆ ಭಾನುವಾರ ಈಜಿಪ್ಟ್‌ನ ಅತ್ಯುನ್ನತ 'ಆರ್ಡರ್ ಆಫ್ ದಿ ನೈಲ್' ಪ್ರಶಸ್ತಿ ಪ್ರದಾನ ಮಾಡಲಾಯಿತು. ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಅಲ್-ಸಿಸಿ ತಮ್ಮ ದ್ವಿಪಕ್ಷೀಯ ಸಭೆಯ ಮೊದಲು ಮೋದಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಉಭಯ ನಾಯಕರು ತಮ್ಮ ಸಭೆಯಲ್ಲಿ ಮಹತ್ವದ ತಿಳುವಳಿಕೆ ಪತ್ರಗಳಿಗೆ (ಎಂಒಯು) ಸಹಿ ಹಾಕಿದರು. 1997ರ ನಂತರ ಈಜಿಪ್ಟ್‌ಗೆ ಭಾರತದ ಪ್ರಧಾನಿಯ ಮೊದಲ ಭೇಟಿ ಇದಾಗಿದೆ. ಶನಿವಾರ ಕೈರೋದಲ್ಲಿರುವ ದೇಶದ 11ನೇ ಶತಮಾನದ ಅಲ್-ಹಕೀಮ್ ಮಸೀದಿಗೆ ಮೋದಿ ಭೇಟಿ ನೀಡಿದರು. ಇದನ್ನು ಭಾರತದ ದಾವೂದಿ ಬೊಹ್ರಾ ಸಮುದಾಯದ ನೆರವಿನಿಂದ ಪುನರ್ ನಿರ್ಮಾಣ ಮಾಡಲಾಗಿದೆ. ಮೂರು ತಿಂಗಳ ಹಿಂದಷ್ಟೇ ಪೂರ್ಣಗೊಂಡ ಮಸೀದಿಯನ್ನು ನರೇಂದ್ರ ಮೋದಿ ಅವರಿಗೆ ತೋರಿಸಲಾಯಿತು. ಅಲ್ ಹಕೀಮ್ ಕೈರೋದಲ್ಲಿನ ನಾಲ್ಕನೇ ಅತ್ಯಂತ ಹಳೆಯ ಮಸೀದಿ ಮತ್ತು ಈಜಿಪ್ಟ್ ರಾಜಧಾನಿಯಲ್ಲಿ ನಿರ್ಮಿಸಲಾದ ಎರಡನೇ ಫಾತಿಮಿಡ್ ಮಸೀದಿಯಾಗಿದೆ. ಇದು 13,560 ಚದರ ಮೀಟರ್‌ಗಳಷ್ಟು ವಿಸ್ತೀರ್ಣವನ್ನು ಹೊಂದಿದೆ.

ನಂತರ, ಹೆಲಿಯೊಪೊಲಿಸ್ ಕಾಮನ್‌ವೆಲ್ತ್ ಯುದ್ಧದ ಸ್ಮಶಾನಕ್ಕೂ ಭೇಟಿ ನೀಡಿದ ಪ್ರಧಾನ ಮಂತ್ರಿ, ಮೊದಲ ವಿಶ್ವಯುದ್ಧದ ಸಮಯದಲ್ಲಿ ಈಜಿಪ್ಟ್ ಮತ್ತು ಪ್ಯಾಲೆಸ್ತೀನ್‌ನಲ್ಲಿ ವೀರಾವೇಶದಿಂದ ಹೋರಾಡಿ ತಮ್ಮ ಪ್ರಾಣವನ್ನು ಅರ್ಪಿಸಿದ ಭಾರತೀಯ ಸೈನಿಕರಿಗೆ ನರೇಂದ್ರ ಮೋದಿ ಗೌರವ ಸಲ್ಲಿಸಿದರು.

ಈ ಸ್ಮಾರಕವನ್ನು ಮೊದಲ ವಿಶ್ವ ಸಮರದಲ್ಲಿ ಈಜಿಪ್ಟ್ ಮತ್ತು ಪ್ಯಾಲೆಸ್ತೀನ್‌ನಲ್ಲಿ ಹೋರಾಡಿ ಮಡಿದ ಸುಮಾರು 4,000 ಭಾರತೀಯ ಸೈನಿಕರ ಸ್ಮರಣಾರ್ಥ ನಿರ್ಮಿಸಲಾಗಿದೆ.

ರುದ್ರಪ್ರಯಾಗದಲ್ಲಿ ಧಾರಾಕಾರ ಮಳೆ: ಕೇದಾರನಾಥ ಯಾತ್ರೆ ತಾತ್ಕಾಲಿಕ ಸ್ಥಗಿತ



ಡೆಹ್ರಾಡೂನ್: ಭಾರಿ ಮಳೆ ಹಿನ್ನೆಲೆಯಲ್ಲಿ ಪವಿತ್ರ ಕೇದಾರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಈ ಬಗ್ಗೆ ರುದ್ರಪ್ರಯಾಗ ಜಿಲ್ಲಾ ಮ್ಯಾಜಿಸ್ಟ್ರೇಟ್ ಮಯೂರ್ ದೀಕ್ಷಿತ್ ಮಾಹಿತಿ ನೀಡಿದ್ದು, ರುದ್ರಪ್ರಯಾಗ ಜಿಲ್ಲೆಯಲ್ಲಿ ಭಾರೀ ಮಳೆಯಾಗುತ್ತಿರುವ ಕಾರಣ ಸೋನ್‌ಪ್ರಯಾಗದಲ್ಲಿ ಕೇದಾರನಾಥ ಯಾತ್ರೆಯನ್ನು ಮುಂದಿನ ಆದೇಶದವರೆಗೆ ▶ 9ನೇ ಪುಟಕ್ಕೆ

ಮಹಿಳಾ ಪ್ರಯಾಣಿಕರೊಂದಿಗೆ ದುರ್ವರ್ತನೆ ತೋರಿದರೆ ಶಿಸ್ತು ಕ್ರಮ

ಚಾಲಕ, ನಿರ್ವಾಹಕರಿಗೆ ಎಚ್ಚರಿಕೆ

ಬೆಂಗಳೂರು, ಜೂ.25- ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆ ಜೂನ್ 11ರಂದು ಜಾರಿಗೆ ಬಂದಿದ್ದು, ಮಹಿಳೆಯರು ಸಂತಸದಿಂದ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾರೆ. ಯೋಜನೆ ಜಾರಿಯಾದ ಬಳಿಕ ಮಹಿಳೆಯರೊಂದಿಗೆ ಬಸ್‌ಗಳ ನಿರ್ವಾಹಕರು, ಚಾಲಕರು ದುರ್ವರ್ತನೆ ತೋರುತ್ತಿರುವ ಘಟನೆಗಳು ವರದಿಯಾಗುತ್ತಲೇ ಇದ್ದು, ಈ ಕುರಿತು ಸಾರಿಗೆ ಇಲಾಖೆ



ಎಚ್ಚರಿಕೆ ನೀಡಿದೆ. ಉಚಿತವಾಗಿ ಪ್ರಯಾಣಿಸುವ ಮಹಿಳೆಯರೊಂದಿಗೆ ಅಗೌರವದಿಂದ ನಡೆದುಕೊಂಡ ದೂರುಗಳು ಬಂದಿದ್ದೇ ಆದರೆ, ಅಂತರ ಬಸ್ ನಿರ್ವಾಹಕ ಅಥವಾ ಚಾಲಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸಾರಿಗೆ ಇಲಾಖೆ ▶ 9ನೇ ಪುಟಕ್ಕೆ

ಬೆಂಗಳೂರು-ಮೈಸೂರು ದಶಪಥ ಹೆದ್ದಾರಿಯಲ್ಲಿ ಮುಂದುವರೆದ ಅಪಘಾತ ಸರಣಿ
ಅಪರಿಚಿತ ವಾಹನಕ್ಕೆ ಬೈಕ್ ಡಿಕ್ಕಿ: ಇಬ್ಬರ ದುರ್ಮರಣ

ಮದ್ದೂರು, ಜೂ.25- ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಸರಣಿ ಅಪಘಾತ ಮುಂದುವರೆದಿದ್ದು, ಚಲಿಸುತ್ತಿದ್ದ ಅಪರಿಚಿತ ವಾಹನಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಭಾನುವಾರ ಬೆಳಗ್ಗೆ ಮದ್ದೂರು ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜರುಗಿದೆ. ಬೆಂಗಳೂರಿನ ಖಾಸಗಿ ಕಂಪನಿ ಉದ್ಯೋಗಿ, ಕೋಲಾರ ಜಿಲ್ಲೆ ಮುಳಬಾಗಿಲು ನಿವಾಸಿ ಮಣಿ(25), ಕೊಪ್ಪಳ ಮೂಲದ ಜನಾರ್ಧನ ಪೂಜಾರಿ(22) ಸಾವನ್ನಪ್ಪಿದವರು. ಪಟ್ಟಣದ ಸಾರಿಗೆ ಬಸ್ ನಿಲ್ದಾಣ ಬಳಿಯ ಮೇಲ್ಸೇತುವೆ (ಫ್ಲೇ ಓವರ್) ಯಲ್ಲಿ ಚಲಿಸುತ್ತಿದ್ದ ಅಪರಿಚಿತ ವಾಹನಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡ ಮಣಿ ಸ್ಥಳದಲ್ಲೇ ಸಾವನ್ನಪ್ಪಿದರೇ, ▶ 9ನೇ ಪುಟಕ್ಕೆ



ಭೀಕರ ರಸ್ತೆ ಅಪಘಾತದಲ್ಲಿ ಕಾಲು ಕಳೆದುಕೊಂಡ ಪಾರ್ವತಮ್ಮ ರಾಜ್‌ಕುಮಾರ್ ಸಂಬಂಧಿ ಸೂರಜ್





ಸೂರಜ್

ಚಾಮರಾಜನಗರ,ಜೂ.25-ಸ್ಯಾಂಡಲ್‌ವುಡ್‌ನಲ್ಲಿ ನಟನಾಗಿ ಎಂಟ್ರಿಗೆ ಸಕಲ ಸಿದ್ಧತೆ ಮಾಡಿಕೊಂಡಿದ್ದ ಪಾರ್ವತಮ್ಮ ರಾಜ್‌ಕುಮಾರ್ ಅವರ ತಮ್ಮನ ಮಗನಾದ ಸೂರಜ್‌ಗೆ ತೆರಳುತ್ತಿದ್ದ ಬೈಕ್‌ಗೆ ನಂಜನಗೂಡಿನ ಬಳಿ ಲಾರಿಯೊಂದು ಡಿಕ್ಕಿ ಹೊಡೆದಿದೆ.

ಶನಿವಾರ ಸಂಜೆ ನಾಲ್ಕು ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದ್ದು, ಸೂರಜ್ ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸೂರಜ್ ಬೈಕ್‌ನಲ್ಲಿ ಊಟಿಗೆ ತೆರಳುತ್ತಿದ್ದ ವೇಳೆ ಅಪಘಾತ ಸಂಭವಿಸಿ, ಅವರ ಕಾಲಿನ ಮೇಲೆ ಟಿಪ್ಪರ್ ಹರಿದಿದೆ. ಹೀಗಾಗಿ, ಅವರ ಬಲಗಾಲು ಸಂಪೂರ್ಣ ನಜ್ಜುಗುಜ್ಜಾಗಿದೆ. ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಾಲಿಗೆ ತೀವ್ರತರವಾದ ಪೆಟ್ಟಾಗಿದ್ದರಿಂದ ವೈದ್ಯರು ಬಲಗಾಲನ್ನು ಕತ್ತರಿಸಿದ್ದಾರೆ ಎನ್ನಲಾಗಿದೆ. ಕನ್ನಡ ಚಿತ್ರರಂಗದಲ್ಲಿ ನಟನಾಗಬೇಕು ಎಂದು ಸೂರಜ್ ಕನಸು ಕಂಡಿದ್ದರು. ಕೆಲವು ಚಿತ್ರಗಳ ಶೂಟಿಂಗ್‌ನಲ್ಲೂ ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗಂಡ : ಲೇ ಎಲ್ಲಿಗೆ ಹೊರಟೆ ಇಷ್ಟು ಅರ್ಜೆಂಟಾಗಿ...!

ಪತ್ನಿ : ಪಕ್ಕದ್ಮನೆ ಪಂಕಜಾಗೆ ಮೈಸೂರ್‌ಪಾಕ್ ತಿನ್ಬೇಕು ಅನ್ನಿಸಿದೆಯಂತೆ... ಮೈಸೂರ್‌ಗೆ ಹೋಗಿ ಬರ್ತಿನಿ ರೀ... ಮನೆ ಕಡೆ ಜೋಪಾನ...!

ಮೈಸೂರು ಮಿತ್ರ

ಸೋಮವಾರ, 26 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಕೆಟ್ಟ ಅಭ್ಯಾಸ ಇರುವವನು ಬದಲಾಗಬಹುದು.
ಆದರೆ ಕೆಟ್ಟ ಆಲೋಚನೆ ಇರುವವನು ಎಂದಿಗೂ ಬದಲಾಗಲಾರ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳೆಯುವ ಸಿರಿ ಮೊಳಕೆಯಲ್ಲಿ...

ನಿಮ್ಮ ಪತ್ರಗಳು

ಹದಗೆಟ್ಟ ರಸ್ತೆ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನ ವಿಶ್ವೇಶ್ವರನಗರದ ವೀವರ್ಸ್ ಕಾಲೋನಿ ನಿವಾಸಿಗಳು ಹದಗೆಟ್ಟ ರಸ್ತೆಯಲ್ಲಿ ದಿನನಿತ್ಯ ಓಡಾಡುವಂತಾಗಿದೆ. ಮೂರು ವಾರಗಳ ಹಿಂದೆ ರಸ್ತೆಗಳಿಗೆ ಮಳೆ ನೀರು ಚರಂಡಿ ವ್ಯವಸ್ಥೆ ಕಲ್ಪಿಸುವ ಸಲುವಾಗಿ ರಸ್ತೆಗಳನ್ನು ಅಗೆದು ಹಾನಿಗೊಳಿಸಿದ್ದು, ಧೂಳು ಮತ್ತು ಕಲ್ಲುಗಳಿಂದ ತುಂಬಿರುವ ರಸ್ತೆಯಿಂದ ನಿವಾಸಿಗಳು ಹಾಗೂ ಸ್ಥಳೀಯ ಜನರು ಪ್ರತಿನಿತ್ಯ ಸಮಸ್ಯೆ ಎದುರಿಸುವಂತಾಗಿದೆ. ಮಳೆಯಿಂದ ಸಂಪೂರ್ಣ ಹದಗೆಟ್ಟಿರುವುದರಿಂದ ಮಕ್ಕಳು ಮತ್ತು ವೃದ್ಧರು ರಸ್ತೆಯಲ್ಲಿ ಓಡಾಡಲು ಹರಸಾಹಸ ಪಡಬೇಕಾಗಿದೆ. ಈ ಬಗ್ಗೆ ವಾರ್ಡ್ ಕಾರ್ಪೋರೇಟರ್ ಪ್ರಭುಮೂರ್ತಿ ಅವರಿಗೆ ದೂರು ನೀಡಿದರೂ ರಸ್ತೆಗಳು ಇನ್ನೂ ದುರಸ್ತಿಯಾಗಿಲ್ಲದ ಕಾರಣ ನಿವಾಸಿಗಳು ಹಾಗೂ ಸ್ಥಳೀಯ ಜನರು ಬೇಸರದ ಜೊತೆಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

-ಮೈಸೂರು ವಿಶ್ವೇಶ್ವರನಗರದ ವೀವರ್ಸ್ ಕಾಲೋನಿ ನಿವಾಸಿಗಳು

ಬೆಂಗಳೂರು-ಮೈಸೂರು ದಶಪಥ ಹೆದ್ದಾರಿಯಲ್ಲಿ ಪ್ರತಿದಿನ ಅಪಘಾತ

ಮಾನ್ಯರೆ,

ಕಳೆದ ಕೆಲ ತಿಂಗಳ ಹಿಂದೆಯಷ್ಟೇ ಸಾರ್ವಜನಿಕ ಸಂಚಾರಕ್ಕೆ ಭಾರೀ ನಿರೀಕ್ಷೆಯೊಂದಿಗೆ ಪ್ರಾರಂಭವಾದ ಬೆಂಗಳೂರು-ಮೈಸೂರು ದಶಪಥ ಹೆದ್ದಾರಿಯಲ್ಲಿ ಪ್ರತಿ ದಿನವೂ ಒಂದಲ್ಲಾ ಒಂದು ಅಪಘಾತಗಳು ಸಂಭವಿಸುತ್ತಿವೆ.

ಕಳೆದ ಕೆಲ ತಿಂಗಳಿಂದ, ಈ ಹೆದ್ದಾರಿಯಲ್ಲಿ 160 ಸಾವುಗಳು, 670 ಅಪಘಾತಗಳು ಸಂಭವಿಸಿವೆ. ಹೆಚ್ಚಿನ ಅಪಘಾತಗಳು ಚನ್ನಪಟ್ಟಣ-ರಾಮನಗರದ ನಡುವಿನ ಬೈಪಾಸ್ ರಸ್ತೆಯಲ್ಲಿ ಸಂಭವಿಸುತ್ತಿವೆ. ಅಪಘಾತಗಳು ಸಂಭವಿಸಲು ಮುಖ್ಯ ಕಾರಣಗಳೆಂದರೆ, ಎಲ್ಲೆಲ್ಲಿ ಎಷ್ಟು ವೇಗವಾಗಿ ಚಲಿಸಬೇಕೆಂಬ ವೇಗದ ಮಿತಿಯ ಫಲಕಗಳನ್ನು ಅಳವಡಿಸದೇ ಇರುವುದು, ಬೈಪಾಸ್ ರಸ್ತೆ ಬದಿಯಲ್ಲಿ ಸೂಚನಾ ಫಲಕಗಳು ಇಲ್ಲದೇ ಇರುವುದು, ಒಂದು ವೇಳೆ ಅಪಘಾತವಾಗಿ ಬದುಕುಳಿಯುವ ಸಾಧ್ಯತೆ ಇದ್ದರೂ ರಸ್ತೆಯಲ್ಲಿ ಎಲ್ಲೂ ವೈದ್ಯಕೀಯ ಚಿಕಿತ್ಸಾ ವ್ಯವಸ್ಥೆ ಇಲ್ಲದೇ ಇರುವುದು, ವಾಹನ ಚಾಲಕರು ಆಗಿಂದಾಗ್ಗೆ ಟ್ರಾಕ್‌ಗಳನ್ನು ಬದಲಿಸುವುದು.

ಅಚ್ಚರಿಯ ಸಂಗತಿ ಎಂದರೆ ಮೊದಲಿದ್ದ ಹಳೇಯ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಕಳೆದ ಐದು ವರ್ಷಗಳ ಸರಾಸರಿ ವರ್ಷಕ್ಕೆ 50 ರಿಂದ 60 ಸಾವುಗಳು ಸಂಭವಿಸಿದರೆ, 200 ರಿಂದ 250 ಸಣ್ಣಪುಟ್ಟ ಅಪಘಾತಗಳು ಮಾತ್ರ ಸಂಭವಿಸುತ್ತಿತ್ತು.

ಆತಂಕದ ವಿಷಯವೆಂದರೆ ಸಾವುಗಳು ಸಂಭವಿಸಿರುವುದು ಒಂದೇ ಕುಟುಂಬದ ಐವ್ವರು, ನಾಲ್ವರು, ಮೂವರು, ಹೀಗೆ ಇಡಿ ಕುಟುಂಬವೇ ಸಾವಿಗೀಡಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಈ ರಸ್ತೆಯ ಅಲ್ಲಲ್ಲಿ ನಾಲ್ಕಾರು ರೆಸ್ಟೋರೆಂಟ್‌ಗಳನ್ನೂ, ಹತ್ತಾರು ಆಂಬುಲೆನ್ಸ್‌ಗಳ ವ್ಯವಸ್ಥೆ ಮಾಡಿದರೆ ಸ್ವಲ್ಪ ಮಟ್ಟಿಗಾದರೂ ಅಪಘಾತಗಳನ್ನು ತಡೆಯಬಹುದು. **-ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು**

ದೇಗುಲಗಳಿಗೆ ಹಿರಿಯರಿಗೆ ನೇರ ಪ್ರವೇಶ ಸ್ವಾಗತಾರ್ಹ

ಮಾನ್ಯರೆ,

ಮನುಷ್ಯ ತಾನು ಜನಿಸಿದ ಕೆಲವು ವರ್ಷಗಳು ಏನು ತಿಳಿಯದೆ ಮುಗ್ಧ ಮಗುವಾಗಿರುವಂತೆ, ವರ್ಷಗಳು ಉರುಳಿದಂತೆ ಎಲ್ಲಾ ತಿಳಿದಿದ್ದು ವಯೋಸಹಜವಾಗಿ 65 ವರ್ಷ ದಾಟಿದ ನಂತರ ಮಗುವಿನಂತಾಗಿ ಬಿಡುತ್ತಾನೆ. ಅರವತ್ತೈದು ವರ್ಷ ದಾಟಿದ ನಂತರ ದೇಹದಲ್ಲಿನ ಶಕ್ತಿ ಕ್ಷೀಣವಾಗಿ ಜೀವನದ ಮೇಲಿನ ಮೋಹ ಕಡಿಮೆಯಾದಾಗ ದೇವರಲ್ಲಿ ತಮ್ಮ ಆನಂದವನ್ನು ಹುಡುಕುವ ಪ್ರಯತ್ನ ಮಾಡುತ್ತಾನೆ.

ಪ್ರಸ್ತುತ ಕರ್ನಾಟಕ ಸರ್ಕಾರವು ರಾಜ್ಯದ ಧರ್ಮದಾಯ ದತ್ತಿ ಇಲಾಖೆಯ ಅಧೀನದಲ್ಲಿರುವ 'ಎ' ಮತ್ತು 'ಬಿ' ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳಲ್ಲಿ 65 ವರ್ಷ ದಾಟಿದ ಹಿರಿಯರ ನಾಗರಿಕರು ತಮ್ಮ ಗುರುತಿನ ದಾಖಲೆ ತೋರಿಸಿ ನೇರವಾಗಿ ದೇವಾಲಯದೊಳಗೆ ಪ್ರವೇಶಿಸಿ ದೇವರ ದರ್ಶನ ಮಾಡುವ ಅವಕಾಶ ಮಾಡಿಕೊಟ್ಟಿರುವ ಹಿರಿಯ ನಾಗರಿಕರಿಗೆ ಸಂತಸ ಉಂಟು ಮಾಡಿದೆ.

ರಾಜ್ಯ ಸರ್ಕಾರದ ಈ ನಿರ್ಧಾರ ಹಲವು ವರ್ಷಗಳ ಹಿರಿಯ ನಾಗರಿಕರ ಬೇಡಿಕೆಯನ್ನು ಈಡೇರಿಸಿದಂತಾಗಿದ್ದು, ಪ್ರತಿ ವರ್ಷ ಕೋಟ್ಯಾಂತರ ಭಕ್ತರು ದೇವಾಲಯಗಳಿಗೆ ಬೇಟಿ ನೀಡಿ ತಮ್ಮ ಹರಕೆ ಪೂಜೆ ಸಲ್ಲಿಸುತ್ತಾರೆ. ಇದರಿಂದಾಗಿ ಹಿರಿಯ ನಾಗರಿಕರು ಸರತಿ ಸಾಲಿನಲ್ಲಿ ಕಾಯಬೇಕಾಗುತ್ತದೆ. ಅನಾರೋಗ್ಯ ಪೀಡಿತ ಹಿರಿಯರಿಗೆ ಇದು ಇನ್ನೂ ತೊಂದರೆಯುಂಟು ಮಾಡುತ್ತದೆ.

ಹೀಗೆ ಗಂಟೆಗಟ್ಟಲೆ ಕಾದು ದೇವಾಲಯಗಳಿಗೆ ಭೇಟಿ ನೀಡಿದರು ದೇವರ ದರ್ಶನವಾಗದೆ ಹಿರಿಯರು ಮನೆಗೆ ಹಿಂತಿರುಗಬೇಕಾಗುತ್ತಿತ್ತು. ಇದನ್ನು ಮನಗಂಡ ರಾಜ್ಯ ಸರ್ಕಾರ ಹಿರಿಯ ನಾಗರಿಕರಿಗೆ ದೇವರ ದರ್ಶನ ಮಾಡಿಸಲು ದೇವಾಲಯದ ಆವರಣದಲ್ಲಿ ಸಹಾಯ ಕೇಂದ್ರವನ್ನು ಸ್ಥಾಪಿಸಿ, ಸಿಬ್ಬಂದಿಗಳನ್ನು ನೇಮಕ ಮಾಡಿ ದೇವರ ದರ್ಶನ ಹಿರಿಯರಿಗೆ ದೊರಕುವಂತೆ ವ್ಯವಸ್ಥೆ ಮಾಡಲು ಸೂಚನೆ ನೀಡಿರುವುದು ಹಿರಿಯ ಜೀವಗಳಿಗೆ ಆನಂದವನ್ನುಂಟು ಮಾಡಿದೆ. ರಾಜ್ಯ ಸರ್ಕಾರದ ಈ ಕ್ರಮಕ್ಕೆ ರಾಜ್ಯದ ಹಿರಿಯ ನಾಗರಿಕರುಗಳ ಪರವಾಗಿ ಧನ್ಯವಾದಗಳು.

-ರಾಸುಮ ಭಟ್, ಚಿಕ್ಕಮಗಳೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಆಧಾರ್-ರೇಷನ್ ಕಾರ್ಡ್ ಭರಾಟೆಯಲ್ಲಿ ಮರೆಯಾಯ್ತೆ ಪ್ರೋಗ್ರೆಸ್ ಕಾರ್ಡ್?



" ಉಚಿತ ಕೊಡುಗೆಗಳ ಕುರಿತು ಬಹುಪಾಲು ಜನ ಮೆಚ್ಚುಗೆ ವ್ಯಕ್ತಪಡಿಸುತ್ತಿರುವಂತೆ ಅನೇಕ ಜನರು ವಿರೋಧವನ್ನೂ ವ್ಯಕ್ತಪಡಿಸುತ್ತಿದ್ದಾರೆ. ಉಚಿತ ಕೊಡುಗೆಗಳನ್ನು ನೀಡಿ ಕಷ್ಟನಷ್ಟ ಅನುಭವಿಸುತ್ತಿರುವ ಅನೇಕ ದೇಶ ಹಾಗೂ ರಾಜ್ಯಗಳ ಉದಾಹರಣೆಗಳನ್ನು ಸಹ ನೀಡಲಾಗುತ್ತಿದೆ. ಸ್ವಾತಂತ್ರ್ಯ ಬಂದಾಗಿನಿಂದ ನಮ್ಮ ದೇಶ ಅನೇಕ ಹಗರಣಗಳ ಕಣಜವಾಗಿದೆ ಎನ್ನಬಹುದು. ಲಕ್ಷಾಂತರ ಕೋಟಿ ರೂಪಾಯಿಗಳ ಹಗರಣಗಳು ದೇಶದ ಆರ್ಥಿಕ ಪ್ರಗತಿಗೆ ಮಾರಕವಾಗಿವೆ. ಅಷ್ಟೇ ಅಲ್ಲದೇ ಲೂಟಿ ಮಾಡಿದ ಜನರ ಹಣವನ್ನು ಉಳ್ಳವರು ಸ್ವಿಸ್ ಬ್ಯಾಂಕ್‌ನಲ್ಲಿದ್ದು, ಅದನ್ನು ವಾಪಸ್ ತರುವುದಾಗಿ ಹೇಳಿ ಅಧಿಕಾರಕ್ಕೆ ಬಂದ ಬಿಜೆಪಿ ಪಕ್ಷ, ಸ್ವಿಸ್ ಬ್ಯಾಂಕ್ ಹಣವಿರಲಿ, ನಮ್ಮ ದೇಶದ ಬ್ಯಾಂಕ್‌ಗಳಲ್ಲಿ ಸಾವಿರಾರು ಕೋಟಿ ಸಾಲ ಮಾಡಿದ ಉದ್ಯಮಿಗಳಿಂದ ಸಾಲ ವಸೂಲು ಮಾಡಲಾಗದೆ, ಅವರು ದೇಶ ಬಿಟ್ಟು ಹೋಗಲು ಅವಕಾಶ ಮಾಡಿಕೊಟ್ಟು 'ಇಂಗು ತಿಂದ ಮಂಗ'ನಂತೆ ಆಗಿದೆ. ಅನೇಕ ಐತಿಹಾಸಿಕ ತೀರ್ಮಾನಗಳಿಂದ, ಪ್ರಗತಿಗಳಿಂದ ಜಾಗತಿಕವಾಗಿ ನಮ್ಮ ದೇಶದ ಕೀರ್ತಿ ಹೆಚ್ಚುತ್ತಿದ್ದರೂ ದೇಶದ ಜನರಿಗೆ ಅವುಗಳ ತಿಳಿಯದೇ ಇರುವುದು ವಿಪರ್ಯಾಸ. ರಾಜಕೀಯ ಪಕ್ಷಗಳ ಹುಚ್ಚು ನಿರ್ಧಾರಗಳಿಂದ, ಲೆಕ್ಕಾಚಾರವಿಲ್ಲದ ಯೋಜನೆಗಳಿಂದ ಹೊರೆಯಾಗುತ್ತಿರುವುದು ಮಾತ್ರ ಜನಸಾಮಾನ್ಯನಿಗೆ ಎಂಬುದನ್ನು ಅಲ್ಲಗಳೆಯಲಾಗದು.

ಕಳೆದ 40 ದಿನಗಳಿಂದ ಕರ್ನಾಟಕದ ಜನ ಬಹಳ ಬ್ಯುಸಿಯಾಗಿದ್ದಾರೆ. ಬಹುತೇಕರ ಮನೆಯಲ್ಲಿ, ಸುದ್ದಿ ಮಾಧ್ಯಮಗಳಲ್ಲಿ ನೂತನ ಕರ್ನಾಟಕ ಸರ್ಕಾರ ಘೋಷಿಸಿರುವ ಗ್ಯಾರಂಟಿ ಭಾಗ್ಯಗಳ ಕುರಿತಾಗಿಯೇ ಹೆಚ್ಚು ಚರ್ಚೆಯಾಗುತ್ತಿದೆ. ಯೋಜನೆಗಳ ಕುರಿತು ಪರ ಹಾಗೂ ವಿರೋಧ ಅಭಿಪ್ರಾಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇರುತ್ತದೆ. ಈ ಮಧ್ಯೆ ಉಚಿತ ಸಾರಿಗೆ ಪಡೆದ 'ನಾರಿಶಕ್ತಿ' ವಿವಿಧೆಡೆ ಅನಾವರಣಗೊಂಡಿದೆ. ಎಲ್ಲರೂ ಆಧಾರ್ ಕಾರ್ಡ್, ಪಾನ್ ಕಾರ್ಡ್, ರೇಷನ್ ಕಾರ್ಡ್, ಸ್ಮಾರ್ಟ್ ಕಾರ್ಡ್ ಭರಾಟೆಯಲ್ಲಿ ದೇಶದ ಪ್ರೋಗ್ರೆಸ್ ಕಾರ್ಡ್ ಮರೆತು ಬಿಟ್ಟರೇನೋ ಎನಿಸದೆ ಇರದು!

ಚುನಾವಣೆ ಪೂರ್ವದಲ್ಲಿ ರಾಜಕೀಯ ಪಕ್ಷಗಳು ಹೊರಡಿಸುವ ಪ್ರಣಾಳಿಕೆಗಳು, ಮಾಡುವ ಪ್ರಚಾರ ಭಾಷಣಗಳು ಸಿನಿಮಾ ಶೈಲಿಯಲ್ಲಿ ಆಗುತ್ತಿರುವುದು ಅತಿಶಯೋಕ್ತಿ ಎನಿಸಿದರೂ ಸತ್ಯವಾಗಿದೆ. 'ಅಧಿಕಾರ ಕೊಟ್ಟು ನೋಡಿ ಐದೇ ವರ್ಷದಲ್ಲಿ ಬಡತನ ನಿರ್ಮೂಲನೆ ಮಾಡಿ ಬಿಡುತ್ತೇವೆ' ಎಂದು ಘೋಷಣೆ ಮಾಡುವ ನಾಯಕರು ಬಡತನದ ಬದಲು ಕ್ರಮೇಣ ಬಡವರನ್ನೇ ನಿರ್ಮೂಲನೆ ಮಾಡಲು ಯೋಜನೆಗಳನ್ನು ಸಿದ್ಧಪಡಿಸಿದಂತೆ ಮೇಲ್ನೋಟಕ್ಕೆ ಕಾಣುತ್ತದೆ. ಬಡ ಜನರು, ಮಧ್ಯಮ ವರ್ಗದ ಜನರು ಸುಭಿಕ್ಷವಾಗುತ್ತಾರೋ ಇಲ್ಲವೋ?, ಆದರೆ ಚುನಾಯಿತ ಪ್ರತಿನಿಧಿಗಳ ಕುಟುಂಬ ಸುಭಿಕ್ಷವಾಗುವುದು ಅವರು ಚುನಾವಣೆಯಿಂದ ಚುನಾವಣೆಗೆ ಘೋಷಿಸುವ ಆಸ್ತಿ ವಿವರಗಳಲ್ಲೇ ತಿಳಿದುಬರುತ್ತದೆ. ಆಡಳಿತಾರೂಢ ಪಕ್ಷವನ್ನು ಬೆಲೆ ಏರಿಕೆ ವಿಷಯದಲ್ಲಿ ಪುಂಖಾನುಪುಂಖವಾಗಿ ಟೀಕಿಸುವ ರಾಜಕೀಯ ಪಕ್ಷಗಳು, ತಾವು ಅಧಿಕಾರಕ್ಕೆ ಬಂದ ಮೇಲೆ ಅವುಗಳ ಕುರಿತು ಗಮನ ಹರಿಸದೆ ಮತ್ತಷ್ಟು ಬೆಲೆ ಏರಿಕೆ ಮಾಡಿ ಗಾಯದ ಮೇಲೆ ಬರೆ ಹಾಕುವ ಕೆಲಸ ಮಾಡುತ್ತವೆ.

ಈ ಸಾಲಿನ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಒಂದು ಪಕ್ಷಕ್ಕೆ ಪೂರ್ಣ ಪ್ರಮಾಣದ ಬಹುಮತ ದೊರಕಿ ಸುಭದ್ರ ಸರ್ಕಾರ ರಚನೆಯಾಗಿದೆ. ಈ ಫಲಿತಾಂಶಕ್ಕೆ ಹಿಂದಿನ ಆಡಳಿತ ಸರ್ಕಾರದ ಮೇಲೆ ಜನರು ಬೇಸತ್ತಿದ್ದೇ ಕಾರಣ. ಆದ್ದರಿಂದಲೇ ವಿರೋಧ ಪಕ್ಷದಲ್ಲಿದ್ದ ಪಕ್ಷಕ್ಕೆ ಸ್ಪಷ್ಟ ಬಹುಮತವನ್ನು ನೀಡಿ ಗೆಲ್ಲಿಸಿದ್ದಾರೆ. ಆಡಳಿತ ನಡೆಸಿರುವ ಪಕ್ಷ ತನ್ನ ಪ್ರಣಾಳಿಕೆಯಲ್ಲಿದ್ದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಪ್ರಯತ್ನಿಸುತ್ತಿದೆ. ಅನೇಕ ತೊಡಕುಗಳು ಎದುರಾದರೂ ಬಡಜನರನ್ನು ಹಸಿವು ಮುಕ್ತಗೊಳಿಸುವ, ಉಚಿತ ವಿದ್ಯುತ್ ನೀಡುವ, ಮಹಿಳೆಯರ ಸಬಲೀಕರಣಕ್ಕೆ ನಾರಿಶಕ್ತಿ ಹಾಗೂ ನಿರುದ್ಯೋಗಿಗಳಿಗೆ ಭತ್ಯೆ ನೀಡುವ ಯೋಜನೆಗಳಾದ್ದರಿಂದ ಜಾರಿಗೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ. ಆ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವ ಸರ್ಕಾರವನ್ನು ನಿಜವಾಗಲೂ ಅಭಿನಂದಿಸಬೇಕು.

ಗ್ಯಾರೆಂಟಿ ಯೋಜನೆಗಳ ರೂವಾರಿಗಳಲ್ಲಿ ಇಬ್ಬರು ಐಎಎಸ್ ಅಧಿಕಾರಿಗಳಾಗಿದ್ದವರು ಎಂದು ತಿಳಿದು ಬಹಳ ಖೇದ ಉಂಟಾಯಿತು. ಮಹಿಳೆಯರನ್ನೇ ಗುರಿಯನ್ನಾಗಿಸಿಕೊಂಡು ಅಧಿಕಾರ ಗಿಟ್ಟಿಸಲು ಸುಲಭ ಮಾರ್ಗವನ್ನು ಕಾಂಗ್ರೆಸ್ ಪಕ್ಷಕ್ಕೆ ಹೇಳಿಕೊಟ್ಟವರು ಅವರು. ಉಚಿತ ಕೊಡುಗೆಗಳನ್ನು ಯಾವ ಪ್ರಜೆಯೂ ಕೇಳಿರಲಿಲ್ಲ. ಅದರ ಬದಲಾಗಿ ಅವರಿಗೆ ಅಡುಗೆ ಅನಿಲದ ಸಿಲಿಂಡರ್ ಬೆಲೆ ಕಡಿಮೆ ಆಗಬೇಕಿತ್ತು ಪೆಟ್ರೋಲ್, ಡೀಸಲ್ ಬೆಲೆ ಕಡಿಮೆಯಾಗಬೇಕಿತ್ತು, ಅಡುಗೆಗೆ ಬೇಕಾದ ಎಣ್ಣೆ, ಕಾಳುಗಳ ಬೆಲೆ ಕಡಿಮೆಯಾಗಬೇಕಿತ್ತು. ಆದರೆ ಉಚಿತ ವಿದ್ಯುತ್, ಉಚಿತ ಸಾರಿಗೆ, ಮನೆಯ ಯಜಮಾನಿಗೆ ಹಣ, ನಿರುದ್ಯೋಗಿಗಳಿಗೆ ಭತ್ಯೆ ಹೀಗೆ ಅನಪೇಕ್ಷಿತ ಆಮಿಷಗಳನ್ನು ಒಡ್ಡಿದ ಕಾರಣಕ್ಕೆ ಮತದಾರರಿಗೆ ಆಸೆ ಉಂಟಾಗಿ ಕಾಂಗ್ರೆಸ್ ಪಕ್ಷದ ಪರವಾಗಿ ಮತದಾನ ಮಾಡಿರುತ್ತಾರೆ. ಸರ್ಕಾರ ರಚನೆಯಾದ ದಿನದಿಂದ ಈ ಯೋಜನೆಗಳಿಗೆ ಹಣ ಹೊಂದಿಸುವ ಸರ್ಕಸ್, ಜೊತೆಗೆ ಅನೇಕ ಷರತ್ತುಗಳನ್ನು ವಿಧಿಸುವ ಕುರಿತು ಚರ್ಚೆ ನಡೆಯುತ್ತಿದೆಯೇ ಹೊರತು ರಾಜ್ಯದ ಪ್ರಗತಿಯ ಕುರಿತು ಯಾವುದೇ ಚಿಂತನೆ, ಚರ್ಚೆ ನಡೆಯುತ್ತಿಲ್ಲ. ಅಷ್ಟೇ ಅಲ್ಲ ದೇಶದ ಬೆನ್ನೆಲುಬಾದ ರೈತರ ಹಿತ ಕಾಯುವ ಯೋಜನೆಗಳ ಕುರಿತು ಚಿಂತನೆಯೇ ನಡೆದಿಲ್ಲ. ಹಸಿದವರಿಗೆ ಅನ್ನ ಕೊಡಬೇಕು ನಿಜ, ಆದರೆ ರಾಜ್ಯದ ಅಭಿವೃದ್ಧಿಯೂ ಅಷ್ಟೇ ಅವಶ್ಯವಲ್ಲವೇ? ರಾಜ್ಯದ ಬೊಕ್ಕಸದಲ್ಲಿ ಹಣ ಉಳಿತಾಯವಾಗಿದ್ದಲ್ಲಿ ಉಚಿತ ಕೊಡುಗೆಗಳನ್ನು ಅಶಕ್ತರಿಗೆ ಕೊಡಲಿ, ಅದಕ್ಕೆ ಯಾರ ಅಭ್ಯಂತರವೂ ಇಲ್ಲ. ಆದರೆ ರಾಜ್ಯಕ್ಕೆ ಹೊರೆಯಾಗುವಂತಹ ಸಾಲ ಮಾಡಿ ಜನರಿಗೆ ಘೋಷಿಸಿದ ಯೋಜನೆಗಳನ್ನು ಮುಟ್ಟಿಸುವುದರಲ್ಲಿ ಯಾವ ಅರ್ಥವೂ ಇಲ್ಲ, ಅರ್ಥಶಾಸ್ತ್ರವೂ ಇಲ್ಲ. ಯಾವ ಪಕ್ಷವೂ ಪಕ್ಷದ ಖಜಾನೆಯಿಂದ ಹಣ ಖರ್ಚು ಮಾಡಿ ಜನರಿಗೆ ಅನುಕೂಲವಾಗುವ ಯೋಜನೆ ರೂಪಿಸುವುದಿಲ್ಲ. ಎಲ್ಲಾ ಪಕ್ಷಗಳ ಸರ್ಕಾರಗಳೂ ಜನರು ಕಟ್ಟುವ ತೆರಿಗೆ ಹಣದಿಂದಲೇ ಯೋಜನೆಗೆ ಹಣ ಹೊಂದಿಸುವುದು. ಇದರ ಕುರಿತು ಸಾಮಾನ್ಯ ಜನರಿಗೆ ಅರಿವಿಲ್ಲದಿರುವುದು ದುರದೃಷ್ಟಕರ.

ಉಚಿತ ಕೊಡುಗೆಗಳ ಕುರಿತು ಬಹುಪಾಲು ಜನ ಮೆಚ್ಚುಗೆ ವ್ಯಕ್ತಪಡಿಸುತ್ತಿರುವಂತೆ ಅನೇಕ ಜನರು ವಿರೋಧವನ್ನೂ ವ್ಯಕ್ತಪಡಿಸುತ್ತಿದ್ದಾರೆ. ಉಚಿತ ಕೊಡುಗೆಗಳನ್ನು ನೀಡಿ ಕಷ್ಟನಷ್ಟ ಅನುಭವಿಸುತ್ತಿರುವ ಅನೇಕ ದೇಶ ಹಾಗೂ ರಾಜ್ಯಗಳ ಉದಾಹರಣೆಗಳನ್ನು ಸಹ ನೀಡಲಾಗುತ್ತಿದೆ. ನಮ್ಮ ದೇಶ ಸ್ವಾತಂತ್ರ್ಯ ಬಂದಾಗಿನಿಂದ ಅನೇಕ ಹಗರಣಗಳ ಕಣಜವಾಗಿದೆ ಎನ್ನಬಹುದು. ಲಕ್ಷಾಂತರ ಕೋಟಿ ರೂಪಾಯಿಗಳ ಹಗರಣಗಳು ದೇಶದ ಆರ್ಥಿಕ ಪ್ರಗತಿಗೆ ಮಾರಕವಾಗಿವೆ. ಅಷ್ಟೇ ಅಲ್ಲದೇ ಲೂಟಿ ಮಾಡಿದ ಜನರ ಹಣವನ್ನು ಉಳ್ಳವರು ಸ್ವಿಸ್ ಬ್ಯಾಂಕ್‌ನಲ್ಲಿದ್ದು, ಅದನ್ನು ವಾಪಸ್ ತರುವುದಾಗಿ ಹೇಳಿ ಅಧಿಕಾರಕ್ಕೆ ಬಂದ ಬಿಜೆಪಿ ಪಕ್ಷ, ಸ್ವಿಸ್ ಬ್ಯಾಂಕ್ ಹಣವಿರಲಿ, ನಮ್ಮ ದೇಶದ ಬ್ಯಾಂಕ್‌ಗಳಲ್ಲಿ ಸಾವಿರಾರು ಕೋಟಿ ಸಾಲ ಮಾಡಿದ ಉದ್ಯಮಿಗಳಿಂದ ಸಾಲ ವಸೂಲು ಮಾಡಲಾಗದೆ, ಅವರು ದೇಶ ಬಿಟ್ಟು ಹೋಗಲು ಅವಕಾಶ ಮಾಡಿಕೊಟ್ಟು 'ಇಂಗು ತಿಂದ ಮಂಗ'ನಂತೆ ಆಗಿದೆ. ಅನೇಕ ಐತಿಹಾಸಿಕ ತೀರ್ಮಾನಗಳಿಂದ, ಪ್ರಗತಿಗಳಿಂದ ಜಾಗತಿಕವಾಗಿ ನಮ್ಮ ದೇಶದ ಕೀರ್ತಿ ಹೆಚ್ಚುತ್ತಿದ್ದರೂ ದೇಶದ ಜನರಿಗೆ ಅವುಗಳ ತಿಳಿಯದೇ ಇರುವುದು ವಿಪರ್ಯಾಸ. ರಾಜಕೀಯ ಪಕ್ಷಗಳ ಹುಚ್ಚು ನಿರ್ಧಾರಗಳಿಂದ, ಲೆಕ್ಕಾಚಾರವಿಲ್ಲದ ಯೋಜನೆಗಳಿಂದ ಹೊರೆಯಾಗುತ್ತಿರುವುದು ಮಾತ್ರ ಜನಸಾಮಾನ್ಯನಿಗೆ ಎಂಬುದನ್ನು ಅಲ್ಲಗಳೆಯಲಾಗದು.

ಉಚಿತ ಯೋಜನೆಗಳಿಂದ ಅನೇಕ ಅಡ್ಡ ಪರಿಣಾಮಗಳು ಈಗಾಗಲೇ ಉಂಟಾಗಿವೆ. ಯೋಜನೆಗಳಿಗೆ ಹಣ ಹೊಂದಿಸಲು ಅನೇಕ ಇತರೆ ಅಗತ್ಯ ವಸ್ತುಗಳ ಬೆಲೆ ಏರಿಕೆ, ಮರಳು ಜಲ್ಲಿ ಬೆಲೆ ಏರಿಕೆ, ಆಸ್ತಿ ನೋಂದಣಿ ತೆರಿಗೆ ಏರಿಕೆ... ಹೀಗೆ ಅನೇಕ ಬಿಸಿಗಳು ಜನಸಾಮಾನ್ಯರಿಗೆ ಈಗಾಗಲೇ ತಟ್ಟುತ್ತಿವೆ. ಉಚಿತ ಸಾರಿಗೆ ಯೋಜನೆಯಿಂದ ಖಾಸಗಿ ಬಸ್ ಮಾಲೀಕರಿಗೆ ತೊಂದರೆಯಾಗಿದೆ, ಆಟೋ ಚಾಲಕರಿಗೆ ತೊಂದರೆಯಾಗಿದೆ. ಉಚಿತ ಅಕ್ಕಿ ಕೊಡುಗೆಯಲ್ಲಿ ಸಿಕ್ಕ ಅಕ್ಕಿಯಿಂದ ಎಲ್ಲರೂ ಅನ್ನ ಮಾಡಿ ಉಣ್ಣುವುದಿಲ್ಲ. ಕೆ.ಜಿ.ಗೆ 35 ರೂಪಾಯಿ ಕೊಟ್ಟು ಸರ್ಕಾರ ಖರೀದಿಸಿ ಜನರಿಗೆ ಉಚಿತವಾಗಿ ಕೊಡುವ ಅಕ್ಕಿಯನ್ನು ಕಾಳಸಂತೆಯಲ್ಲಿ ಕೆ.ಜಿ.ಗೆ 10/15 ರೂಪಾಯಿಗೆ ಮಾರಾಟ ಮಾಡುವ ಜಾಲ ರಾಜಾರೋಷವಾಗಿ ದಂಧೆ ನಡೆಸುತ್ತಿದೆ. ಗೃಹಜ್ಯೋತಿಯಿಂದ ಅನೇಕ ಅಕ್ರಮಗಳು ನಡೆಯುವ ಸಾಧ್ಯತೆ ಇದೆ. ನಿರುದ್ಯೋಗಿಗಳಿಗೆ ಸಿಗುವ ಭತ್ಯೆಯು ಸಕಾರಣಕ್ಕೆ ವಿನಿಯೋಗವಾಗುವ ಖಾತ್ರಿಯಿಲ್ಲ. ಯುವಕರು ಅಡ್ಡದಾರಿ ಹಿಡಿಯಲು ಅನುಕೂಲವಾಗಬಹುದು. ಜೊತೆಗೆ ಇಷ್ಟೆಲ್ಲಾ ಯೋಜನೆಗಳಿಗೆ ಹಣ ಹೊಂದಿಸುವ ಸರ್ಕಾರಕ್ಕೆ ಅಭಿವೃದ್ಧಿ ಕೆಲಸಗಳಿಗೆ ಹಣ ಹೊಂದಿಸುವುದು ಕಷ್ಟವಾಗಬಹುದು. ಅನೇಕ ಶಾಲೆಗಳಲ್ಲಿ ಮೂಲ ಸೌಕರ್ಯಗಳಿಲ್ಲ. ಅನೇಕ ಆಸ್ಪತ್ರೆಗಳು ಉನ್ನತೀಕರಣಗೊಂಡಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಅನೇಕ ಚಿಕಿತ್ಸೆಗಳು ದುಬಾರಿ ಆದ್ದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಆ ಚಿಕಿತ್ಸೆಗಳನ್ನು ರಿಯಾಯಿತಿ ದರದಲ್ಲಿ ಒದಗಿಸಬಹುದಿತ್ತು. ಯೋಜನೆಗಳನ್ನು ಉಚಿತವಾಗಿ ನೀಡುವ ಬದಲು ರಿಯಾಯಿತಿ ನೀಡಬಹುದಿತ್ತು.

ಜನರ ತೆರಿಗೆ ಹಣದಿಂದ ರೂಪಿಸಿದ ಯೋಜನೆಗಳು ಅರ್ಹರಿಗಷ್ಟೇ ಅಲ್ಲದೆ ಅನರ್ಹರಿಗೂ ಲಾಭ ಉಂಟಾಗುತ್ತಿರುವುದು ಅಸಮಾನತೆಯನ್ನು ಮತ್ತಷ್ಟು ಹೆಚ್ಚಬಹುದು. 'ದುಡಿದು ತಿನ್ನುವ ಎತ್ತಿನ ಮೇವನ್ನು ಕಿತ್ತು ತಿರುಗಾಡಿ ತಿನ್ನುವ ಬಸವನಿಗೆ ಕೊಟ್ಟಂತಾಗುತ್ತದೆ'. ಈಗಾಗಲೇ ಬುದ್ಧಿವಂತ ವಿದ್ಯಾವಂತರೆಲ್ಲಾ ದೇಶ ಬಿಟ್ಟು ವಿದೇಶಗಳಲ್ಲಿ ದುಡಿಯಲು ಹೋಗುತ್ತಿದ್ದಾರೆ. ಇನ್ನು ಇಲ್ಲಿನ ಸರ್ಕಾರಗಳ ಹೊಸ ಕಾನೂನು, ಯೋಜನೆಗಳನ್ನು ಕಂಡು ಮತ್ತಷ್ಟು ಪ್ರತಿಭಾ ಪಲಾಯನವಾಗುವುದರಲ್ಲಿ ಅನುಮಾನವಿಲ್ಲ.

ನಾಯಿ ಒಂದಕ್ಕೆ ಮೂಳೆ ತುಂಡನ್ನು ಯಾರೋ ಹಾಕಿದರಂತೆ, ಅದು ಮೂಳೆಯನ್ನು ಕಡಿಯುವ ಭರದಲ್ಲಿ ಮೂಳೆಯ ಚೂರುಗಳು ವಸಡುಗಳನ್ನು ಗಾಯಗೊಳಿಸಿ ಅದರಿಂದ ರಕ್ತ ಒಸರುತ್ತಿತ್ತಂತೆ. ಆ ನಾಯಿಗೆ ಅದರ ಅರಿವಿಲ್ಲದೆ ಮೂಳೆಯಲ್ಲಿನ ಮಜ್ಜೆಯಿಂದ ಈ ರಕ್ತ ಸಿಗುತ್ತಿದೆ ಎಂದು ಮತ್ತಷ್ಟು ಕಚ್ಚುತ್ತಾ ರಕ್ತವನ್ನು ಸವಿಯುತ್ತಿತ್ತಂತೆ. ಇಂದಿನ ನಮ್ಮ ಜನರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಉಚಿತವಾಗಿ ದಿನಸಿ, ವಿದ್ಯುತ್, ಸಾರಿಗೆ ಎಲ್ಲವನ್ನೂ ಪಡೆದೆವೂ ಎಂದು ಬೀಗುತ್ತಿರುವವರಿಗೆ ಅದು ನಮ್ಮದೇ ರಕ್ತದಿಂದ ಸಿಗುತ್ತಿದೆ ಎಂಬ ಕನಿಷ್ಠ ಜ್ಞಾನವಿಲ್ಲದೇ ಇರುವುದು ದುರದೃಷ್ಟಕರ. ಇಂದು ಜನರು ಪಡೆಯುವ ಉಚಿತ ಕೊಡುಗೆಗಳಿಗೆ ಅವರ ಮಕ್ಕಳು ಮುಂದೆ ದಂಡ ಸಹಿತ ತೆರಿಗೆ ಕಟ್ಟಬೇಕಾದುದನ್ನು ತಪ್ಪಿಸಲಾಗದು.

ಸರ್ಕಾರ ತನ್ನ ಪ್ರಜೆಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಸ್ವಾಭಿಮಾನದಿಂದ ಬದುಕುವಂತೆ ಮಾಡಬೇಕಿತ್ತು. ಸರ್ಕಾರಗಳು ಹಸಿದವರಿಗೆ ಮೀನು ಹಿಡಿದು ತಿನ್ನುವುದನ್ನು ಕಲಿಸಬೇಕಿತ್ತು. ಅದರಿಂದ ಅವರುಗಳು ಸ್ವಾವಲಂಬಿಗಳಾಗುತ್ತಿದ್ದರು, ಅದು ಅವರಿಗೂ ಹಿತ, ದೇಶಕ್ಕೂ ಹಿತ. ಆದರೆ ಹಸಿದವರಿಗೆ ಮೀನನ್ನು ತಿನ್ನಲು ಕೊಟ್ಟು ಅವರು ಸದಾ ಪರಾವಲಂಬಿಗಳಾಗುವಂತೆ ಮಾಡಿ, ಮುಂದೆ ಏನೆ ಬೇಕಿದ್ದರೂ ಸರ್ಕಾರದ ಮುಂದೆ ಕೈಚಾಚಿ ನಿಲ್ಲುವಂತೆ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ಉಚಿತವಾಗಿ ಕೊಟ್ಟು ಇನ್ನಷ್ಟು ಸೋಮಾರಿಗಳನ್ನಾಗಿ ಮಾಡಿ ಸ್ವಾಭಿಮಾನವನ್ನೇ ಅಡವಿಟ್ಟು ಬದುಕುವಂತೆ ಮಾಡುತ್ತಿರುವುದು ವಿಪರ್ಯಾಸ.

ಜನರಿಗೆ ಬೇಕಿದ್ದುದು, ಉಚಿತ ಅನ್ನ ಅಲ್ಲ, ಅವರೇ ದುಡಿದು ತಿನ್ನುವ ಸ್ವಾಭಿಮಾನದ ಅನ್ನ. ಮಹಿಳೆಯರಿಗೆ ಹೆಚ್ಚು ಸೌಲಭ್ಯ ನೀಡಿ ಅವರನ್ನು ಸಬಲರನ್ನಾಗಿಸುವ ಬದಲು ಇನ್ನೂ ಅಬಲೆಯಾಗುವಂತೆ ಮಾಡುತ್ತಿರುವರೇನೋ ಎಂದು ಅನುಮಾನ ಮೂಡದೇ ಇರದು. ಈ ಉಚಿತ ಯೋಜನೆಗಳಿಗೆ ಹೊಂದಿಕೊಳ್ಳುವ ಜನರು ಮುಂದೆ ತಾವೇ ದುಡಿದು ಬದುಕುವ ವ್ಯವಸ್ಥೆಗೆ ಹೊಂದಿಕೊಳ್ಳುವುದು ಕಷ್ಟವಾಗಬಹುದು. ಸದಾ ಈ ಯೋಜನೆಗಳ ದಾಸರಾಗಿ ರಾಜಕಾರಣಿಗಳಿಗೆ ಬಹುಪರಾಕ್ ಹೇಳುತ್ತಾ ಕೈಒಡ್ಡಿ ನಿಲ್ಲಬೇಕಾದ ಪರಿಸ್ಥಿತಿ ಬರಬಹುದು. ಆಗ ಪ್ರಜಾಪ್ರಭುತ್ವ ರಾಷ್ಟ್ರದ ಲಕ್ಷಣವೇ ಮರೆಯಾಗಿರುತ್ತದೆ. ಏನಂತೀರಿ?

ಪದ ತಾಂಬೂಲ :

**ಜನರು ಪ್ರೋಗ್ರೆಸ್ ಕಾರ್ಡ್
ಒಂದನ್ನೇ ಬಯಸಿದ್ದರೆ
ಬೇರೆ ಕಾರ್ಡ್‌ಗಳ ಹುಡುಕುವ
ಅಗತ್ಯವೇ ಇರುತ್ತಿರಲಿಲ್ಲ.**

ಅಮೆ ಆರ್ಗ್ಯಾನಿಕ್‌ನಿಂದ ರೈನ್‌ಫಾಲ್ ಚರ್ಮ ಆರೋಗ್ಯ ಉತ್ಪನ್ನ ಬಿಡುಗಡೆ

ಮೈಸೂರು, ಜೂ.25(ಎಂಕೆ)- ಮೈಸೂರಿನ ಡಿಎಫ್‌ಆರ್‌ಎಲ್(ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ)ವಸತಿ ಸಂಕೀರ್ಣ ಆವರಣದಲ್ಲಿರುವ ನಿರ್ದೇಶಕ ಬಂಗಲೆ(director bungalow) ಎದುರು ಚರ್ಮದ ಆರೋಗ್ಯಕ್ಕೆ ಸಂಬಂಧಿಸಿದಂತೆ ಅಮೆ ಆರ್ಗ್ಯಾನಿಕ್(Ame Organic) ಹೊರತಂದಿರುವ 'ರೈನ್‌ಫಾಲ್ ಇನ್‌ಸ್ಟಂಟ್ ರೆಡಿಯೇಷನ್ ಮಿಸ್ಟ್' ಉತ್ಪನ್ನವನ್ನು ಭಾನುವಾರ ಬಿಡುಗಡೆ ಮಾಡಲಾಯಿತು.

ಅಮೆ ಆರ್ಗ್ಯಾನಿಕ್ ಸಂಸ್ಥಾಪಕಿ ಹಾಗೂ ಉದ್ಯಮಿ ನಂದಿತಾ ಶರ್ಮಾ, ಲವ್‌ಬರ್ಡ್ಸ್ ಹಕ್ಕಿಗಳನ್ನು ಹಾರಿಬಿಡುವ ಮೂಲಕ ವಿನೂತನವಾಗಿ ಚರ್ಮ ಕಾಂತಿಯ ಉತ್ಪನ್ನವನ್ನು ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಚರ್ಮ, ಕರುಳು ಮತ್ತು ಮನಸ್ಸಿನ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಒತ್ತಡ ನಿವಾರಣೆ ಮಾಡುವಂತಹ ಸುಗಂಧಭರಿತ ಹಾಗೂ



ತ್ವರಿತವಾಗಿ ಮುಖದ ಚರ್ಮಕ್ಕೆ ಕಾಂತಿ ನೀಡುವ 'ರೈನ್‌ಫಾಲ್ ಇನ್‌ಸ್ಟಂಟ್ ರೆಡಿಯೇಷನ್ ಮಿಸ್ಟ್' ಉತ್ಪನ್ನವನ್ನು ಬಿಡುಗಡೆ ಮಾಡಿದ್ದೇವೆ ಎಂದರು.

ನಿಖರವಾದ ಸಂಶೋಧನೆ, ಆರ್ಗ್ಯಾನಿಕ್ ಪದಾರ್ಥಗಳನ್ನು ಬಳಸಿ ತಯಾರಿಸಲಾಗಿದ್ದು, ಬಾಹ್ಯ ನೋಟವನ್ನು ಮಾತ್ರವಲ್ಲದೆ ದೇಹದ ಆಂತರಿಕ ಯೋಗಕ್ಷೇಮವನ್ನೂ ಹೆಚ್ಚಿಸಲು ವಿನ್ಯಾಸಗೊಳಿಸಲಾದ ಅಸಾಮಾನ್ಯ ಮುಖದ ಮಂಜು(ರೈನ್‌ಫಾಲ್) ಆಗಿದೆ. ಈ ಉತ್ಪನ್ನವು ಇಂದ್ರಿಯಗಳನ್ನು ನೈಸರ್ಗಿಕ ಪರಿಮಳಗಳ ಸಾಮರಸ್ಯದ ಮಿಶ್ರಣದಲ್ಲಿ ಆವರಿಸುತ್ತದೆ. ಚರ್ಮವನ್ನು ಮತ್ತು ಮನಸ್ಸನ್ನು ಶಾಂತಗೊಳಿಸುತ್ತದೆ. ಅತ್ಯಂತ ಗುಣಮಟ್ಟದಿಂದ ಕೂಡಿದ್ದು, ಚರ್ಮದ ಆರೋಗ್ಯದ ಪ್ರತಿಬಿಂಬವಾಗಿದೆ ಎಂದು ತಿಳಿಸಿದರು.

ಬಳಿಕ ಸ್ಥಳದಲ್ಲಿಯೇ ಎಲ್ಲರ ಮುಖಕ್ಕೂ 'ರೈನ್‌ಫಾಲ್ ಇನ್‌ಸ್ಟಂಟ್ ರೆಡಿಯೇಷನ್ ಮಿಸ್ಟ್' ಉತ್ಪನ್ನ ಬಳಕೆ ಮಾಡುವ ಮೂಲಕ ಅಭಿಪ್ರಾಯ ಸಂಗ್ರಹಿಸಲಾಯಿತು. ಅಮೆ ಆರ್ಗ್ಯಾನಿಕ್ ಸಹ ಸಂಸ್ಥಾಪಕಿ ಮೇಘನಾ, ನಿಧಿ, ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಹಲಸಿನ ಹಬ್ಬಕ್ಕೆ ತೆರೆ

ಎರಡು ದಿನದಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ 400ಕ್ಕೂ ಅಧಿಕ ಹೆಚ್ಚು ಸಿದ್ದು ಮಾರಾಟ



ಮೈಸೂರು, ಜೂ.25(ಜಿಎ)–ಎರಡು ದಿನಗಳ ಹಲಸಿನ ಹಬ್ಬಕ್ಕೆ ಮೈಸೂರಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಗ್ರಾಹಕರು, ಆಯೋಜಕರು ಮತ್ತು ವ್ಯಾಪಾರಿಗಳ ಮುಖದಲ್ಲಿ ಮಂದಹಾಸ ಕಾಣುವ ಮೂಲಕ ಭಾನುವಾರ ತೆರೆಬಿತ್ತು.

ಸಹಜ ಸಮೃದ್ಧ ಸಂಸ್ಥೆಯು ಜಿಪಿಝಡ್–ಜರ್ಮನಿ, ನಮ್ಮ ಫಾರ್ಮರ್ಸ್ ಮಾರ್ಕೆಟ್ ಸಹಯೋಗದೊಂದಿಗೆ ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಆಯೋಜಿಸಿದ್ದ ಎರಡು ದಿನಗಳ ಹಲಸಿನ ಹಬ್ಬಕ್ಕೆ 20 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡುವ ಮೂಲಕ ಹಲಸಿನ ಸಸಿ ತಳಿಗಳು ಮತ್ತು ಖಾದ್ಯಗಳ ಬಗ್ಗೆ ಖರೀದಿ, ಮಾಹಿತಿ ಪಡೆಯುವುದರ ಜೊತೆಗೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಹರ್ಷ ವ್ಯಕ್ತಪಡಿಸಿದರು.

ಹಲಸಿನ ಹಬ್ಬಕ್ಕೆ ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ಶನಿವಾರ ಚಾಲನೆ ನೀಡಿದರು. ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು 10 ಸಾವಿರಕ್ಕೂ ಅಧಿಕ ಮಂದಿ ಭೇಟಿ ಮಾಡಿದ್ದು, 400ಕ್ಕೂ ಅಧಿಕ ಸಿದ್ದು ತಳಿಯ ಹಲಸಿನ ಸಸಿಗಳು ಮಾರಾಟವಾಗಿವೆ. 500 ಕೆ.ಜಿಗೂ ಅಧಿಕ ಹಲಾಸಿನ ಹಣ್ಣು ಮಾರಾಟವಾಗಿದೆ.

ನಾನಾ ಸ್ಪರ್ಧೆಗಳು : ಹಬ್ಬದ ಕಡೆಯ ದಿನವಾದ ಭಾನುವಾರ ಸುಮಾರು ಹತ್ತು ಸಾವಿರ ಮಂದಿ ಭೇಟಿ ನೀಡಿದ್ದು, ವಿವಿಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಂತೆ 5ರಿಂದ12 ವರ್ಷದೊಳಗಿನ ಮಕ್ಕಳಿಗೆ 'ನಾ ಕಂಡಂತೆ ಹಲಸು' ವಿಷಯದಡಿ ಚಿತ್ರಕಲಾ ಸ್ಪರ್ಧೆ ಆಯೋಜಿಸಿದರು. ಅದಕ್ಕೆ 30ಕ್ಕೂ ಅಧಿಕ ಮಕ್ಕಳು ಭಾಗವಹಿಸಿದರೆ, ಹಲಸಿನ ಹಣ್ಣು, ಕಾಯಿ ಬಳಸಿಕೊಂಡು ಅಡುಗೆ ಮಾಡುವ ಸ್ಪರ್ಧೆ ನಡೆಸಿದ್ದು ಅದಕ್ಕೂ 25ಕ್ಕೂ ಅಧಿಕ ಮಂದಿ ಬಹಳ ಉತ್ಸುಕರಾಗಿ ಪಾಲ್ಗೊಂಡಿದರು.

ಮಧ್ಯಾಹ್ನ ಹಲಸು ತಿನ್ನುವ ಸ್ಪರ್ಧೆಯನ್ನು ಆಯೋಜಿಸಿದರು. ಹಲಸಿನ ಹಣ್ಣು ತಿನ್ನುವ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಮೋಹನ್‌ಕುಮಾರ್ (ಪ್ರಥಮ), ಗಿರೀಶ್ (ದ್ವಿತೀಯ), ನರೇಂದ್ರಬಾಬು (ತೃತೀಯ). ಮಹಿಳೆಯರ ವಿಭಾಗದಲ್ಲಿ ನಳಿನಾ (ಪ್ರಥಮ), ಗಿರಿಜಾ (ದ್ವಿತೀಯಾ), ರಜನಿ ಮತ್ತು ಸಹನಾ (ತೃತೀಯ) ಸ್ಥಾನ ಪಡೆದರು. ವಿಜೇತರಿಗೆ ನಗದು ಬಹುಮಾನ ವಿತರಿಸಲಾಯಿತು.

ಹಲಸಿನ ಖಾದ್ಯಗಳಿಗೆ ಡಿಮ್ಯಾಂಡ್: ಮೇಳದಲ್ಲಿ ಹಲಸಿನ ಸಸಿ, ಕಾಯಿ, ಹಣ್ಣಿನ ಜೊತೆಗೆ ಹಲಸು ಬಳಸಿ ಮಾಡಿದ್ದ ಖಾದ್ಯಗಳಿಗೂ ಭಾರೀ ಡಿಮ್ಯಾಂಡ್ ಇತ್ತು. ಹಲಸಿನ ಪಾಯಸ, ಇಡ್ಲಿ, ದೋಸೆ, ಪೊಂಗಲು, ಪೂರಿ ಪಲ್ಯ, ಹೋಳಿಗೆ, ಪಲಾವ್ ಮತ್ತು ಹಲಸಿನ ಕಾಯಿ ಕಬಾಬ್‌ಗೆ ಬೇಡಿಕೆ ಹೆಚ್ಚಿದ್ದು ಪೂರೈಸಲು ಕಷ್ಟ ಕರವಾಗಿದೆ ಎಂದು ಮಾರಾಟಗಾರರು ತಿಳಿಸಿ ಹಲಸಿನ ಮೇಳದ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಹೊಳೆನರಸೀಪುರದಲ್ಲಿ ಪತ್ನಿ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿದ ಪತಿ



ತಿರುಮಲಾಪುರ(ಹಾಸನ), ಜೂ.25– ಹೊಳೆನರಸೀಪುರ ತಾಲೂಕಿನ ತಿರುಮಲಾಪುರದಲ್ಲಿ ಪತಿ ತನ್ನ ಪತ್ನಿಯನ್ನು ಹಾಡುಹಗಲೇ ಜನರ ಮುಂದೆ ಅಟ್ಟಾಡಿಸಿಕೊಂಡು ಹೋಗಿ ಮಚ್ಚಿನಿಂದ ಹಲ್ಲೆ ನಡೆಸಿದ ಘಟನೆ ನಡೆದಿದೆ. ಪತಿ ಶ್ರೀನಿವಾಸ್ ಪತ್ನಿ ಸವಿತಾ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಅಷ್ಟೇ ಅಲ್ಲದೆ ಸವಿತಾ ಸಹೋದರಿ ಅನಿತಾ ಕಾರಿನ ಮೇಲೂ ದಾಳಿ ನಡೆಸಿದ್ದಾನೆ.

ಕೌಟುಂಬಿಕ ಕಲಹ ಹಿನ್ನೆಲೆ 2 ವರ್ಷಗಳಿಂದ ಪತಿ, ಪತ್ನಿ ದೂರವಾಗಿ ಆಗಾಗ ಕಲಹಗಳು ನಡೆಯುತ್ತಿದ್ದವು. ಆಸ್ತಿ ವಿಚಾರವಾಗಿ ಪತಿ ವಿರುದ್ಧ ಪತ್ನಿ ಸವಿತಾ ಕೇಸ್ ದಾಖಲಿಸಿ ಕೋರ್ಟ್‌ನಲ್ಲಿ ವಿಚಾರಣೆ ಮುಂದುವರಿದಿತ್ತು. ಸವಿತಾ ಪತಿಯಲ್ಲಿ ಜೀವನಾಂಶಕ್ಕೆ ಬೇಡಿಕೆಯಿಟ್ಟಿದ್ದಳು.

ಇದೇ ವಿಚಾರದಲ್ಲಿ ನಿನ್ನೆ ಜಗಳ ತೆಗೆದು ಪತ್ನಿ ಮೇಲೆ ಶ್ರೀನಿವಾಸ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದೆ. ಜೈಲಿಗೆ ಹೋಗಲೂ ಬೇಕಾದರೆ ಸಿದ್ಧ ಎಂದು ಶ್ರೀನಿವಾಸ ರೊಚ್ಚಿಗೆದ್ದು ಪತ್ನಿಗೆ ಹೊಡೆಯುತ್ತಿರುವ ದೃಶ್ಯವನ್ನು ನೆರೆದಿದ್ದವರು ಮೊಬೈಲ್‌ನಲ್ಲಿ ವೀಡಿಯೋ ಮಾಡಿದ್ದು, ಜಾಲತಾಣದಲ್ಲಿ ವ್ಯಾಪಕ ವೈರಲ್ ಆಗಿದೆ.

ಘಟನೆ ಬೆಳಕಿಗೆ ಬರುತ್ತಿದ್ದಂತೆ ಹೊಳೆನರಸೀಪುರ ಠಾಣೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು ಆರೋಪಿ ಶ್ರೀನಿವಾಸ್ ಬಂಧನಕ್ಕೆ ಹುಡುಕಾಟ ನಡೆಸಿದ್ದಾರೆ. ಸದ್ಯ ಸವಿತಾ ಚಿಕಿತ್ಸೆಗಾಗಿ ಹಾಸನದ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

'ಹೇಗೆ ಮತ್ತು ಯಾಕೆ ವೈದ್ಯನಾದೆ' ಸಂವಾದ

ತಾವು ವೈದ್ಯರಾದ ಯಶೋಗಾಥೆ ವಿವರಿಸಿದ ಡಾ.ಜಾವಿದ್ ನಯೀಂ





ಮೈಸೂರಿನ ವಿಜಯನಗರ ನಾಲ್ಕನೇ ಹಂತದ ಕಲ್ಪ ಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಲಿಟ್ರರಿ ಅಸೋಸಿಯೇಷನ್ ಭಾನುವಾರ ಆಯೋಜಿಸಿದ್ದ 'ಹೇಗೆ ಮತ್ತು ಏಕೆ ನಾನು ವೈದ್ಯನಾದೆ' (Why and How I Became a Doctor) ವಿಷಯ ಕುರಿತ ಸಂವಾದದಲ್ಲಿ ನಗರದ ಖ್ಯಾತ ವೈದ್ಯರೂ ಆದ 'ಸ್ಟಾರ್ ಆಫ್ ಮೈಸೂರ್' ಅಂಕಣಕಾರ ಡಾ.ಜಾವಿದ್ ನಯೀಂ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.25(ಬಿಎಲ್‌ಯು)– ಮೈಸೂರು ಲಿಟ್ರರಿ ಅಸೋಸಿಯೇಷನ್ ಅಥವಾ ಮೈಸೂರು ಸಾಹಿತ್ಯ ಸಂಘ ನಗರದಲ್ಲಿ ಆಯೋಜಿಸಿದ್ದ ಹೇಗೆ ಮತ್ತು ಏಕೆ ನಾನು ವೈದ್ಯನಾದೆ (Why & How I Became a Doctor) ಎಂಬ ವಿಷಯ ಕುರಿತು ನಡೆದ ಸಂವಾದದಲ್ಲಿ ನಗರದ ಪ್ರಖ್ಯಾತ ವೈದ್ಯರೂ ಆದ 'ಸ್ಟಾರ್ ಆಫ್ ಮೈಸೂರ್'ನ ಅಂಕಣಕಾರ ಡಾ.ಜಾವಿದ್ ನಯೀಂ ಅವರು ತಾವು ವೈದ್ಯರಾದ ಬಗೆಗಿನ ತಮ್ಮ ಜೀವನದ ಕಥೆಯನ್ನು ವಿವರವಾಗಿ ತಿಳಿಸಿದರು.

ಮೈಸೂರಿನ ವಿಜಯನಗರ 4ನೇ ಹಂತದ ಕಲ್ಪ ಕ್ಷೇತ್ರ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವೈದ್ಯ ಡಾ.ಜಾವಿದ್ ನಯೀಂ ಅವರು, ಸುಮಾರು ಒಂದು ಗಂಟೆ ನಡು ನಡುವೆ ಹಾಸ್ಯಭರಿತವಾಗಿ ತಮ್ಮ ಯಶೋಗಾಥೆಯನ್ನು ವಿವರಿಸಿದಾಗ ನೆರೆದಿದ್ದ ಗಣ್ಯರು ನಗೆಗಡಲಲ್ಲಿ ತೇಲಾಡುತ್ತ ನಯೀಂ ಅವರ ಯಶೋಗಾಥೆಯನ್ನು ಕೇಳಿ ಆನಂದಿಸಿದರು.

ಮುಖ್ಯವಾಗಿ ತಾವು ವೈದ್ಯರಾಗಲು ತಮ್ಮ ತಂದೆಯವರ ಕನಸು ಕಾರಣ. ಅದನ್ನು ಈಡೇರಿಸಲು ನಾನು ಕೂಡ ಟೊಂಕ ಕಟ್ಟಿ ಹಲವು ಅಡೆತಡೆಗಳನ್ನು ಎದುರಿಸಿ ವೈದ್ಯನಾದೆ. ಈ ಮೂಲಕ ನನ್ನ ತಂದೆ ತೋರಿಸಿದ್ದ ಗುರಿ ತಲುಪಿದೆ ಎಂದು ಡಾ.ಜಾವಿದ್ ನಯೀಂ ಹೇಳಿದರು.

ನಮ್ಮ ತಂದೆಗೆ ವೈದ್ಯರಾಗುವ ಹಂಬಲವಿತ್ತು. ಆದರೆ ಹಲವು ಕಾರಣಗಳಿಂದ ಅವರು ವೈದ್ಯರಾಗಲು ಸಾಧ್ಯವಾಗಲಿಲ್ಲ. ಆದರೆ ತನ್ನ ಮಗನನ್ನು ವೈದ್ಯನಾಗಿ ಮಾಡಬೇಕೆಂದು ನಮ್ಮ ತಂದೆ ಹಠ ತೊಟ್ಟಿದ್ದರು. ಅದು ಎಷ್ಟರಮಟ್ಟಿಗೆ ಆಳವಾಗಿ ಬೇರೂರಿತ್ತು ಅಂದರೆ ಒಮ್ಮೆ ನನಗೆ ಕಳುಹಿಸಿದ ಹುಟ್ಟುಹಬ್ಬದ ಶುಭಾಶಯ ಪತ್ರದಲ್ಲಿ ಹೆಸರಿನ ಮುಂದೆ 'ಡಾಕ್ಟರ್' ಎಂದು ನಮೂದಿಸಿದ್ದರು. ನಾನು ನಿಜವಾಗಿ ವೈದ್ಯನಾಗುವ ಮುಂಚೆಯೇ ಅವರು ತಮ್ಮ ಆಸೆಯನ್ನು ಈ ರೀತಿ ತೋರಿಸಿದ್ದರು ಎಂದು ತಿಳಿಸಿದರು. ಈ ಕಾರಣದಿಂದ ನಮ್ಮ ತಂದೆಯವರ ಅಚಲ ನಿರ್ಧಾರದಿಂದ ಉತ್ತೇಜಿತನಾಗಿ ವೈದ್ಯನಾದೆ. ಇದರಿಂದ ಬೇರೆ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಲು ನನಗೆ ಸಾಧ್ಯವೇ ಆಗಲಿಲ್ಲ ಎಂದರು.

ಮೊದಲ ಬಾರಿಗೆ ಪಿಯುಸಿಯಲ್ಲಿ ಕಡಿಮೆ ಅಂಕ ಪಡೆದೆ. ಇದರಿಂದ ವೈದ್ಯಕೀಯ ಶಿಕ್ಷಣಕ್ಕೆ ಸೇರಲು ಅಡ್ಡಿಯಾಯಿತು. ಮತ್ತೊಮ್ಮೆ ಪಿಯುಸಿ ಪರೀಕ್ಷೆ ಬರೆದೆ. ಉತ್ತಮ ಅಂಕಗಳಿಸಿದೆ. ಇದರಿಂದ ಮಣಿಪಾಲ್‌ನ ಪ್ರತಿಷ್ಠಿತ ಕಾಲೇಜಿನಲ್ಲಿ ವೈದ್ಯಕೀಯ ಸೀಟ್ ಕೂಡ ದೊರೆಯಿತು. ಆದರೆ ನಮ್ಮ ತಂದೆ ಸ್ನೇಹಿತರಾದ ಡಾ.ಎಂ.ವಿ.ಸುಬ್ಬರಾವ್ ಅವರು, ತಮ್ಮ ತಂದೆ ಅವರಿಗೆ ಅಲ್ಲಿನ ಕಾಲೇಜಿನ ವಾತಾವರಣವನ್ನು ವಿವರಿಸಿದರು. ಅದರಲ್ಲೂ ಅಲ್ಲಿನ ವಿದ್ಯಾರ್ಥಿಗಳಿಂದ ನಿಮ್ಮ ಮಗ ಕೂಡ ದುಶ್ಚಟಗಳಿಗೆ ಒಳಗಾಗಬಹುದು ಎಂದು ಎಚ್ಚರಿಸಿದರು.

ಇದರಿಂದ ವಿಧಿ ಇಲ್ಲದೆ ಬಿಎಸ್ಸಿ ಓದಲು ಮೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿಗೆ ದಾಖಲಾದೆ. ಆದರೆ ಬಿಎಸ್ಸಿ ನಂತರ ವೈದ್ಯಕೀಯ ಶಿಕ್ಷಣ ಪಡೆಯಲು ಭೌತಶಾಸ್ತ್ರ ಓದಲೇಬೇಕು ಎಂದು ತರುವಾಯ ತಿಳಿಯಿತು. ಈ ಕಾರಣದಿಂದ ಅನಿವಾರ್ಯವಾಗಿ ಹೆಚ್ಚುವರಿಯಾಗಿ ಭೌತಶಾಸ್ತ್ರ ವಿಷಯವನ್ನು ಯುವರಾಜ ಕಾಲೇಜಿನಲ್ಲಿ ಓದಬೇಕಾಯಿತು ಎಂದು ಡಾ.ಜಾವಿದ್ ನಯೀಂ ಅವರು ವೈದ್ಯಕೀಯ ಶಿಕ್ಷಣ ಪಡೆಯಲು ಎದುರಾದ ಅಡೆತಡೆಗಳನ್ನು ವಿವರಿಸಿದರು.

ಎಲ್ಲಾ ರೀತಿಯ ಅಡೆತಡೆಗಳನ್ನು ದಿಟ್ಟವಾಗಿ ಎದುರಿಸಿ, ನಿರಂತರ ಪ್ರಯತ್ನ ಹಾಗೂ ಹಲವು ಸವಾಲುಗಳನ್ನು ಮೆಟ್ಟಿನಿಂತು ತಮ್ಮ ತಂದೆಯವರ ಕನಸು ನನಸು ಮಾಡಿದೆ ಎಂದು ವೈದ್ಯ ಡಾ.ಜಾವಿದ್ ನಯೀಂ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಅರುಣಾಚಲ ಪ್ರದೇಶದ ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳೂ ಆದ ಮೈಸೂರು ಲಿಟ್ರರಿ ಅಸೋಸಿಯೇಷನ್ ಅಧ್ಯಕ್ಷ ಡಾ.ಕೆ.ಸಿ.ಬೆಳ್ಳಿಯಪ್ಪ ಅತಿಥಿಗಳನ್ನು ಪರಿಚಯಿಸಿದರು. ವೆಸ್ಲಿ ಅವರು ವಂದನಾರ್ಪಣೆ ಮಾಡಿದರು.

ನಾಳೆ ಹೆಚ್.ಡಿ.ಕೋಟೆಯಲ್ಲಿ ರಾಷ್ಟ್ರೀಯ ಸಿಕಲ್ ಸೆಲ್ ನಿವಾರಣಾ ಅಭಿಯಾನಕ್ಕೆ ಚಾಲನೆ

ಮೈಸೂರು,ಜೂ.25(ಎಂಟಿವೈ)–ಬಡುಕಟ್ಟು ಸಮುದಾಯದ ಜನರಲ್ಲಿರುವ ರಕ್ತಹೀನತೆ ಹೋಗಲಾಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ 'ರಾಷ್ಟ್ರೀಯ ಸಿಕಲ್ ಸೆಲ್' ನಿವಾರಣಾ ಅಭಿಯಾನದ ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಜೂನ್ 27ರಂದು ಸಂಜೆ 4 ಗಂಟೆಗೆ ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಲಿದ್ದಾರೆ.

ಕೆಂಪು ರಕ್ತಕಣಗಳ ಅಸ್ವಸ್ಥತೆಯ ಖಾಯಿಲೆಯಾಗಿರುವ ಸಿಕಲ್ ಸೆಲ್ ರಕ್ತಹೀನತೆ ಖಾಯಿಲೆಯು ವಂಶಾವಳಿಯಾಗಿ ಬರಲಿದ್ದು, ಈ ಸಮಸ್ಯೆಯಿಂದ ವಿವಿಧ ಆರೋಗ್ಯ ಸಮಸ್ಯೆಗಳು ಕಂಡು ಬರುತ್ತವೆ. ವಿಶೇಷವಾಗಿ ಕಾರಣವೇ ಇಲ್ಲದೆ ನೋವು ಕಂಡು ಬರುವುದು, ವಿವಿಧ ಸೋಂಕಿಗೆ ತುತ್ತಾಗುವುದು, ಪಾರ್ಶ್ವವಾಯುವಿಗೆ ತುತ್ತಾಗುವ ಲಕ್ಷಣವಿರುತ್ತದೆ. ಈ ಖಾಯಿಲೆಯು ಬುಡಕಟ್ಟು ಜನರಲ್ಲೇ ಹೆಚ್ಚಾಗಿ ಕಂಡು ಬರುತ್ತಿರುವುದರಿಂದ ಕೇಂದ್ರ ಸರ್ಕಾರ 'ರಾಷ್ಟ್ರೀಯ ಸಿಕಲ್ ಸೆಲ್' ಅಭಿಯಾನ ನಡೆಸಲು ಉದ್ದೇಶಿಸಿದೆ.

ಕರ್ನಾಟಕದಲ್ಲಿ ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು ಹಾಗೂ ಉಡುಪಿ ಜಿಲ್ಲೆಗಳಲ್ಲಿ ವಾಸಿಸುವ ಬುಡಕಟ್ಟು ಜನರಲ್ಲಿ ರಕ್ತಹೀನತೆಯ ಅಂಶಗಳು ದೃಢಪಟ್ಟಿದ್ದು, ರಾಜ್ಯ ಮಟ್ಟದ ಸಿಕಲ್ ಸೆಲ್ ನಿವಾರಣಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಿನಿಂದಲೇ ಚಾಲನೆ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ರಾಜ್ಯದಲ್ಲಿ ಜೇನು ಕುರುಬ, ಬೆಟ್ಟ ಕುರುಬ, ಬೇಡ, ಎರವ, ಸೋಲಿಗ ಸಮುದಾಯದಲ್ಲಿ ರಕ್ತಹೀನತೆಯ ಅಂಶಗಳು ಕಂಡು ಬರುತ್ತಿದ್ದು, ಈ ಹಿನ್ನೆಲೆಯಲ್ಲಿ ಬುಡಕಟ್ಟು ಸಮುದಾಯದವರನ್ನೇ ಗುರಿಯಾಗಿಸಿಕೊಂಡು ಈ ಅಭಿಯಾನ ನಡೆಸಲಾಗುತ್ತಿದೆ.

2047ರೊಳಗೆ ದೇಶವನ್ನು ಸಿಕಲ್ ಸೆಲ್ ರಕ್ತಹೀನತೆ ನಿರ್ಮೂಲನೆ ಮಾಡುವ ಗುರಿಯನ್ನು ಹೊಂದಲಾಗಿದ್ದು, ಜೂ.27ರಂದು ರಾಷ್ಟ್ರೀಯ ಅಭಿಯಾನವನ್ನು ಮಧ್ಯಪ್ರದೇಶದ ಶಾಹ್ದೋಲ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಅದೇ ದಿನ (ಜೂ.27) ಸಂಜೆ 4 ಗಂಟೆಗೆ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆಯ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಲಿದ್ದಾರೆ. ಹೆಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹಾಗೂ ಇನ್ನಿತರರು ಉಪಸ್ಥಿತರಿರಲಿದ್ದಾರೆ.

> "ಮೈಸೂರು ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯಕ್ಕೆ ಸೇರಿರುವ 1.60 ಲಕ್ಷ ಜನರನ್ನು ಸ್ಕ್ರೀನಿಂಗ್ ಮಾಡಬೇಕಾಗಿದೆ. ಜೇನು ಕುರುಬರು, ಸೋಲಿಗರು ಸೇರಿದಂತೆ ವಿವಿಧ ಪಂಗಡದ ಬುಡಕಟ್ಟು ಜನರಲ್ಲಿ ಸಿಕಲ್ ಸೆಲ್ ರಕ್ತಹೀನತೆ ಸಮಸ್ಯೆ ಕಂಡು ಬರುತ್ತಿದೆ. ಈ ಹಿಂದೆ ಹೆಚ್.ಡಿ.ಕೋಟೆ ತಾಲೂಕಿನ ಅಣ್ಣೂರು, ಡಿ.ಬಿ.ಕುಪ್ಪೆ ಹಾಡಿ ಸೇರಿದಂತೆ ವಿವಿಧ ಹಾಡಿಗಳಲ್ಲಿ 3 ಸಾವಿರ ಮಂದಿಯನ್ನು ಸ್ಕ್ರೀನಿಂಗ್ ಮಾಡಲಾಗಿತ್ತು. ಅವರಲ್ಲಿ 218 ಮಂದಿಗೆ ಸಿಕಲ್ ಸೆಲ್ ರಕ್ತಹೀನತೆಯ ಜೀನ್ಸ್ ಕಂಡು ಬಂದಿದೆ. 41 ಮಂದಿ ರಕ್ತಹೀನತೆಯಿಂದ ಬಳಲುತ್ತಿರುವುದು ಗೋಚರಿಸುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸಿಕಲ್ ಸೆಲ್ ನಿವಾರಣಾ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. **–ಡಾ.ಕೆ.ಹೆಚ್.ಪ್ರಸಾದ್, ಡಿಹೆಚ್‌ಓ**
>
> 

ಎರಡೂ ಕಡೆ ಸೋತು ಮನೆಯಲ್ಲಿ ಕುಳಿತಿದ್ದೇನೆ!

ಪಕ್ಷ ಅವಕಾಶ ಕೊಟ್ಟರೆ ಕೆಲಸ ಮಾಡುತ್ತೇನೆ

ಬೆಂಗಳೂರು,ಜೂ.25–ಮಾಜಿ ಸಚಿವ, ವಿ.ಸೋಮಣ್ಣ ಅವರು ಈ ಬಾರಿ ವಿಧಾನ ಸಭೆ ಚುನಾವಣೆಯಲ್ಲಿ ಮೈಸೂರಿನ ವರುಣ ಮತ್ತು ಚಾಮರಾಜನಗರ ಕ್ಷೇತ್ರದಲ್ಲಿ ಸ್ಪರ್ಧಿಸಿ ಎರಡೂ ಕಡೆ ಸೋತಿದ್ದಾರೆ.

ಸೋಲಿನ ಕಹಿ ಅವರನ್ನು ಆಗಾಗ ಕಾಡುತ್ತಲೇ ಇರುತ್ತದೆ. ಸೋಲಿನ ಬಳಿಕ ಇಂದು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿಯಲ್ಲಿ ನಡೆದ ಬಿಜೆಪಿಯ ಕಾನೂನು ಪ್ರಕೋಷ್ಠ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆ ಸೋಲಿನ ಬಳಿಕ ಮೊದಲ ಬಾರಿ ಕಚೇರಿಗೆ ಬಂದಿದ್ದೇನೆ. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ ಎಂಬುದನ್ನು ನಂಬಿದವನು ನಾನು. ಗೋವಿಂದರಾಜನಗರದಲ್ಲಿ 480 ಕೋಟಿ ರೂಪಾಯಿಗೂ ಹೆಚ್ಚಿನ ಕೆಲಸ ಮಾಡಿದ್ದೇನೆ. ಆಸ್ಪತ್ರೆ, ಶಾಲೆ, ಕಾಲೇಜು ಸೇರಿ ಹಲವು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ನಾನು ಮನೆಯಲ್ಲಿ ಆರಾಮಾಗಿ ಮಲಗಿದ್ದರೂ ಗೆಲ್ಲುತ್ತಿದೆ. ಆದರೆ ಪಕ್ಷ ನೀಡಿದ ಟಾಸ್ಕ್ ಪೂರೈಸಲು ಕ್ಷೇತ್ರ ಬಿಟ್ಟು ಹೋದೆ. ವರುಣಾ ಹಾಗೂ ಚಾಮರಾಜನಗರ ಎರಡೂ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತು ಈಗ ನಿರುದ್ಯೋಗಿಯಾಗಿ ಮನೆಯಲ್ಲಿ ಕುಳಿತಿದ್ದೇನೆ ಎಂದರು.

ರಾಜ್ಯಾಧ್ಯಕ್ಷ ಸ್ಥಾನ ಕೇಳಿದ್ದೇನೆ: ನಾನು ಹೈಕಮಾಂಡ್ ಬಳಿ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ. ನನಗೆ ಇತಿಮಿತಿ ಇದೆ ಫೋರ್ ಸಿಕ್ಸ್ ಎಲ್ಲ ಇಲ್ಲ ಹೊಡೆಯುತ್ತೇನೆ ಅಂತ ಹೇಳಿದ್ದೇನೆ. ಈಗ ಬೋಲ್ಡ್ ಕೂಡ ಆಗಿದ್ದೇನೆ. ಪಕ್ಷ ಕೊಡುವ ಸಂದೇಶದ ಪ್ರಕಾರ ಕೆಲಸ ಮಾಡುತ್ತೇನೆ. ಡಬಲ್ ಸ್ಟ್ಯಾಂಡರ್ಡ್ ನನಗೆ ಇಲ್ಲ. ಎಲ್ಲ ಪಕ್ಷಗಳಲ್ಲೂ ಕೆಲಸ ಮಾಡಿದ್ದೇನೆ. ಬಿಜೆಪಿಗೆ ಬಂದು ಎಂತೆಂತಹ ಸಂದರ್ಭದಲ್ಲೂ ಕೆಲಸ ಮಾಡಿದ್ದೇನೆ. ನಾನು ಸನ್ಯಾಸಿ ಅಲ್ಲ, ನನಗೂ ಆಸೆ–ಆಕಾಂಕ್ಷೆಗಳಿವೆ. ಈಗಲೂ ಅವಕಾಶ ಕೊಟ್ಟರೆ ಮಾಡುತ್ತೇನೆ ಎಂದು ಪರೋಕ್ಷವಾಗಿ ರಾಜ್ಯಾಧ್ಯಕ್ಷ ಸ್ಥಾನ ನಿಭಾಯಿಸುವ ಇಂಗಿತ ವ್ಯಕ್ತಪಡಿಸಿದರು.



ದೇವರಾಜ ಉಪವಿಭಾಗದಿಂದ ರೌಡಿ ಪರೇಡ್: ಖಡಕ್ ಎಚ್ಚರಿಕೆ ನೀಡಿದ ಎಸಿಪಿ





ಮೈಸೂರು, ಜೂ.25(ಎಸ್‌ಬಿಡಿ)– ಮೈಸೂರು ನಗರ ಪೊಲೀಸ್ ದೇವರಾಜ ಉಪವಿಭಾಗದ ವತಿಯಿಂದ ಭಾನುವಾರ ಬೆಳಗ್ಗೆ ರೌಡಿಗಳ ಪರೇಡ್ ನಡೆಸಿ, ಕಾನೂನು ಬಾಹಿರ ಚಟುವಟಿಕೆ ನಡೆಸದಂತೆ ಎಚ್ಚರಿಕೆ ನೀಡಲಾಯಿತು.

ದೇವರಾಜ ಉಪ ವಿಭಾಗದ ಎಸಿಪಿ ಶಾಂತ ಮಲ್ಲಪ್ಪ, ತಮ್ಮ ಕಾರ್ಯ ವ್ಯಾಪ್ತಿಯ ಆಲನಹಳ್ಳಿ, ನಜರ್‌ಬಾದ್, ಲಷ್ಕರ್, ಉದಯಗಿರಿ ಹಾಗೂ ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯ 131 ರೌಡಿಶೀಟರ್‌ಗಳನ್ನು ಆಲನಹಳ್ಳಿ ಪೊಲೀಸ್ ಠಾಣೆ ಆವರಣಕ್ಕೆ ಕರೆಸಿ, ಪರೇಡ್ ನಡೆಸಿದರು. ವೃತ್ತಿ ಬಗ್ಗೆ ಒಬ್ಬೊಬ್ಬರನ್ನೇ ವಿಚಾರಿಸಿ, ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಂಡರು. ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಿ ಜೀವನ ನಡೆಸಬೇಕು. ಯಾವುದೇ ಕಾನೂನುಬಾಹಿರ ಚಟುವಟಿಕೆಗಳನ್ನು ನಡೆಸಕೂಡದು. ಸಾರ್ವಜನಿಕರಲ್ಲಿ ಭಯ ಹುಟ್ಟಿಸುವಂತೆ ನಡೆದುಕೊಳ್ಳಬಾರದು. ಯಾವುದಾದರೂ ವೃತ್ತಿ ಯನ್ನು ನಿಷ್ಠೆಯಿಂದ ಮಾಡಿಕೊಂಡು, ಕುಟುಂಬದವರೊಂದಿಗೆ ನೆಮ್ಮದಿಯಿಂದ ಜೀವನ ನಡೆಸಬೇಕು. ಯಾರಾದರೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅಗತ್ಯಬಿದ್ದರೆ ಗೂಂಡಾ ಕಾಯ್ದೆಯಡಿ ಬಂಧಿಸಲಾಗುವುದು ಎಂದು ಖಡಕ್ ಎಚ್ಚರಿಕೆ ನೀಡಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಎಸಿಪಿ ಶಾಂತಮಲ್ಲಪ್ಪ, ದೇವರಾಜ ಉಪವಿಭಾಗ ವ್ಯಾಪ್ತಿಯ ರೌಡಿಶೀಟರ್‌ಗಳಿಗೆ ಸೂಚನೆ ನೀಡಿ, ಕರೆಸಲಾಗಿತ್ತು. ಒಳ್ಳೆಯ ರೀತಿಯಲ್ಲಿ ಜೀವನ ನಡೆಸುವಂತೆ ತಿಳಿವಳಿಕೆ ನೀಡುವುದರ ಜೊತೆಗೆ ಕಾನೂನುಬಾಹಿರ ಚಟುವಟಿಕೆ ನಡೆಸಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾಗಿ ತಿಳಿಸಿದರು. ರೌಡಿಪರೇಡ್ ವೇಳೆ ಇನ್ಸ್‌ಪೆಕ್ಟರ್‌ಗಳಾದ ಪಿ.ಪಿ.ಸಂತೋಷ್, ಜೀವನ್, ಪಿ.ಕೆ.ರಾಜು, ಟಿ.ಬಿ.ಶಿವಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳು, ಸಿಬ್ಬಂದಿ ಇದ್ದರು.

ರಾಜ್ಯಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ

ವಿವಿಧ ಜಿಲ್ಲೆಯ 300ಕ್ಕೂ ಹೆಚ್ಚು ಯೋಗಪಟುಗಳು ಭಾಗಿ



ಮೈಸೂರು, ಜೂ.25(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಪೆವಿಲಿಯನ್ ಮೈದಾನದಲ್ಲಿರುವ ಯೋಗ ಮಂದಿರದಲ್ಲಿ ಭಾನುವಾರ ನಡೆದ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಯಲ್ಲಿ ವಿವಿಧ ಜಿಲ್ಲೆಗಳ 300ಕ್ಕೂ ಹೆಚ್ಚು ಯೋಗಪಟುಗಳು ಪಾಲ್ಗೊಂಡು, ಯೋಗದ ವಿವಿಧ ಆಸನ ಪ್ರದರ್ಶಿಸಿ ಗಮನ ಸೆಳೆದರು.

ಬಸವರಲಿ ಯೋಗ ಪ್ರತಿಷ್ಠಾನವು ಪೈಲ್ವಾನ್ ಯಜಮಾನ್ ಶ್ರೀ ಬಸವರಾಜು ಅವರ ಸ್ಮರಣಾರ್ಥ ಆಯೋಜಿಸಿದ್ದ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಗೆ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ವಿವಿಧ ವಯೋಮಾನ 360ಕ್ಕೂ ಹೆಚ್ಚು ಮಂದಿ ಯೋಗಪಟುಗಳು ಪಾಲ್ಗೊಂಡಿದ್ದರು. ವಿವಿಧ ವಯೋಮಾನದ ಪಟುಗಳಿಗೆ ಪ್ರತ್ಯೇಕ ಸ್ಪರ್ಧೆ ನಡೆಸಲಾಯಿತು. ನಾಲ್ಕು ವೇದಿಕೆಯಲ್ಲಿ ಸ್ಪರ್ಧೆ ಜರುಗಿದವು. 10 ವರ್ಷದೊಳಗಿನ ಬಾಲಕ–ಬಾಲಕಿಯರು, 11ರಿಂದ 14 ವರ್ಷದ ಬಾಲಕ–ಬಾಲಕಿಯರು, 15ರಿಂದ 18 ವರ್ಷದ ಯುವಕ–ಯುವತಿಯರು, 19ರಿಂದ 25 ವರ್ಷದ ಯುವಕ–ಯುವತಿಯರು, 26 ರಿಂದ 30 ವರ್ಷದ ಪುರುಷರು ಮತ್ತು ಮಹಿಳೆಯರು, 31 ರಿಂದ 35 ವರ್ಷದ ಪುರುಷರು ಮತ್ತು ಮಹಿಳೆಯರು, 36 ರಿಂದ 45 ವರ್ಷದ ಪುರುಷರು ಮತ್ತು ಮಹಿಳೆಯರು, 45 ವರ್ಷದ ಮೇಲ್ಪಟ್ಟ ಪುರುಷರು ಮತ್ತು ಮಹಿಳೆಯರು ಯೋಗಾಸನ ಸ್ಪರ್ಧೆಯಲ್ಲಿ ಪಾಲ್ಗೊಂಡು ಯೋಗದ ವಿವಿಧ ಆಸನ ಪ್ರದರ್ಶಿಸಿದರು.

ಸ್ಪರ್ಧೆಯಲ್ಲಿ ವೀರಭದ್ರಾಸನ, ವೃಕ್ಷಾಸನ, ಪರಿಪೂರ್ಣ ನಾವಾಸನ, ಪೂರ್ವೋತ್ತನಾಸನ, ಹಲಾಸನ, ಉತ್ಥಿತ ತ್ರಿಕೋಣಾಸನ, ಉಷ್ಟ್ರಾಸನ, ಚಕ್ರಾಸನ, ಪರಿಪೂರ್ಣ ನಾವಾಸನ, ಜಾನು ಶೀರ್ಷಾಸನ, ಮಕರಾಸನ ಸೇರಿದಂತೆ ವಿವಿಧ ಆಸನಗಳನ್ನು ಪ್ರದರ್ಶಿಸಲು ಸೂಚನೆ ನೀಡಲಾಗಿತ್ತು. ಸ್ಪರ್ಧಾ ನಿಯಮಾವಳಿಯಂತೆ ಯೋಗಪಟುಗಳು ಯೋಗ ಪ್ರದರ್ಶಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ ನಿರ್ದೇಶಕ ಡಾ.ಸಿ.ವೆಂಕಟೇಶ್ ಮಾತನಾಡಿ, ಎಲ್ಲರೂ ಆರೋಗ್ಯ ಕಾಪಾಡಿಕೊಳ್ಳಲು ಯೋಗಾಭ್ಯಾಸ ಮಾಡಬೇಕು. ಯೋಗವು ರೋಗ ನಿವಾರಿಸುತ್ತದೆ. ಮೈಸೂರಲ್ಲಿ ಪ್ರತಿದಿನ 10 ಸಾವಿರಕ್ಕೂ ಹೆಚ್ಚು ಮಂದಿ ಯೋಗಾಭ್ಯಾಸ ಮಾಡುತ್ತಾರೆ. ಇತ್ತೀಚೆಗೆ ಗ್ರಾಮೀಣ ಪ್ರದೇಶದಲ್ಲಿಯೂ ಯೋಗ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಮೈಸೂರಲ್ಲಿ ಹಲವಾರು ಯೋಗ ದಾಖಲೆಗಳು ಸೃಷ್ಟಿಯಾಗಿವೆ. ಇದಕ್ಕೆ ಪೂರಕವಾಗಿ ಮತ್ತಷ್ಟು ಯೋಗ ಚಟುವಟಿಕೆ ಹೆಚ್ಚಾಗುವಂತೆ ಉತ್ತೇಜನ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಎಂ.ಎಸ್.ಎಸ್. ಕುಮಾರ್, ಮಂಗಳೂರು ವಿವಿ ಸಿಂಡಿಕೇಟ್ ಸದಸ್ಯ ಬಿ.ಎಂ.ಪ್ರಸನ್ನ, ಬಸವರಲಿ ಯೋಗ ಪ್ರತಿಷ್ಠಾನ ಸಂಸ್ಥಾಪಕ ಅಧ್ಯಕ್ಷ ಬಿ.ರವಿ, ಧ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಅರುಣ್ ಪಾಟೀಲ್, ನಂಜನಗೂಡು ನಗರಸಭೆ ಸದಸ್ಯ ಶ್ರೀಕಂಠಸ್ವಾಮಿ ಇದ್ದರು.

ಮಾಜಿ ಸಚಿವ ಆರ್.ಅಶೋಕ್ ಹೇಳಿಕೆಗೆ ಕುರುಬರ ಸಂಘ ಖಂಡನೆ



ಬಿ.ಸುಬ್ರಹ್ಮಣ್ಯ

ಮೈಸೂರು,ಜೂ.25– ಮುಖ್ಯಮಂತ್ರಿ ಸಿದ್ದರಾಮಯ್ಯ ಮತಾಂತರದ ರಾಯಭಾರಿ ಎಂದಿರುವ ಬಿಜೆಪಿ ಮಾಜಿ ಸಚಿವ ಆರ್.ಅಶೋಕ್ ಅವರ ಹೇಳಿಕೆಯನ್ನು ಕರ್ನಾಟಕ ಪ್ರದೇಶ ಕುರುಬರ ಸಂಘ ತೀವ್ರವಾಗಿ ಖಂಡಿಸಿದೆ.


ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಹಿಜಾಬ್, ಹಲಾಲ್ ಬಗ್ಗೆ ಇಲ್ಲಸಲ್ಲದ ವಿವಾದ ಎಬ್ಬಿಸಿ ರಾಜ್ಯದಲ್ಲಿ ಶಾಂತಿ ಕದಡಿದ್ದು ನಿಮ್ಮದೇ ಸರ್ಕಾರ. ಹಿಂದೂ ಮುಸ್ಲಿಮರ ನಡುವೆ ವೈಮನಸ್ಯ ಉಂಟು ಮಾಡುತ್ತಿದ್ದದ್ದು ನಿಮ್ಮದೇ ಸರ್ಕಾರ. ಸಾಲದ್ದಕ್ಕೆ ವಿಶ್ವಮಾನವ ಸಂದೇಶ ನೀಡಬೇಕಿದ್ದ ಶಾಲೆಗಳಲ್ಲೂ ರಾಜಕೀಯ ತೂರಿಸಿ ವಿದ್ಯಾರ್ಥಿಗಳ ಮನಸ್ಸಿನಲ್ಲಿ ವಿಷ ಬೀಜ ಬಿತ್ತಲು ಹೊರಟಿದ್ದವರು ನಿಮ್ಮದೇ ಪಕ್ಷದ ನಾಯಕರು. ಜನಾನುರಾಗಿ ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡುವ ನೈತಿಕತೆ ನಿಮಗಿಲ್ಲ ಎಂದು ಕಿಡಿಕಾರಿದ್ದಾರೆ.

ನಿಮ್ಮ ಈ ನೀತಿಗಳಿಂದ ಬೇಸತ್ತಿದ್ದ ಜನ ರಾಜ್ಯದಲ್ಲಿ ಬದಲಾವಣೆ ಬಯಸಿದ್ದರು, ಶಾಂತಿ ಸುವ್ಯವಸ್ಥೆ ಬರಬೇಕೆಂದು ಬಯಸಿದ್ದರು. ಆದ್ದರಿಂದಲೇ ಜನ ಸಿದ್ದರಾಮಯ್ಯ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಆಗಿ ಆಯ್ಕೆ ಮಾಡಿದ್ದಾರೆ. ಈಗಾಗಲೇ ಜನ ನಿಮಗೆ ತಕ್ಕ ಪಾಠ ಕಲಿಸಿದ್ದಾರೆ. ಇನ್ನಾದರೂ ಹಿಂದೂ ಮುಸ್ಲಿಮರ ನಡುವೆ ದ್ವೇಷ ಭಾವನೆ ಬೆಳೆಸುವುದನ್ನು ಬಿಟ್ಟುಬಿಡಿ ಎಂದು ಸಲಹೆ ನೀಡಿದ್ದಾರೆ.


ಎಲ್ಲ ಸಮುದಾಯದಲ್ಲೂ ಒಳ್ಳೆಯವರು, ಕೆಡಕು ಮಾಡುವವರು ಇದ್ದೇ ಇರುತ್ತಾರೆ. ಕೆಡಕು ಮಾಡುವವರಿಗೆ ತಕ್ಕ ಪಾಠ ಕಲಿಸೋಣ, ಒಳ್ಳೆಯದನ್ನು ಸಮಾಜಕ್ಕೆ ಹಂಚೋಣ. ನೀವು ಆಧಾರ ರಹಿತ 'ಕೇರಳ ಸ್ಟೋರಿ' ಕಥೆಯನ್ನು ಜನರ ಮುಂದೆ ಹೇಳಿ ಶಾಂತಿ ಕದಡ ಬೇಡಿ ಎಂದು ಕಿವಿಮಾತು ಹೇಳಿದ್ದಾರೆ.

ಅಲ್ಲದೇ ಮತ್ತೆ ಈ ರೀತಿ ಮುಖ್ಯಮಂತ್ರಿಗಳ ವಿರುದ್ಧ ಹಗುರವಾಗಿ ಮಾತನಾಡಿದರೆ ಉಗ್ರ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಎಚ್ಚರಿಕೆ ನೀಡಿದ್ದಾರೆ.

ಬಸ್ತಿ ಹೊಸಕೋಟೆ ಗೊಮ್ಮಟನಿಗೆ ಮಹಾಮಸ್ತಕಾಭಿಷೇಕ







ಕೆ.ಆರ್.ಪೇಟೆ, ಜೂ.25– ತಾಲೂಕಿನ ಬೂಕನಕೆರೆ ಹೋಬಳಿ ಬಸ್ತಿ ಹೊಸಕೋಟೆ ಕೆಆರ್‌ಎಸ್ ಹಿನ್ನೀರಿನಲ್ಲಿರುವ ಗೊಮ್ಮಟನಿಗೆ ಮಹಾಮಸ್ತಕಾಭಿಷೇಕ ಸಾವಿರಾರು ಜೈನ ಬಂಧುಗಳ ಸಮಕ್ಷಮದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು.

ಗುಜರಾತ್‌ನಿಂದ ಆಗಮಿಸಿದ್ದ ಜೈನ ಯತಿಗಳಾದ ಅಮೋಘಕೀರ್ತಿ ಮಹಾರಾಜರು ಮತ್ತು ಅಮರಕೀರ್ತಿ ಮಹಾರಾಜ ಯತಿಗಳು ಬಸ್ತಿ ಗುಮ್ಮಟನಿಗೆ ವಿಶೇಷ ಮಹಾಮಸ್ತಕಾಭಿಷೇಕ ನೆರವೇರಿಸಿ ಭಕ್ತರಿಗೆ ದರ್ಶನ ನೀಡಿ ಆಶೀರ್ವಚನ ನೀಡಿದರು.

ಚಾತುರ್ಮಾಸ ಅಂಗವಾಗಿ ಪವಿತ್ರ ಜೈನ ಕ್ಷೇತ್ರ ಹಾಸನ ಜಿಲ್ಲೆಯ ಶ್ರವಣಬೆಳಗೊಳಕ್ಕೆ ತೆರಳುವ ವೇಳೆ ದಿಗಂಬರ ಜೈನ ಯತಿಗಳು ಕೃಷ್ಣರಾಜಪೇಟೆ ತಾಲೂಕಿನ ಬಸ್ತಿ ಹೊಸಕೋಟೆ ಗ್ರಾಮದಲ್ಲಿ ಕೃಷ್ಣರಾಜಸಾಗರ ಜಲಾಶಯದ ಹಿನ್ನೀರಿಗೆ ಹೊಂದಿಕೊಂಡಂತೆ ಏಕಾಂಗಿಯಾಗಿ ನೆಲೆ ನಿಂತಿರುವ 18 ಅಡಿ ಎತ್ತರದ ಗೊಮ್ಮಟ ವಿಗ್ರಹಕ್ಕೆ ವಿವಿಧ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿ ಮಹಾಮಸ್ತಕಾಭಿಷೇಕವನ್ನು ನೆರವೇರಿಸಿದರು.

ತಾಲೂಕಿನ ಬಸ್ತಿ ಕ್ಷೇತ್ರಕ್ಕೆ ಆಗಮಿಸಿದ ಮಹಾರಾಜ ಯತಿವರ್ಯರು 2 ದಿನಗಳ ಕಾಲ ಬಸ್ತಿ ಗೊಮ್ಮಟನ ಸನ್ನಿಧಿಯಲ್ಲಿಯೇ ವಾಸ್ತವ್ಯ ಹೂಡಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ವೀಕ್ಷಿಸಿ ಅಗತ್ಯ ಸಲಹೆ ಸೂಚನೆ ನೀಡಿದರು. ಮಹಾಮಸ್ತಕಾಭಿಷೇಕ ಸಮಾರಂಭಕ್ಕೆ ಸಾಲಿಗ್ರಾಮ, ಮೈಸೂರು, ಬೆಂಗಳೂರು, ಬೇಲೂರು, ಚಾಮರಾಜನಗರ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಜೈನ ಧರ್ಮದ ಬಂಧುಗಳು ಯತಿಗಳ ದರ್ಶನ ಪಡೆದು ಪಾದಪೂಜೆ ನೆರವೇರಿಸಿ ಕೃತಾರ್ಥರಾದರು.

ಬಸ್ತಿ ಗೊಮ್ಮಟ ಕ್ಷೇತ್ರದಲ್ಲಿ 2 ದಿನಗಳ ಕಾಲ ವಾಸ್ತವ್ಯ ಹೂಡಿದ್ದ ಯತಿವರ್ಯರು ಅರಿಶಿಣ, ಕುಂಕುಮ, ಶ್ರೀಗಂಧ, ಎಳನೀರು, ಜೇನುತುಪ್ಪ, ಹಾಲು, ಮೊಸರು, ಪವಿತ್ರ ಗಂಗಾಜಲ ಸೇರಿದಂತೆ ಸಾವಿರಾರು ಕಳಶಗಳಲ್ಲಿ ಸಂಗ್ರಹಿಸಿದ್ದ ವಿವಿಧ ಬಗೆಯ ಜಲಾಭಿಷೇಕದ ಮೂಲಕ ಮಸ್ತಕಾಭಿಷೇಕ ನೆರವೇರಿಸಿದರು.

12ನೇ ಶತಮಾನದಲ್ಲಿ ಹೊಯ್ಸಳ ಚಕ್ರವರ್ತಿ ಬಿಟ್ಟಿದೇವನ ಮಂತ್ರಿಯಾಗಿದ್ದ ಪುಣಿಸಿಮಯ್ಯನು 18 ಅಡಿ ಎತ್ತರದ ಗೊಮ್ಮಟನ ವಿಗ್ರಹವನ್ನು ಪ್ರತಿಷ್ಠಾಪಿಸಿದನೆಂದು ಇಲ್ಲಿನ ಶಾಸನಗಳು ತಿಳಿಸುತ್ತವೆ. ಕೃಷ್ಣರಾಜಸಾಗರ ಜಲಾಶಯದ ನಿರ್ಮಾಣದ ನಂತರ ಜಲಾಶಯದ ಹಿನ್ನೀರಿನಲ್ಲಿ ಬಸದಿ ಹೊಸಕೋಟೆ ಗ್ರಾಮವು ಮುಳುಗಡೆಯಾಗಿ, ಗ್ರಾಮವು ಎತ್ತರದ ಪ್ರದೇಶಕ್ಕೆ ಸ್ಥಳಾಂತರಗೊಂಡ ನಂತರ ಜಲಾಶಯದ ಹಿನ್ನೀರಿನ ಪಕ್ಕದಲ್ಲಿ ನಿಂತಿದ್ದ ಗೊಮ್ಮಟ ಮೂರ್ತಿಯು ಈಗ ಅನಾಥನಾಗಿ ಏಕಾಂಗಿಯಾಗಿ ಇಂದಿಗೂ ಅಲ್ಲಿಯೇ ನಿಂತಿದ್ದಾನೆ. ಇತ್ತೀಚಿನ ಕೆಲವು ಜೈನ ಸಂಘಟನೆಗಳು ಬಸ್ತಿ ಗೊಮ್ಮಟ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿವೆ. ಜೈನಧರ್ಮದ ಹಿರಿಯ ಮುಖಂಡರಾದ ದಿವಂಗತ ನಾಭಿರಾಜಯ್ಯ ಮತ್ತು ಅವರ ಸಹೋದರರಾದ ಡಾ. ಲಲಿತಾಂಗ ಕುಮಾರ್ ಅವರ ನೇತೃತ್ವದಲ್ಲಿ ಹಲವು ವರ್ಷಗಳಿಂದ ಬಸ್ತಿಗೊಮ್ಮಟನಿಗೆ ಮಹಾಮಸ್ತಕಾಭಿಷೇಕ ಹಾಗೂ ಪೂಜೆ ಪುರಸ್ಕಾರಗಳು ನಡೆಯುತ್ತಿವೆ. ಬಸ್ತಿ ಹೊಸಕೋಟೆ ಕ್ಷೇತ್ರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವತ್ತ ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ವಿವಿಧ ಜೈನ ಸಂಘಟನೆಗಳು ನಿರಂತರವಾಗಿ ಶ್ರಮಿಸುತ್ತಿವೆ.

ಬಸ್ತಿ ಗೊಮ್ಮಟ ಕ್ಷೇತ್ರ ತಾಲೂಕಿನ ಪುರಾತನ ಜೈನ ಕ್ಷೇತ್ರವಾಗಿದ್ದು, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಡೆ ಹಾಗೂ ಅವರ ಸಹೋದರರಾದ ಡಿ.ಸುರೇಂದ್ರ ಹೆಗಡೆ ಅವರು ಕೂಡ ಬಸ್ತಿ ಹೊಸಕೋಟೆ ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಿದ್ದಾರೆ. ಸಿ.ಎಸ್.ಪುಟ್ಟರಾಜು ಅವರು ಸಂಸದರ ನಿಧಿಯಿಂದ ಬಿಡುಗಡೆ ಮಾಡಿಸಿದ್ದ 38 ಲಕ್ಷ ರೂ. ವಿಶೇಷ ಅನುದಾನದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಪ್ರಗತಿಯಲ್ಲಿವೆ.

ಬಸ್ತಿ ಹೊಸಕೋಟೆಯಿಂದ ಶ್ರವಣಬೆಳಗೊಳಕ್ಕೆ ತೆರಳುವ ಮಾರ್ಗ ಮಧ್ಯ ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿದ ಯತಿವರ್ಯರು ಬಿಜಿಎಸ್ ಶಿಕ್ಷಣ ಸಂಸ್ಥೆ ಹಾಗೂ ಆದಿಚುಂಚನಗಿರಿ ಮಠದ ಬಗ್ಗೆ ಮಾಹಿತಿ ಪಡೆದರು. ಅಲ್ಲದೇ ಭೈರವೈಕ್ಯ ಡಾ.ಬಾಲಗಂಗಾಧರನಾಥ ಸ್ವಾಮೀಜಿಗಳ ಕೊಡುಗೆ ಸ್ಮರಿಸಿದರು. ಚಾತುರ್ಮಾಸದ ಅವಧಿಯಲ್ಲಿ 4 ತಿಂಗಳ ಕಾಲ ನಾವು ಪುಣ್ಯಕ್ಷೇತ್ರ ಶ್ರವಣಬೆಳಗೊಳದಲ್ಲಿಯೇ ತಂಗಲಿದ್ದೇವೆ. ಕಾರ್ಯಕ್ರಮದ ಮಧ್ಯದಲ್ಲಿ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠ ಹಾಗೂ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ ಪೀಠಾಧಿಪತಿಗಳಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿಗಳನ್ನು ಭೇಟಿ ಮಾಡಲಿದ್ದೇವೆ ಎಂದು ಯತಿವರ್ಯರು ತಿಳಿಸಿದರು.

ಕೆಂಪೇಗೌಡ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ



ಮಂಡ್ಯ, ಜೂ.25– ಮಂಡ್ಯದ ಗಾಂಧಿಭವನದಲ್ಲಿ ಭಾನುವಾರ ಕೆಂಪೇಗೌಡ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘವನ್ನು ಉದ್ಘಾಟಿಸಲಾಯಿತು.

ಸಂಘವನ್ನು ಉದ್ಘಾಟಿಸಿ ಮಾತನಾಡಿದ ನಿವೃತ್ತ ಪ್ರಾಂಶುಪಾಲ ಡಾ. ಸಿ.ಆರ್.ರಾಜು, ಅವಿಭಕ್ತ ಕುಟುಂಬದಲ್ಲಿದ್ದ ನಾವು ಇಂದು ವಿಭಕ್ತ ಕುಟುಂಬವಾಗಿ ಇದ್ದ ಭೂಮಿಯನ್ನು ತುಂಡು ತುಂಡು ಮಾಡಿ 5–10 ಗುಂಟೆ ಜಮೀನು ಹೊಂದಿದ್ದೇವೆ. ಎಲ್ಲಾ ಜಾತಿಗಳನ್ನೂ ಒಟ್ಟಿಗೆ ಕೊಂಡೊಯ್ಯುತ್ತಿದ್ದ ನಮ್ಮ ಸಮುದಾಯದ ಜನ ಇಂದು ಬೀದಿಗೆ ಬೀಳುವಂತಾಗಿದೆ. ಇದಕ್ಕೆ ನಮ್ಮನ್ನಾಳುವ ಜನಪ್ರತಿನಿಧಿಗಳೇ ಕಾರಣ. ನಮ್ಮ ಸಮುದಾಯದಿಂದ ಆಯ್ಕೆಯಾಗುವ ಪ್ರತಿನಿಧಿಗಳು ಸಮುದಾಯದ ಏಳಿಗೆ ಬಿಟ್ಟು ಸ್ವಹಿತಾಸಕ್ತಿಗಾಗಿ ಹೋರಾಟ ಮಾಡುತ್ತಾರೆ ಇದು ದುರ್ದೈವದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಒಂದು ಕಾಲದಲ್ಲಿ ಕೃಷಿಯನ್ನೇ ನಂಬಿ ಬದುಕುವ ವಾತಾವರಣ ಇತ್ತು. ಆದರೆ ಇಂದು ಎಂಟತ್ತು ಎಕರೆ ಜಮೀನಿದ್ದರೂ ಕೃಷಿ ಬಿಟ್ಟು ಎಲ್ಲರೂ ಹಸಿರು ಕಾರ್ಡು ಪಡೆದು ನ್ಯಾಯಬೆಲೆ ಅಂಗಡಿಗಳ ಮುಂದೆ ಅಕ್ಕಿಗಾಗಿ ಸಾಲುಗಟ್ಟಿ ನಿಲ್ಲುವ ಸ್ಥಿತಿ ಬಂದೊದಗಿದೆ. ಇದಕ್ಕೆ ಪ್ರಕೃತಿ ವಿಕೋಪಗಳು, ಸರಿಯಾಗಿ ಬೆಳೆ ಬಾರದೆ ನಷ್ಟ ಅನುಭವಿಸುವುದು, ಕೃಷಿ ವೆಚ್ಚ ದುಬಾರಿಯಾಗಿರುವುದು, ನಿರ್ವಹಣೆ ಹೆಚ್ಚಿರುವುದೇ ಕಾರಣವಾಗಿದೆ. ಇದಕ್ಕೆ ಪರಿಹಾರ ರೂಪಿಸಬೇಕಾದ ಜನಪ್ರತಿನಿಧಿಗಳು, ಒಕ್ಕಲಿಗರ ಸಂಘದ ಪ್ರತಿನಿಧಿಗಳು ಮಾತ್ರ ಸಮುದಾಯಕ್ಕಾಗಿ ಯಾವುದೇ ಯೋಜನೆ ರೂಪಿಸುತ್ತಿಲ್ಲ ಎಂದು ಆರೋಪಿಸಿದರು. ಒಕ್ಕಲಿಗರ ಸಂಘಕ್ಕೆ ಆಯ್ಕೆಯಾಗುವವರು, ಜನಪ್ರತಿನಿಧಿಗಳಾಗಿ ಆಯ್ಕೆಯಾಗುವವರೆಲ್ಲರೂ ಕೋಟ್ಯಾಧಿಪತಿಗಳೇ. ಯಾರೂ ಬಡವರಲ್ಲ. ಅವರು ಸ್ವಹಿತಾಸಕ್ತಿಗಾಗಿ ಆಯ್ಕೆಯಾಗಿ ಹೋಗುತ್ತಾರೆ ವಿನಃ ಸಮುದಾಯದ ಅಭಿವೃದ್ಧಿ ಚಿಂತನೆ ಮಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನಾದರೂ ಸಮುದಾಯದ ಏಳಿಗೆಗೆ ಯೋಜನೆ ರೂಪಿಸಿ, ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ಸಮಾರಂಭದಲ್ಲಿ ಸಂಘದ ಅಧ್ಯಕ್ಷ ನವೀನ್ ಕುಮಾರ್.ಎನ್.ಎಸ್ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕ ಎಂ.ಪಿ. ಶ್ರೀಕಾಂತ್, ಲೆಕ್ಕ ಪರಿ ಶೋಧಕ ಎಂ.ಎಲ್.ಶಂಕರ್, ಸಮಾಜ ಸೇವಕ ಎಚ್.ಎಸ್.ಶ್ರೀಕಾಂತ್, ಆಗಮ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ ಪದ್ಮ ಮೋಹನ್, ಮುಖಂಡರಾದ ಹನುಮೇಗೌಡ, ಸತ್ಯಮೂರ್ತಿ, ಜಗದೀಶ್ ಇತರರಿದ್ದರು.

3 ದಿನ ವಿದ್ಯುತ್ ವ್ಯತ್ಯಯ

ನಾಗಮಂಗಲ, ಜೂ.25– ತಾಲೂಕಿನ ಬೆಳ್ಳೂರು ಉಪವಿಭಾಗ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ.26 ರಿಂದ 28ರವರೆಗೆ ಆದಿಚುಂಚನಗಿರಿ ವಿದ್ಯುತ್ ವಿತರಣಾ ಕೇಂದ್ರದ ಲಕ್ಷ್ಮಿ ಪುರ ಎನ್‌ಜೆವೈ ಹಾಗೂ ಬ್ಯಾಲದಕೆರೆ ಫೀಡರ್, ಮುದಿಗೆರೆ ಎನ್‌ಜೆವೈ, ಆರಣಿ ಫೀಡರ್, ಹೊನ್ನೇನಹಳ್ಳಿ ಫೀಡರ್ ಮಾರ್ಗದ ಚುಂಚನಹಳ್ಳಿ ಹಾಗೂ ಆರಣಿ ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಗೆ ಆಗಮಿಸಿದ ಶಾಸಕ ರಮೇಶ್ ಬಾಬು ಬಂಡೀಸಿದ್ದೇಗೌಡರನ್ನು ಗ್ರಾಮದ ಕಾಂಗ್ರೆಸ್ ಮುಖಂಡರು ಸನ್ಮಾನಿಸಿದರು. ಈ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್.ಚಂದ್ರಶೇಖರ್, ಪಿಎಸಿಎಸ್ ಅಧ್ಯಕ್ಷ ಭೈರಪ್ಪ, ಗೋವಿಂದರಾಜು, ಸಿ.ದೇವರಾಜು, ಗಾಯತ್ರಿದೇವಿ, ಲಿಂಗರಾಜು, ಕುಮಾರ್, ರಾಮೇಗೌಡ ಸೇರಿದಂತೆ ಇನ್ನಿತರರಿದ್ದರು.

ಬೈಕ್‌ಗಳ ನಡುವೆ ಡಿಕ್ಕಿ: ಓರ್ವ ಸಾವು

ಪಾಂಡವಪುರ, ಜೂ.25– ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಆರತಿ ಉಕ್ಕಡ ಸಮೀಪ ಸಂಭವಿಸಿದೆ.



ತಾಲೂಕಿನ ಬಸ್ತಿಹಳ್ಳಿ ನಿವಾಸಿ, ಕಟ್ಟೇರಿ ಗ್ರಾಪಂ ವಾಟರ್‌ಮನ್ ಮಹದೇವ(48) ಸಾವನ್ನಪ್ಪಿದವರು. ಈತ ಭಾನುವಾರ ಮಧ್ಯಾಹ್ನ ತಮ್ಮ ಬೈಕ್‌ನಲ್ಲಿ ಆರತಿ ಉಕ್ಕಡಕ್ಕೆ ತೆರಳುವ ವೇಳೆ ಕಡತನಾಳು ಬಳಿ ಎದುರಿನಿಂದ ಬಂದ ಬೈಕ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡಿದ್ದ ಮಹದೇವು ಅವರನ್ನು ಡಿಕ್ಕಿ ಹೊಡೆದ ಬೈಕ್ ಸವಾರರು ಪಾಂಡವಪುರ ಆಸ್ಪತ್ರೆಗೆ ಕರೆತರುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಈ ವಿಷಯ ತಿಳಿಯುತ್ತಿದ್ದಂತೆ ಮಹದೇವು ಅವರ ಬೈಕ್‌ಗೆ ಡಿಕ್ಕಿ ಹೊಡೆದ ಬೈಕ್ ಸವಾರರು ತಮ್ಮ ಬೈಕ್ ಅನ್ನು ಬಿಟ್ಟು ಪರಾರಿಯಾಗಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಠಾಣಾ ವ್ಯಾಪ್ತಿಯ ಕೆನ್ನಾಳು ಉಪಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪಾಂಡವಪುರ ಆಸ್ಪತ್ರೆಯಲ್ಲಿ ಶವದ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು.

ಇಂದು ಅಂಚೆ ಅದಾಲತ್

ಮಂಡ್ಯ, ಜೂ.25– ಮಂಡ್ಯ ವಿಭಾಗದ ಅಂಚೆ ಅಧೀಕ್ಷಕರ ಕಚೇರಿ ವತಿಯಿಂದ ಜೂ.26ರಂದು ಮಧ್ಯಾಹ್ನ 3 ಗಂಟೆಗೆ ಪೋಸ್ಟ್ ಮಾಸ್ಟರ್ ಜನರಲ್ ದಕ್ಷಿಣ ಕರ್ನಾಟಕ ವಲಯ ಬೆಂಗಳೂರು ಇಲ್ಲಿ ಅಂಚೆ ಅದಾಲತ್ ಏರ್ಪಡಿಸಲಾಗಿದೆ.

ಸಾರ್ವಜನಿಕರು ಅಂಚೆ ಸೇವೆಗಳ ಬಗ್ಗೆ ಕುಂದು ಕೊರತೆಗಳಿದ್ದರೆ ಜೂ.20ರೊಳಗೆ ಅಸ್ಟೆಂಟ್ ಡೈರೆಕ್ಟರ್ ಸ್ಟಾಫ್ ಪೋಸ್ಟ್ ಮಾಸ್ಟರ್ ಜನರಲ್ ಕಾರ್ಯಾಲಯ ದಕ್ಷಿಣ ಕರ್ನಾಟಕ ವಲಯ ಎರಡನೇ ಮಹಡಿ ಜಿಪಿಓ ಕಟ್ಟಡ ಬೆಂಗಳೂರು ಇಲ್ಲಿಗೆ ಲಿಖಿತ ರೂಪದಲ್ಲಿ ತಲುಪಿಸುವಂತೆ ಅಂಚೆ ಅಧೀಕ್ಷಕರು ಮಂಡ್ಯ ವಿಭಾಗ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧಿ ನಿಧನ

ಕೆ.ಆರ್.ಪೇಟೆ, ಜೂ.25– ತಾಲೂಕಿನ ಮಾಕವಳ್ಳಿ ಗ್ರಾಮದ ನಿವಾಸಿ, ಪತ್ರಕರ್ತ ಮನು ಅವರ ಪುತ್ರಿ ನಿಧಿ (3) ಭಾನುವಾರ ಮುಂಜಾನೆ ನಿಧನರಾದರು. ಮೃತರು ತಂದೆ, ತಾಯಿ, ಸಹೋದರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮಲ್ಲಮ್ಮ



ಕೆ.ಆರ್.ಪೇಟೆ, ಜೂ.25– ಪಟ್ಟಣದ ಜಯನಗರ ಬಡಾವಣೆ ನಿವಾಸಿ ಮಲ್ಲಮ್ಮ (85) ನಿಧನರಾದರು. ವಿಠಲಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಎಂ.ಮಲ್ಲಿಕಾರ್ಜುನ್ ಹಾಗೂ ಉದ್ಯಮಿ ಮಲ್ಲೇಶ್ ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಜಯನಗರ ಬಡಾವಣೆಯ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ಪ್ರಧಾನಿ ಮೋದಿ ಸೋಲಲ್ಲ, ರಾಹುಲ್ ಗಾಂಧಿಗೆ ಮದುವೆ ಆಗಲ್ಲ’

ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಲೇವಡಿ



ಬೆಳಗಾವಿ, ಜೂ.25– ಬಿಹಾರ ರಾಜಧಾನಿ ಪಾಟ್ನಾದಲ್ಲಿ ನಡೆಸಿದ ಸಭೆಯಲ್ಲಿ ವಿಪಕ್ಷಗಳ ನಾಯಕರು ದೇಶ ಉದ್ಧಾರ ಮಾಡುವ ಬಗ್ಗೆ ಚರ್ಚೆ ನಡೆಸಿಲ್ಲ. ಬದಲಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಲಿಸುವುದು ಹೇಗೆ ಎಂಬುದರ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದರು. ಲೋಕಸಭೆ ಚುನಾವಣೆ ಮುಂದಿಟ್ಟುಕೊಂಡು ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಪ್ರಧಾನಿ ಮೋದಿ ಸೋಲಲ್ಲ, ರಾಹುಲ್ ಗಾಂಧಿಗೆ ಮದುವೆ ಆಗಲ್ಲ’ ಎಂದು ಲೇವಡಿ ಮಾಡಿದ್ದಾರೆ.

ಲೋಕಸಭೆ, ವಿಧಾನಸಭೆಯೇ ಬೇರೆ ಬೇರೆ ಆಗಿದೆ. ಮಗದೊಮ್ಮೆ ಮೋದಿ ಅವರನ್ನು ಪ್ರಧಾನಿ ಮಾಡಲು ಕಾರ್ಯಕರ್ತರು ಸಂಕಲ್ಪ ಮಾಡಬೇಕು. ನರೇಂದ್ರ ಮೋದಿ ಅವರು ಸ್ವಚ್ಛ, ದಕ್ಷ ಆಡಳಿತ ನೀಡಿದ್ದಾರೆ. ದೇಶದಲ್ಲಿ 12 ಕೋಟಿ ಶೌಚಾಲಯ ನಿರ್ಮಾಣ ಮಾಡಲಾಗಿದೆ. ಪ್ರತಿ ಮನೆಗೆ ನೀರನ್ನು ಕೊಡುವ ಬಗ್ಗೆ ಪ್ರಧಾನಿ ಹೇಳಿದ್ದರು. ಅದರಂತೆ 40 ಲಕ್ಷ ಮನೆಗಳಿಗೆ ರಾಜ್ಯದಲ್ಲಿ ನೀರು ಕೊಡಲಾಗಿದೆ. ರೈತರು, ವಿದ್ಯಾರ್ಥಿಗಳಿಗೆ ಹಲವು ಕಾರ್ಯ ಮಾಡಿದ್ದಾರೆ. ದೇಶ ನರೇಂದ್ರ ಮೋದಿ ಆಡಳಿತದಲ್ಲಿ ಸುರಕ್ಷಿತವಾಗಿದೆ. ಪಾಕಿಸ್ತಾನದ ಸೊಕ್ಕು ಅಡಗಿಸಿದ್ದು ಕೂಡ ಮೋದಿ ಎಂದು ಹೇಳಿದರು.

ವಿಧಾನಸಭೆ ಚುನಾವಣೆ ಸೋಲಿಗೆ ನಾನೇ ಹೊಣೆ ಎಂದ ಬೊಮ್ಮಾಯಿ, ಪ್ರಾಮಾಣಿಕ ಕೆಲಸ ಮಾಡಿ ಕ್ಷೇತ್ರದ ಅಭಿವೃದ್ಧಿ ಮಾಡಿದ್ದೇವೆ. 5,000 ಕೋಟಿ ಅನುದಾನದವನ್ನು ಉತ್ತರ ಕರ್ನಾಟಕ ನೀರಾವರಿಗೆ ಕೊಟ್ಟಿದ್ದೇನೆ. ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪನೆಯ ಘೋಷಣೆ ಮಾಡಿದ್ದೇನೆ. ನಮ್ಮ ಅಭಿವೃದ್ಧಿ ಕಾರ್ಯ ಜನರಿಗೆ ತಲುಪಿಸುವುದರಲ್ಲಿ ನಾವು ವಿಫಲವಾಗಿದ್ದೇವೆ. ಆಸೆ, ಆಮಿಷಗಳಿಂದ ಏನಾಗಲಿದೆ ಎಂಬುದು ಜನರಿಗೆ ಗೊತ್ತಾಗಲಿದೆ ಎಂದರು.

ರಾಜಕಾರಣದಲ್ಲಿ ರಾಜಿ ಮಾಡಿಲ್ಲ: ಚುನಾವಣೆ ಸಮಯದಲ್ಲಿ ಕೆಲವು ಬಿಜೆಪಿ ನಾಯಕರು ಹೊಂದಾಣಿಕೆ ರಾಜಕಾರಣ ಮಾಡಿದ್ದಾರೆ ಎಂಬ ಆರೋಪವನ್ನು ಸ್ವಪಕ್ಷಿಯ ನಾಯಕರೇ ಆರೋಪಿಸಿದ್ದರು. ಈ ಬಗ್ಗೆ ಮಾತನಾಡಿದ ಬೊಮ್ಮಾಯಿ, ರಾಜಕಾರಣದಲ್ಲಿ ಎಂದಿಗೂ ರಾಜಿ ಮಾಡಿಕೊಂಡಿಲ್ಲ, ಮಾಡಿಕೊಳ್ಳಲ್ಲ. ಸೌಹಾರ್ದಯುತವಾಗಿ ಮನೆಗೆ ಬರುವವರನ್ನು ಬೇಡವೆನ್ನಲು ಆಗಲ್ಲ. ಮನೆಗೆ ಹೋಗದೆ ಕೆಲವರು ರಾಜಿ ಮಾಡಿಕೊಂಡಿದ್ದಾರೆ. ಬಿಜೆಪಿ ತಾಯಿ ಸಮಾನ, ಕಾರ್ಯಕರ್ತರು ಅಣ್ಣತಮ್ಮಂದಿರ ಸಮಾನ. ಬಿಜೆಪಿ ಕಾರ್ಯಕರ್ತರಿಗೆ ದ್ರೋಹ ಮಾಡುವ ಕೆಲಸವನ್ನು ಮಾಡಿಲ್ಲ ಎಂದು ಹೇಳುವ ಮೂಲಕ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಟಾಂಗ್ ಕೊಟ್ಟರು.

ರಾಜ್ಯದಲ್ಲಿ ಕೆಎಸ್‌ಆರ್‌ಟಿಸಿ ಮುಚ್ಚುವ ಸ್ಥಿತಿ ನಿರ್ಮಾಣ ಆಗಿದೆ ಎಂದ ಅವರು, ಡೀಸೆಲ್ ಇಲ್ಲದೇ ಬಸ್‌ಗಳು ನಿಲ್ಲುವ ಸ್ಥಿತಿ ನಿರ್ಮಾಣ ಆಗಲಿದೆ. ಇಡೀ ಕರ್ನಾಟಕ ಕತ್ತಲಲ್ಲಿ ಮುಳುಗುವ ಸ್ಥಿತಿ ನಿರ್ಮಾಣ ಆಗಲಿದೆ. ಎಲ್ಲರಿಗೂ ಉಚಿತ ಎಂದು ಹೇಳಿದ ಕಾಂಗ್ರೆಸ್ ನಾಯಕರು ಅಧಿಕಾರಕ್ಕೇರಿದ ನಂತರ ಗ್ಯಾರಂಟಿ ಯೋಜನೆಗಳಿಗೆ ಷರತ್ತುಗಳನ್ನು ಹಾಕಿದ್ದು ಯಾಕೆ? ಅಕ್ಕಿ ಕೊಟ್ಟಿಲ್ಲ ಎಂದು ಪ್ರತಿಭಟಿಸಲು ಕಾಂಗ್ರೆಸ್ ನಾಯಕರಿಗೆ ಯಾವ ನೈತಿಕತೆ ಇದೆ ಸರ್ಕಾರದಲ್ಲಿದ್ದುಕೊಂಡು ಕಾಂಗ್ರೆಸ್‌ನವರೇ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮಹಿಳೆ ನಾಪತ್ತೆ

ಮೈಸೂರು, ಜೂ.25– ವರುಣದಲ್ಲಿನ ಹೆಬ್ಬಕವಾಡಿ ಗ್ರಾಮದ ನಿವಾಸಿ ಶಾರದಮ್ಮ(42) ಕಾಣೆಯಾಗಿದ್ದು, ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಮಾರು 5.3 ಅಡಿ ಎತ್ತರವಿರುವ ಕೋಲು ಮುಖ, ಗೋಧಿ ಮೈಬಣ್ಣ ಹಾಗೂ ಸಾಧಾರಣ ಮೈಕಟ್ಟನ್ನು ಹೊಂದಿದ್ದು, ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಮಹಿಳೆಯು ಕಾಣೆಯಾದಾಗ ನೀಲಿ ಬಣ್ಣದ ಸೀರೆ ಧರಿಸಿರುತ್ತಾರೆ. ಎಡ ತೋಳಿನಲ್ಲಿ ಶಾರದ ಎಂಬ ಹಸಿರು ಹಚ್ಚೆ ಹಾಕಿಸಿರುತ್ತಾರೆ.

ಮಹಿಳೆ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂ.ಸಂ.0821–2520040, ಮೈಸೂರು ಜಿಲ್ಲಾ ಕಂಟ್ರೋಲ್ ರೂಂ 0821–2444800 ಅಥವಾ ಪಿ.ಎಸ್.ಐ ವರುಣ ಪೊಲೀಸ್ ಠಾಣೆಯ ದೂ.ಸಂ.948085052 ಮೂಲಕ ಸಂಪರ್ಕಿಸಬಹುದು ಎಂದು ವರುಣ ಪೊಲೀಸ್ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಿಂಗಾಂಬುಧಿ ಕೆರೆ ಆವರಣದ ಮೈಸೂರಿನ ಮೊದಲ ಬೊಟಾನಿಕಲ್ ಗಾರ್ಡನ್‌ಗೆ ಒಳಚರಂಡಿ ನೀರಿನ ಶಾಪ



ಲಿಂಗಾಂಬುಧಿ ಕೆರೆಯಲ್ಲಿ ಕಲುಷಿತ ನೀರು ಸಂಗ್ರಹವಾಗಿರುವುದು.

ಮೂರನೇ ಪುಟದಿಂದ

ಒಳಚರಂಡಿ ನೀರಿನ ದುರ್ನಾತ: ಮೈಸೂರಿನ ಪ್ರಮುಖ ಕೆರೆಗಳಲ್ಲಿ ಒಂದಾಗಿರುವ ಲಿಂಗಾಂಬುಧಿ ಕೆರೆ ಅನೇಕ ವೈವಿಧ್ಯಮಯ ಸಸ್ಯ, ಪಕ್ಷಿ ಸಂಕುಲದ ಆವಾಸ ತಾಣವೂ ಆಗಿದೆ. ಬಿದಿರು ವನ ಸೇರಿದಂತೆ ದಟ್ಟಾರಣ್ಯದಿಂದ ಕೂಡಿರುವ ಲಿಂಗಾಂಬುಧಿ ಕೆರೆ ಮೈಸೂರಿನ ತಾಪಮಾನ ನಿಯಂತ್ರಣಕ್ಕೂ ತನ್ನದೇ ಆದ ಕೊಡುಗೆ ನೀಡುತ್ತಿದೆ. ಆದರೆ, ಕಳೆದ ಕೆಲವು ವರ್ಷಗಳಿಂದ ಒಳಚರಂಡಿ ನೀರು ಕೆರೆ ಸೇರುತ್ತಿದೆ. ಇದರಿಂದ ಕೆರೆ ವಾತಾವರಣ ಹಂತ ಹಂತವಾಗಿ ಮಲಿನಗೊಳ್ಳುತ್ತಿದೆ. ಕಳೆದ ಕೆಲವು ವರ್ಷಗಳಿಂದಲೂ ಒಳಚರಂಡಿ ನೀರು ಎಗ್ಗಿಲ್ಲದೆ ಕೆರೆ ಸೇರುತ್ತಿದೆ. ರಾಮಕೃಷ್ಣನಗರ, ಜನತಾನಗರ, ದಟ್ಟಗಳ್ಳಿ, ನಿವೇದಿತಾನಗರ ಸೇರಿದಂತೆ ವಿವಿಧ ಬಡಾವಣೆಗಳಿಂದ ಬರುವ ಒಳಚರಂಡಿ ನೀರು ಯಥೇಚ್ಛವಾಗಿ ಲಿಂಗಾಂಬುಧಿ ಕೆರೆ ಸೇರುತ್ತಿರುವುದರಿಂದ ಕೆರೆ ವಾತಾವರಣ ಕಲುಷಿತಗೊಳ್ಳುತ್ತಿದೆ. ಅಲ್ಲದೆ, ಕೆರೆಗೆ ಸೇರಿದ ಜಾಗದಲ್ಲೇ ಬೊಟಾನಿಕಲ್ ಗಾರ್ಡನ್ ನಿರ್ಮಾಣ ಮಾಡಿರುವುದರಿಂದ ಇದೀಗ ಒಳಚರಂಡಿ ನೀರು ನೂತನ ಗಾರ್ಡನ್‌ಗೂ ಕಂಟಕವಾಗಿ ಪರಿಣಮಿಸಿದೆ.

ಲಿಂಗಾಂಬುಧಿ ಕೆರೆ ಆವರಣದಲ್ಲಿ 15 ಎಕರೆ ವಿಸ್ತೀರ್ಣದಲ್ಲಿ ಅಪರೂಪದ ಸಸ್ಯಕಾಶಿಯೊಂದಿಗೆ ಬೊಟಾನಿಕಲ್ ಗಾರ್ಡನ್ ನಿರ್ಮಿಸಲಾಗಿದೆ. ಅಳಿವಿನಂಚಿನಲ್ಲಿರುವ ಗಿಡ–ಮರಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೇಂದ್ರವಾಗಿ ಹೊರಹೊಮ್ಮಲಿದೆ. 2010–11ನೇ ಸಾಲಿನಿಂದ ಬೊಟಾನಿಕಲ್ ಗಾರ್ಡನ್ ನಿರ್ಮಿಸುವ ಪ್ರಯತ್ನ ಆರಂಭಿಸಲಾಗಿತ್ತು. 2012ನೇ ಸಾಲಿನಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಯಿಂದ ತೋಟಗಾರಿಕಾ ಇಲಾಖೆಗೆ ಉದ್ದೇಶಿತ 15 ಎಕರೆ ಭೂಮಿಯನ್ನು ಹಸ್ತಾಂತರಿಸಲಾಗಿತ್ತು. ಪಾಳು ಬಿದ್ದಿದ್ದ ಜಾಗದಲ್ಲಿ ಗಿಡ–ಗಂಟೆ, ಮುಳ್ಳಿನ ಪೊದೆ ಬೆಳೆದು ನಿಂತಿತ್ತು. ಅಲ್ಲದೆ, ಇಟ್ಟಿಗೆಗೂಡೊಂದು ಆ ಸ್ಥಳದಲ್ಲಿತ್ತು. 2012ರಿಂದ ಹಂತ ಹಂತವಾಗಿ ಗಾರ್ಡನ್ ನಿರ್ಮಿಸುವ ಕೆಲಸವನ್ನು ತೋಟಗಾರಿಕಾ ಇಲಾಖೆ ಮಾಡಿದ್ದು, ಸಸ್ಯಶಾಸ್ತ್ರೀಯ ಅಧ್ಯಯನ ಮಾಡುವ ವಿದ್ಯಾರ್ಥಿಗಳು, ಪ್ರವಾಸಿಗರು, ಸ್ಥಳೀಯರಿಗೆ ವರದಾನವಾಗಿ ಪರಿಣಮಿಸಲಿದೆ.

300 ಬಗೆಯ ಸಸ್ಯ 26 ಬಗೆ ಮರ: ಲಿಂಗಾಂಬುಧಿ ಕೆರೆ ಆವರಣದ ಬೊಟಾನಿಕಲ್ ಗಾರ್ಡನ್‌ನಲ್ಲಿ ಸ್ಥಳೀಯವಾಗಿ ಬೆಳೆಯುವ ಗಿಡ–ಮರ, ಅಳಿವಿನಂಚಿನಲ್ಲಿರುವ ಗಿಡ–ಮರ ಸೇರಿದಂತೆ ಒಟ್ಟು 300 ಬಗೆಯ ಗಿಡ ಮರಗಳನ್ನು ಬೆಳೆಸಲಾಗಿದೆ. ಅಲ್ಲದೆ, ಬೇವು, ಆಲ, ಅರಳಿ ಮರ, ಅಲ್ಬಿಜಿಯಾ, ದೊಡ್ಡ ಹೂವಿನ ಬಾಗೆ, ಕೃಷ್ಣ ಸಿರಿಸ್, ಕಪ್ಪು ವಾರ್ನಿಷ್ ಮರ, ಕರೆನ್ ವುಡ್, ಮಾರ್ಕಿಂಗ್ ಅಡಿಕೆ ಮರ, ಹಿಪ್ಪೇಜ್, ವೀಪಿಂಗ್ ಬಾಟಲ್ ಬ್ರಷ್, ರೆಡ್ ಬಾಟಲ್ ಬ್ರಷ್, ಆರೆಂಜ್ ಬಳ್ಳಿ ಸೇರಿದಂತೆ 26 ಬಗೆಯ ಸ್ಥಳೀಯ ಮರಗಳನ್ನು ಬೆಳೆಸಲಾಗಿದೆ. ಅದರಲ್ಲಿ ಅಳಿವಿನಂಚಿನಲ್ಲಿರುವ ಅಲ್ಬಿಜಿಯಾ, ಬೇಮರ, ಬಿಲ್ವ ಮರ, ರಕ್ತಚಂದನ ಸೇರಿದಂತೆ ಇನ್ನಿತರ ಮರಗಳ ಸಂತತಿ ರಕ್ಷಣೆಗೆ ಕ್ರಮ ಕೈಗೊಳ್ಳಲಾಗಿದೆ.

ವಿದೇಶಿ ಪಕ್ಷಿಗಳ ಆಗಮನ

ಲಿಂಗಾಂಬುಧಿ ಬೊಟಾನಿಕಲ್ ಗಾರ್ಡನ್ ಲಿಂಗಾಂಬುಧಿ ಕೆರೆಗೆ ಹೊಂದಿಕೊಂಡಿದೆ. ಹಚ್ಚ ಹಸಿರಿನಿಂದ ಕೂಡಿರುವ ಕೆರೆ ಆವರಣ ಹವ್ಯಾಸಿಗಳಿಗೆ ಮತ್ತು ವೃತ್ತಿಪರ ಪಕ್ಷಿ ವೀಕ್ಷಕರಿಗೆ ಸುಂದರ ತಾಣವಾಗಿದೆ. ವಿದೇಶದ ಪಕ್ಷಿ ಪ್ರಭೇದಗಳು ಕೆರೆ ಆವರಣಕ್ಕೆ ಬರುತ್ತವೆ. ಕೆರೆಯಲ್ಲಿ ಮಂಗಟ್ಟೆ, ನವಿಲುಗಳು, ಸಣ್ಣಚಿತ್ರಪಕ್ಷಿ, ಎಪಿಎಫ್ಲಿ (ಬಿಳಿ ಮತ್ತು ಕಂದು ಬಣ್ಣದ ಮಾರ್ಫ್), ನೀಲಿ ಟಿಕೆಲ್ಸ್, ಐಬಿಸ್, ಬಾತುಕೋಳಿಗಳು, ನೀಲಿ ಕೆನ್ನೆಯ ಜೇನುನೊಣ ತಿನ್ನುವ ಪಕ್ಷಿಗಳು ಕಾಣಸಿಗುತ್ತವೆ.

ಪ್ರವಾಸಿಗರಿಗೆ ವಿದೇಶಿ ಪಕ್ಷಿ ಪ್ರಭೇಧಗಳು ಆಯ್ದ ಋತುಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ. ಉಳಿದ ದಿನಗಳಲ್ಲಿ ನಾವು ವರ್ಷವಿಡೀ ಸ್ಥಳೀಯ ಪಕ್ಷಿ ಪ್ರಭೇದಗಳನ್ನು ವೀಕ್ಷಿಸಬಹುದು. ತೋಟಗಾರಿಕೆ ಇಲಾಖೆಯು ಪಕ್ಷಿ ವೀಕ್ಷಕರು ಮತ್ತು ಪ್ರವಾಸಿಗರಿಗೆ ಅನುಕೂಲವಾಗುವಂತೆ ‘ಬರ್ಡ್ಸ್ ವಾಚ್ ಟವರ್’ ನಿರ್ಮಿಸಲು ಯೋಜನೆ ರೂಪಿಸಿದೆ.



ಲಿಂಗಾಂಬುಧಿ ಕೆರೆಯ ಬೊಟಾನಿಕಲ್ ಗಾರ್ಡನ್‌ನಲ್ಲಿ ಬೆಳೆಸಿರುವ ವಿವಿಧ ಸಸ್ಯಗಳು.

ವಿದೇಶಿ ಮರ: ಗಾರ್ಡನ್‌ನಲ್ಲಿ ವಿದೇಶಿ ಮರಗಳಾದ ಅಗಾಥಿಸ್, ರೋಬಸ್ಟಾ, ಸೈರ್ಥೋಲೋಬಿಯಂ, ಪ್ಯಾರಾಹೈಬಾ, ಬ್ರಾಚಿಚಿಟಾನ್, ಅಡಾನ್ಸೋನಿಯಂ ಸೇರಿದಂತೆ ಇನ್ನಿತರ ವಿದೇಶಿ ತಳಿಯ ಮರಗಳನ್ನು ಬೆಳೆಸಿರುವುದು ವಿಶೇಷ.

ವಿವಿಧ ಗಾರ್ಡನ್‌ಗಳು: ಬೊಟಾನಿಕಲ್ ಗಾರ್ಡನ್‌ನಲ್ಲಿ ಪ್ರವಾಸಿಗರಿಗೆ ಹಾಗೂ ಸಸ್ಯ ಪ್ರಿಯರಿಗೆ ಮುದ ನೀಡಲು ವಿವಿಧ ಗಾರ್ಡನ್ ನಿರ್ಮಿಸಲಾಗುತ್ತಿದೆ. ಅದರಲ್ಲಿ ಔಷಧೀಯ ಸಸ್ಯಗಳ ಉದ್ಯಾನ, ಆರೊಮ್ಯಾಟಿಕ್ ಗಾರ್ಡನ್, ರೋಸ್ ಗಾರ್ಡನ್, ಟೋಪಿಯರಿ ಗಾರ್ಡನ್, ಚಿಟ್ಟೆ ಪಾರ್ಕ್, ಬಿದಿರಿನ ಬ್ಲಾಕ್, ಫಿಕಸ್ ಬ್ಲಾಕ್, ರಾಕರಿ, ಅರ್ಬೊರೇಟಂ, ಫ್ರಾಗ್ರೆನ್ಸ್ ಬ್ಲಾಕ್, ಪಾಲ್ಮೇಟಮ್, ಮೈನರ್ ಫ್ರೂಟ್ಸ್ ಬ್ಲಾಕ್ ಮತ್ತು ಉತ್ತಮವಾಗಿ ನಿರ್ವಹಿಸಲಾದ ನೀರಿನ ಪೂಲ್‌ಗಳು ಸೇರಿದಂತೆ ಥೀಮ್‌ಗಳೊಂದಿಗೆ ಹಾಕಲಾಗಿದೆ. ಆಕ್ವಾ ಪಕ್ಷಿಗಳ ಪಾರ್ಕ್ ನಿರ್ಮಿಸಲಾಗುತ್ತದೆ.

ಕೊಳಗಳು: ಬೊಟಾನಿಕಲ್ ಗಾರ್ಡನ್‌ನಲ್ಲಿನ ವಾತಾವರಣ ನೈಸರ್ಗಿಕವಾಗಿಯೇ ರೂಪಿತವಾಗಿದ್ದು, ಮಾನವ ನಿರ್ಮಿತ ಕಟ್ಟಡಗಳಿಗೆ ಬ್ರೇಕ್ ಹಾಕಲಾಗಿದೆ. ಇದರಿಂದಾಗಿ ಕೆರೆಗೆ ಹೊಂದಿಕೊಂಡಂತೆ ಇದ್ದ ಕೊಳವೊಂದನ್ನು ಬೊಟಾನಿಕಲ್ ಗಾರ್ಡನ್ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಈ ಕೊಳಗಳು ಪಕ್ಷಿಗಳ ಆಕರ್ಷಣೆಗೆ ಸಹಕಾರಿಯಾಗಲಿದೆ. ಅಲ್ಲದೇ ಪ್ರವಾಸಿಗರಿಗೂ ಮುದ ನೀಡಲಿದೆ.

ಗಾರ್ಡನ್‌ನಲ್ಲಿ ಪರ್ಗೋಲಾ: ಲಿಂಗಾಂಬುಧಿ ಕೆರೆಯ ಬೊಟಾನಿಕಲ್ ಗಾರ್ಡನ್‌ನಲ್ಲಿ 150 ಅಡಿ ಉದ್ದ ಮತ್ತು 12 ಅಡಿ ಅಗಲದ ಪರ್ಗೋಲಾ ನಿರ್ಮಿಸಲಾಗಿದೆ. ಪೆರ್ಗೋಲಾದ ಮೇಲೆ ರೆಡ್ ಜೇಡ್ ವೈನ್ ಬಳ್ಳಿ ಬೆಳೆಸಲಾಗಿದೆ. ಇದು ವರ್ಷದಲ್ಲಿ ಎರಡು ಬಾರಿ ಕೆಂಪು ಬಣ್ಣದ ಹೂವು ಬಿಡುತ್ತವೆ. ಇದರಿಂದ ಬೊಟಾನಿಕಲ್ ಗಾರ್ಡನ್‌ಗೆ ಮೆರಗು ಹೆಚ್ಚಿಸುತ್ತದೆ.



ಒಳಚರಂಡಿ ನೀರು ಲಿಂಗಾಂಬುಧಿ ಕೆರೆಗೆ ಹರಿಯುತ್ತಿರುವುದು.



ಬೊಟಾನಿಕಲ್ ಗಾರ್ಡನ್‌ನ ವಿಹಂಗಮ ನೋಟ.

ಕೊಡಗಿನ ಜನತೆಯ ವಿಶ್ವಾಸ ಉಳಿಸಿಕೊಳ್ಳಲು ಪ್ರಾಮಾಣಿಕ ಕಾರ್ಯ

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜ್



ಮೈಸೂರು ಜಲದರ್ಶಿನಿ ಅತಿಥಿಗೃಹದಲ್ಲಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜ್ ಅವರನ್ನು ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಗೋಪಿನಾಥ್, ಕಾಂಗ್ರೆಸ್ ಮುಖಂಡ ಎಲ್.ಭಾಸ್ಕರ್‌ಗೌಡ ಸನ್ಮಾನಿಸಿದರು.

ಕುಡಿಯುವ ನೀರಿಗೆ ಮೊದಲ ಆದ್ಯತೆ...

ರಾಜ್ಯದಲ್ಲಿ ಪೂರ್ವ ಮುಂಗಾರು ಕೊರತೆಯಾಗಿದ್ದು, ಅಣೆಕಟ್ಟೆಗಳಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಆದ್ದರಿಂದ ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ಜಿಪಂ ಸಿಇಓಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಕುಡಿಯುವ ನೀರು ಸಂಬಂಧ ಅನುದಾನಕ್ಕೆ ಬೇಡಿಕೆ ಇದ್ದರೆ ತಕ್ಷಣವೇ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಸದ್ಯಕ್ಕೆ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ. ಅದರಂತೆ ತಮಿಳುನಾಡಿನಿಂದಲೂ ಯಾವುದೇ ಮನವಿ ಬಂದಿಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ನಿಟ್ಟಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಹಲವಾರು ಕಟ್ಟುನಿಟ್ಟಿನ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದು, ಅಧಿಕಾರಿಗಳ ತಮ್ಮ ಕರ್ತವ್ಯದಲ್ಲಿ ಹಿಂದೆಬಿದ್ದರೆ ಅಥವಾ ಅಕ್ರಮ ನಡೆಸಿದರೆ ವರ್ಗಾವಣೆ ಬದಲು ಸಸ್ಪೆಂಡ್ ಅಥವಾ ಡಿಸ್ಮಿಸ್ ಮಾಡಲಾಗುವುದು.

– ಎನ್.ಎಸ್.ಬೋಸರಾಜ್, ಕೊಡಗು ಜಿಲ್ಲಾ ಉಸ್ತುವಾರಿ ಹಾಗೂ ನೀರಾವರಿ ಸಚಿವ

ಮೈಸೂರು, ಜೂ.25(ಎಂಕೆ)– ಕೊಡಗು ಜಿಲ್ಲೆಯ ಜನತೆಯ ನಿರೀಕ್ಷೆಯಂತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಮೂಲಕ ಕಾಂಗ್ರೆಸ್ ಪಕ್ಷದ ಮೇಲೆ ಕೊಡವರು ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಲಾಗುವುದು ಎಂದು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜ್ ಭರವಸೆ ನೀಡಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಭಾನುವಾರ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸಚಿವರು, ಕಳೆದ 25 ವರ್ಷಗಳ ಬಳಿಕ ಕೊಡಗಿನಲ್ಲಿ ಕಾಂಗ್ರೆಸ್‌ಗೆ ಬೆಂಬಲ ದೊರೆತಿದೆ. ಜನರೇ ಬಯಸಿ ಅಧಿಕಾರ ನೀಡಿದ್ದಾರೆ. ನಮ್ಮ ಮೇಲೆ ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಇಬ್ಬರು ಶಾಸಕರು, ಮಾಜಿ ಶಾಸಕರು, ಮುಖಂಡರ ಸಲಹೆ ಪಡೆದು ಜಿಲ್ಲೆಯ ಅಭಿವೃದ್ಧಿ ಪರವಾದ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.

ಈಗಾಗಲೇ ನೆರೆಹಾವಳಿಯಿಂದ ತತ್ತರಿಸಿರುವ ಕೊಡಗಿನ ಜನತೆಯ ಜೀವನ ಮತ್ತೆ ಸುಸ್ಥಿತಿಯತ್ತ ಬರಬೇಕಾಗಿದೆ. ಆದ್ದರಿಂದ ಪೂರ್ಣಗೊಳ್ಳದೆ ಬಾಕಿ ಉಳಿದಿರುವ ಕಾಮಗಾರಿಗಳಿಗೆ ಮೊದಲ ಆದ್ಯತೆ ನೀಡಿ ತ್ವರಿತವಾಗಿ ಪೂರ್ಣಗೊಳಿಸಲಾಗುವುದು. ನೆರೆಹಾವಳಿಯಿಂದಾಗುವ ಹಾನಿ ತಪ್ಪಿಸುವುದಕ್ಕಾಗಿ ಈಗಾಗಲೇ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಕಾಯ್ದೆಯಡಿ ಅಡಿಯಲ್ಲಿ ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಜಿಲ್ಲಾಧಿಕಾರಿಗಳು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮುಂಜಾಗ್ರತೆ ಕ್ರಮ ವಹಿಸುವಂತೆ ಸೂಚಿಸಲಾಗಿದೆ. ಹಾಗೆಯೇ ಅನಧಿಕೃತವಾಗಿ ರೆಸಾರ್ಟ್‌ಗಳನ್ನು ಮಾಡಲು ಮುಂದಾಗುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆಯೂ ತಿಳಿಸಲಾಗಿದೆ ಎಂದು ತಿಳಿಸಿದರು.

ಪ್ರವಾಸೋದ್ಯಮಕ್ಕೆ ಉತ್ತೇಜನ, ಕಾಫಿ ಬೆಳೆಗಾರರಿಗೆ ಸಹಕಾರ, ಕಾಡಾನೆಗಳ ಹಾವಳಿ ನಿಯಂತ್ರಣ, ನೆರೆ ಹಾವಳಿ ಉಂಟಾಗುವ ಸ್ಥಳಗಳಲ್ಲಿ ವಾಸಿಸುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸುವುದು, ರಸ್ತೆ–ಸೇತುವೆಗಳ ಪರಿಶೀಲನೆ ಮತ್ತು ಅಭಿವೃದ್ಧಿ, ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯಕೀಯ ಸಲಕರಣೆ ಮತ್ತು ಔಷಧಿಗಳ ಪೂರೈಕೆ ಸೇರಿದಂತೆ ಕೊಡಗು ಜಿಲ್ಲೆಯಲ್ಲಿನ ಎಲ್ಲಾ ಸಮಸ್ಯೆಗಳ ಮಾಹಿತಿ ಪಡೆದು ಜಿಲ್ಲೆಯ ಜನತೆಯ ಶ್ರೇಯೋಭಿವೃದ್ಧಿ ಮೊದಲ ಆದ್ಯತೆ ನೀಡುವ ದೃಷ್ಟಿಯಿಂದ ಅಗತ್ಯವಾದ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಮುಂದಿನ 25 ವರ್ಷಕ್ಕೆ ಬುನಾದಿಯಾಗುವಂತೆ ಕೆಲಸ ಮಾಡಲಾಗುವುದು ಎಂದು ಹೇಳಿದರು. ಇದೇ ವೇಳೆ ಸಚಿವರನ್ನು ಮಾಜಿ ಮೇಯರ್ ಬಿ.ಕೆ.ಪ್ರಕಾಶ್, ಮೈಸೂರು ವಿವಿ ಮಾಜಿ ಸಿಂಡಿಕೇಟ್ ಸದಸ್ಯ ಗೋಪಿನಾಥ್, ಕಾಂಗ್ರೆಸ್ ಮುಖಂಡ ಎಲ್.ಭಾಸ್ಕರ್‌ಗೌಡ ಸನ್ಮಾನಿಸಿದರು.

ಮೈಸೂರಿನ ಒಂಟಿಕೊಪ್ಪಲ್ ಕ್ಲಬ್ ಚುನಾವಣೆ

ಲಯನ್ ಕೆ.ದೇವೇಗೌಡ, ಬಿ.ಸುಬ್ರಹ್ಮಣ್ಯ ತಂಡಕ್ಕೆ ಭರ್ಜರಿ ಜಯ



ಮೈಸೂರು, ಜೂ.25(ಎಸ್‌ಬಿಡಿ)– ಮೈಸೂರಿನ ಒಂಟಿಕೊಪ್ಪಲ್ ಕ್ಲಬ್ ಆಡಳಿತ ಮಂಡಳಿ ಚುನಾವಣೆಯಲ್ಲಿ ಲಯನ್ ಕೆ.ದೇವೇಗೌಡ ಹಾಗೂ ಬಿ. ಸುಬ್ರಹ್ಮಣ್ಯ ತಂಡ ಜಯಭೇರಿ ಭಾರಿಸಿದೆ.

ಈ ಬಾರಿಯ ಚುನಾವಣೆಯಲ್ಲಿ ಜಿದ್ದಾಜಿದ್ದಿ ಸೃಷ್ಟಿಯಾಗಿತ್ತು. ಕೆ.ದೇವೇಗೌಡ ನೇತೃತ್ವದ ಸಮಾನಮನಸ್ಕರ ತಂಡ ಮತ್ತೊಂದು ಬಾರಿಗೆ ಅವಕಾಶ ಕೋರಿ ಸ್ಪರ್ಧಿಸಿತ್ತು. ಭಾನುವಾರ ನಡೆದ ಚುನಾವಣೆಯಲ್ಲಿ ತಂಡದ ಎಲ್ಲಾ ಸ್ಪರ್ಧಿಗಳೂ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ಎಲ್ಲಾ 17 ಸ್ಥಾನಗಳನ್ನೂ ಒಂದೇ ತಂಡ ಗೆದ್ದಿರುವುದು ದಾಖಲೆಯಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕೆ.ದೇವೇಗೌಡ 226 ಮತಗಳೊಂದಿಗೆ ಗೆಲುವು ಪಡೆದಿದ್ದು, ಪ್ರತಿಸ್ಪರ್ಧಿ ಪ್ರದೀಪ್ ಕುಮಾರ್ ಅವರಿಗೆ 136 ಮತಗಳು ಸಂದಿವೆ. ಬಿ.ಸುಬ್ರ ಹ್ಮಣ್ಯ(ಸುಬ್ಬಣ್ಣ) 241 ಮತ ಪಡೆದು ಪ್ರತಿ ಸ್ಪರ್ಧಿ ಸಂಪತ್‌ಕುಮಾರ್ (119) ಅವರನ್ನು ಮಣಿಸಿ ಮತ್ತೊಮ್ಮೆ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ನೂತನ ಆಡಳಿತ ಮಂಡಳಿ: ಲಯನ್ ಕೆ.ದೇವೇಗೌಡ, ಸುಬ್ರಹ್ಮಣ್ಯ ಅವರೊಂದಿಗೆ ಉಪಾಧ್ಯಕ್ಷರಾಗಿ ಪಿ.ವಿ.ಸೋಪಾನದೇವ (209), ಜಂಟಿ ಕಾರ್ಯದರ್ಶಿಯಾಗಿ ಬಿ. ಚಿನ್ಮಯಾನಂದ ಬಾಬು(205), ಖಜಾಂಚಿಯಾಗಿ ಕೆ.ಬಿ.ಲಿಂಗರಾಜು (221), ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಿ.ಎಲ್.ಆದಿಶೇಷ(230), ಉದಯ್ ಎಸ್.ಕುಮಾರ್(198), ಕೆ.ಚಂದ್ರು(229), ಆರ್.ಜಯಪ್ರಕಾಶ್(197), ಟಿ.ದಿಲೀಪ್ ಕುಮಾರ್(227), ಹೆಚ್.ಸಿ.ಪ್ರಕಾಶ್ ಬಾಬು(216), ಎಸ್.ಯೋಗೇಶ್ ಕುಮಾರ್(222), ಕೆ.ಜಿ.ರಾಮನಾಥನ್ (214), ಎ.ವಿ.ರಂಗೇಶ್(211), ಎಸ್.ಸತೀಶ್ (223), ಕೆ.ಸುನೀಲ್ ಕುಮಾರ್(206) ಹಾಗೂ ಎಂ.ಸೋಮಶೇಖರ್(188) ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ತಮ್ಮ ತಂಡಕ್ಕೆ ಅಭೂತ ಪೂರ್ವ ಬೆಂಬಲ ನೀಡಿದ ಕ್ಲಬ್‌ನ ಸದಸ್ಯರು, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನೂತನ ಅಧ್ಯಕ್ಷ ಲಯನ್ ಕೆ.ದೇವೇಗೌಡ, ಕಾರ್ಯದರ್ಶಿಗಳಾದ ಬಿ.ಸುಬ್ರಹ್ಮಣ್ಯ ಕೃತಜ್ಞತೆ ಸಲ್ಲಿಸಿದ್ದಾರೆ. ಚುನಾವಣಾಧಿಕಾರಿಯಾಗಿ ಅಸ್ಲಂ ಪಾಷಾ ಕಾರ್ಯ ನಿರ್ವಹಿಸಿದರು.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕೋಶಾಧ್ಯಕ್ಷರೂ ಆದ ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್, ತಮ್ಮ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಪ್ರೇಕ್ಷಕರ ಮನಸೂರೆಗೊಂಡ ಕನ್ನಡ ಚಿತ್ರಗೀತೆಗಳು



ಮೈಸೂರು, ಜೂ.25(ಎಸ್‌ಪಿಎನ್)– ಗಂಧರ್ವ ಗಾನ ಲಹರಿ ಸಂಗೀತ ರಸಸಂಜೆ ಕಾರ್ಯಕ್ರಮದಲ್ಲಿ ಹಲವು ಹಳೆಯ ಗೀತೆಗಳಿಗೆ ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ ಗಾಯಕರು ದನಿಗೂಡಿಸಿ ಪ್ರೇಕ್ಷಕರ ಮನಸೂರೆಗೊಂಡರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಗಂಧರ್ವ ಗಾನಲಹರಿಯಲ್ಲಿ ಗಾಯಕರಾದ ಪಿ. ಮೋಹನ್ ಕುಮಾರ್ ನೇತೃತ್ವದಲ್ಲಿ ಗಾಯಕರಾದ ಮಂಜುಳಾ, ನಾಗರತ್ನ, ಜ್ಯೋತಿ, ತಮ್ಮಯ್ಯ, ಚಂದ್ರಶೇಖರ್ ಶಿಂಧೆ, ನಾಗರಾಜ್, ಮೆರಿರಾವ್,ಸತೀಶ್ ರಾಜ್, ಕೆ.ಜೆ.ಶೇಖರ್, ಸಿ.ಶಿವು, ರಮೇಶ್ ಯುನಿರ್ವಸಿಟಿ, ಶಿವಣ್ಣ ಸೇರಿದಂತೆ ಇತರೆ ಕಲಾವಿದರ ಸಿರಿಕಂಠದಲ್ಲಿ ಮೂಡಿಬಂದಿತು.

ಮೊದಲಿಗೆ ವಿಘ್ನೇಶ್ವರ ಕುರಿತು ಭಕ್ತಿಗೀತೆಯನ್ನು ಹಾಡಿ, ಪ್ರೇಕ್ಷಕರನ್ನು ರಂಜಿಸಿದರು. ನಂತರ 'ಹೊಸಬೆಳಕು ಮೂಡುತ್ತಿದೆ', 'ಮುತ್ತೇ ಪ್ರಥಮ ಅದುವೆ', 'ಸೂರ್ಯನ ಕಾಂತಿಗೆ' 'ನನ್ನಾ ಮುದ್ದು ತಾರೆ ನಗುತಲಿ', 'ಕನಸಲು ನೀನೆ ಮನಸಲು', 'ಕುಂಕುಮ ಇರುವುದೆ', 'ಎಲ್ಲೆಲ್ಲಿ ನೋಡಲಿ ನಿನ್ನನ್ನೆ', 'ಬಂದಾಳೋ ಬಂದಾಳೋ', 'ಏಕೊ ಏನೊ ಈ ನನ್ನ', 'ತಂಗಾಳಿಯಂತೆ ಬಾಳಲ್ಲೆ', 'ಎಲ್ಲಿರುವೇ ಮನವ ಕಾಡುವ', 'ಏನೇನೋ ಆಸೆ ನೀ ತಂದಾ', 'ಆಮೋಡ ಬಾನಲ್ಲಿ', 'ಅಮ್ಮ ಎಂದರೆ ಏನೋ', 'ಸದಾ ಕಣ್ಣಲಿ ಪ್ರಣಯದಾ', 'ಏನೋ ಸಂತೋಷ ಏನೋ', 'ಸದಾ ಕಣ್ಣಲಿ ಪ್ರಣಯದಾ', 'ಆಹಾ ನನ್ನ ಜೊತೆಯಲಿ', 'ಆಹಾ ನನ್ನ ಜೊತೆಯಲಿ' ಸಿನಿಮಾ ಗೀತೆಗಳನ್ನು ಪೇಕ್ಷಕರ ಮನಸೂರೆಗೊಂಡವರು.

'ನೀ ಬಂದರೇ ಮೆಲ್ಲನೆ', 'ಪ್ರಿಯ ಪ್ರಿಯ ವಿನೋದವೆ', 'ನಗುನಗುತಾ ನಲಿ ನಲಿ', 'ರಾಗವೊ ಅನುರಾಗವೋ', 'ನಿನ್ನ ಕೊಂಕು ನೋಟವ', 'ಯುಗಯುಗಗಳೆ ಸಾಗಲಿ', 'ನೂರು ನೂರು ಕೊಹಿ', 'ನಾ ಕಂಡೆ ನಿನ್ನ ಮಧುರ', 'ಚೆಲುವೆ ನೀನು ನಕ್ಕರೆ', 'ಬೆಳ್ಳಿ ಮೋಡ ಎಲ್ಲಿ', 'ನಿನ್ನ ಕಂಡು ಬೆರಗಾದೆನೆ', 'ಓ ಪ್ರಿಯತಮಾ', 'ನಿನ್ನ ನನ್ನ ಮನವು', 'ಒಲುಮೆ ಸಿರಿಯಾ' 'ಭಲೇ ಭಲೆ ಚಂದದ ಚಂದುಳ್ಳಿ', 'ಬೆಳ್ಳಿಯ ರಾಜಾ ಬಾರೋ', 'ಕಂಗಳು ವಂದನೆ ಹೇಳಿದೆ', 'ಪ್ರೇಮಲೋಕದಾ ಪಾರಿಜಾತ' ನಗುವ ನಯನ ಮಧುರ' ಸಿನಿಮಾ ಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು.

ಪಶ್ಚಿಮಬಂಗಾಳದ ಬಂಕುರಾದಲ್ಲಿ ಗೂಡ್ಸ್ ರೈಲು ಡಿಕ್ಕಿ: ಹಳಿತಪ್ಪಿದ 12 ಬೋಗಿಗಳು, ತಪ್ಪಿದ ಅನಾಹುತ



ಬಂಕುರ(ಪಶ್ಚಿಮ ಬಂಗಾಳ), ಜೂ.25– ಇಂದು ಭಾನುವಾರ ಮುಂಜಾನೆ 4 ಗಂಟೆ ಸುಮಾರಿಗೆ ಪಶ್ಚಿಮ ಬಂಗಾಳದ ಬಂಕುರಾ ಬಳಿ ಒಂದು ಗೂಡ್ಸ್ ರೈಲು ಇನ್ನೊಂದಕ್ಕೆ ಡಿಕ್ಕಿ ಹೊಡೆದ ಪರಿಣಾಮ ಗೂಡ್ಸ್ ರೈಲುಗಳ 12 ಬೋಗಿಗಳು ಹಳಿತಪ್ಪಿದ ಘಟನೆ ನಡೆದಿದೆ.

ಬಂಕುರಾ ಬಳಿಯ ಖಾರಾಗ್ ಪುರ್–ಬಂಕುರಾ ಆದ್ರ ರೈಲು ಮಾರ್ಗದ ಓಂಡಾ ನಿಲ್ದಾಣದಲ್ಲಿ ಈ ದುರ್ಘಟನೆ ನಡೆದಿದೆ. ಅಪಘಾತದಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ, ಗೂಡ್ಸ್ ರೈಲುಗಳ ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಸರಕು ರೈಲುಗಳು ಖಾಲಿಯಾಗಿದ್ದವು. ಎರಡು ರೈಲುಗಳ ಮಧ್ಯೆ ಅಪಘಾತ ಹೇಗೆ ಸಂಭವಿಸಿತು ಎಂದು ಇನ್ನೂ ಸ್ಪಷ್ಟವಾಗಿಲ್ಲ. ಈ ಅವಘಡದಿಂದ ಆದ್ರಾ ವಿಭಾಗದ ರೈಲು ಸಂಚಾರಕ್ಕೆ ತೊಂದರೆಯಾಗಿದೆ. ಆಖಂ ವಿಭಾಗವು ಪಶ್ಚಿಮ ಬಂಗಾಳದ ನಾಲ್ಕು ಜಿಲ್ಲೆಗಳಾದ ಪಶ್ಚಿಮ ಮಿಡ್ನಾಪುರ, ಬಂಕುರಾ, ಪುರುಲಿಯಾ ಮತ್ತು ಬುರ್ದ್ವಾನ್ ಮತ್ತು ಜಾರ್ಖಂಡ್‌ನ ಮೂರು ಜಿಲ್ಲೆಗಳಾದ ಧನ್‌ಬಾದ್, ಬೊಕಾರೊ ಮತ್ತು ಸಿಂಗ್‌ಭೂಮ್ ಮತ್ತು ಆಗ್ನೇಯ ರೈಲ್ವೆಯ ಅಡಿಯಲ್ಲಿ ಸೇವೆ ಸಲ್ಲಿಸುತ್ತವೆ.

ಕಳೆದ ಜೂನ್ 2ರಂದು ಒಡಿಶಾದಲ್ಲಿ ಕನಿಷ್ಠ 275 ಜೀವಗಳನ್ನು ಬಲಿ ಪಡೆದ ಕೋರಮಂಡಲ್ ಎಕ್ಸ್‌ಪ್ರೆಸ್ ಮತ್ತು ಇತರ ಎರಡು ರೈಲುಗಳ ಭೀಕರ ಅಪಘಾತದ ಘಟನೆ ಇನ್ನೂ ಜನಮಾನಸದಿಂದ ಮಾಸುವ ಮುನ್ನವೇ ಈ ದುರ್ಘಟನೆ ನಡೆದಿದೆ.

ಜೂನ್ 2 ರಂದು ಒಡಿಶಾದ ಬಾಲಸೋರ್ ಜಿಲ್ಲೆಯಲ್ಲಿ ಮೂರು ರೈಲುಗಳು ಒಂದರ ಹಿಂದೆ ಒಂದರಂತೆ ಅಪಘಾತಕ್ಕೀಡಾದವು. ಬೆಂಗಳೂರು–ಹೌರಾ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್, ಶಾಲಿಮಾರ್–ಚೆನ್ನೈ ಸೆಂಟ್ರಲ್ ಕೋರಮಂಡಲ್ ಎಕ್ಸ್‌ಪ್ರೆಸ್ ಮತ್ತು ಗೂಡ್ಸ್ ರೈಲನ್ನು ಒಳಗೊಂಡ ಅಪಘಾತವು ಕೋಲ್ಕತ್ತಾದಿಂದ ದಕ್ಷಿಣಕ್ಕೆ 250 ಕಿಮೀ ಮತ್ತು ಭುವನೇಶ್ವರದಿಂದ 170 ಕಿಮೀ ಉತ್ತರಕ್ಕೆ ಬಹನಾಗಾ ಬಜಾರ್ ನಿಲ್ದಾಣದ ಬಳಿ ಸಂಜೆ 7 ಗಂಟೆ ಸುಮಾರಿಗೆ ಸಂಭವಿಸಿತ್ತು

ಚೆನ್ನೈ ಕಡೆಗೆ ಹೋಗುತ್ತಿದ್ದ ಶಾಲಿಮಾರ್–ಚೆನ್ನೈ ಸೆಂಟ್ರಲ್ ಕೋರಮಂಡಲ್ ಎಕ್ಸ್‌ಪ್ರೆಸ್, ಪಕ್ಕದ ಹಳಿಯಲ್ಲಿ ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆದ ನಂತರ ಹಳಿತಪ್ಪಿ, ಕೋರಮಂಡಲ್ ಎಕ್ಸ್‌ಪ್ರೆಸ್‌ನ ಹಿಂಬದಿಯ ಗಾಡಿ ಮೂರನೇ ಟ್ರ್ಯಾಕ್‌ಗೆ ತಿರುಗಿದಾಗ ಈ ಅಪಘಾತ ಸಂಭವಿಸಿದೆ. ಮೂರನೇ ಟ್ರ್ಯಾಕ್‌ನಲ್ಲಿ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಬೆಂಗಳೂರು–ಹೌರಾ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ಹಳಿತಪ್ಪಿದ ಬೋಗಿಗಳಿಗೆ ಡಿಕ್ಕಿ ಹೊಡೆದಿತ್ತು.

ಅಸ್ಸಾಂ ಪ್ರವಾಹ: 120ಕ್ಕೂ ಹೆಚ್ಚು ಜನರನ್ನು ರಕ್ಷಿಸಿದ ಎನ್‌ಡಿಆರ್‌ಎಫ್


ನವದೆಹಲಿ: ಅಸ್ಸಾಂನಲ್ಲಿ ಪ್ರವಾಹ ಪರಿಹಾರ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಹತ್ತು ತಂಡಗಳನ್ನು ನಿಯೋಜಿಸಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ(ಎನ್‌ಡಿಆರ್‌ಎಫ್) ಭಾನುವಾರ 120ಕ್ಕೂ ಹೆಚ್ಚು ಜನರನ್ನು ರಕ್ಷಿಸಿ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ

ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಪ್ರವಾಹಕ್ಕೆ ಸಿಲುಕಿದ್ದಾರೆ. ಆದರೆ ನೀರಿನ ಮಟ್ಟವು ಇಂದು ಕಡಿಮೆಯಾಗಲು ಪ್ರಾರಂಭಿಸಿದೆ.

ಅಸ್ಸಾಂನಲ್ಲಿ ಒಟ್ಟು ಹತ್ತು ಎನ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದ್ದು, ಈ ತಂಡಗಳು ತಗ್ಗು ಪ್ರದೇಶಗಳಿಂದ ರಕ್ಷಣಾ ಮತ್ತು ಸ್ಥಳಾಂತರಿಸುವಿಕೆ ಕಾರ್ಯಾಚರಣೆ ನಡೆಸುತ್ತಿದ್ದು, ಇಲ್ಲಿಯವರೆಗೆ, 123 ವ್ಯಕ್ತಿಗಳು ಮತ್ತು ಹಲವಾರು ಜಾನುವಾರುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಎನ್‌ಡಿಆರ್‌ಎಫ್ ವಕ್ತಾರರು ತಿಳಿಸಿದ್ದಾರೆ.

ಪ್ರತಿ NDRF ತಂಡವು ಸುಮಾರು 35–40 ಸಿಬ್ಬಂದಿಯನ್ನು ಹೊಂದಿದ್ದು, ಈ ತಂಡಗಳು ಪರಿಹಾರ ಸಾಮಗ್ರಿ ವಿತರಣೆಯಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಸಹಾಯ ಮಾಡುತ್ತಿವೆ ಎಂದು ವಕ್ತಾರರು ಹೇಳಿದ್ದಾರೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದ್ದು, ತಗ್ಗು ಪ್ರದೇಶಗಳಲ್ಲಿ ತಂಡಗಳು ವಿಚಕ್ಷಣಾ ಕಾರ್ಯ ನಡೆಸುತ್ತಿವೆ ಅವರು ತಿಳಿಸಿದ್ದಾರೆ.

ಅಮೆರಿಕದಿಂದ ಪ್ರಬಲ 31 ಸಶಸ್ತ್ರ ಡ್ರೋನ್‌ಗಳನ್ನು ಪಡೆಯಲಿದೆ ಭಾರತ; ಮುಂದಿನ ತಿಂಗಳಿಂದಲೇ ಖರೀದಿ ಪ್ರಕ್ರಿಯೆ



ನವದೆಹಲಿ, ಜೂ.25– ಅಮೆರಿಕದ ಅತ್ಯಾಧುನಿಕ ಸಮರ ಡ್ರೋನ್‌ಗಳನ್ನು ಭಾರತ ಪಡೆಯಲಿದೆ. 31 ಎಂಕ್ಯೂ–9ಬಿ ರೀಪರ್ ಡ್ರೋನ್‌ಗಳನ್ನು (MQ-9B Reaper Drone) ಖರೀದಿಸುವ ಪ್ರಕ್ರಿಯೆ ಮುಂದಿನ ತಿಂಗಳಿಂದಲೇ ಆರಂಭವಾಗಲಿದೆ. ಪ್ರಿಡೇಟರ್‌ಬಿ ಡ್ರೋನ್ ಎಂದೂ ಕರೆಯಲಾಗುವ ಈ ಡ್ರೋನ್‌ಗಳು ಮುಂದಿನ 6–7 ವರ್ಷಗಳಲ್ಲಿ ಭಾರತಕ್ಕೆ ಸರಬರಾಜಾಗಲಿವೆ. ಆದರೆ, ಜುಲೈನಿಂದ ಇದರ ಒಪ್ಪಂದ ಇತ್ಯಾದಿ ಖರೀದಿ ಪ್ರಕ್ರಿಯೆ ಶುರುವಾಗಲಿವೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಬಹಳ ಶಕ್ತಿಶಾಲಿ ಎಂದು ಪರಿಗಣಿಸಲಾದ ಈ 31 ಡ್ರೋನ್‌ಗಳ ಖರೀದಿಗೆ ಅಂದಾಜು ವೆಚ್ಚ 3.5 ಬಿಲಿಯನ್ ಡಾಲರ್ (ಸುಮಾರು 29,000 ಕೋಟಿ ರೂ) ಎಂದು ಹೇಳಲಾಗುತ್ತಿದೆ.

ಈ 31 ಸಶಸ್ತ್ರ ರೀಪರ್ ಡ್ರೋನ್‌ಗಳ (Weaponised Drone) ಪೈಕಿ 15 ಡ್ರೋನ್‌ಗಳು ನೌಕಾಪಡೆಗೆ ನಿಯುಕ್ತಗೊಳ್ಳಲಿವೆ. ಸಾಗರ ಕಾವಲು ಕಾರ್ಯಕ್ಕೆ ಇವು ಬಳಕೆಯಾಗಲಿವೆ. ಇನ್ನು, ಭಾರತೀಯ ಭೂಸೇನೆ ಮತ್ತು ವಾಯುಸೇನೆಗಳಿಗೆ ತಲಾ ಎಂಟೆಂಟು ಡ್ರೋನ್‌ಗಳು ಸ್ಕೈ ಗಾರ್ಡಿಯನ್‌ಗಳಾಗಿ ನಿಯೋಜನೆಗೊಳ್ಳುವ ಉದ್ದೇಶ ಇಟ್ಟುಕೊಳ್ಳಲಾಗಿದೆ.

ಭಾರತದಲ್ಲೇ ತಯಾರಾಗುತ್ತವೆ ಈ ಡ್ರೋನ್‌ಗಳು: ಅಮೆರಿಕದ ಈ ಅತ್ಯಾಧುನಿಕ ರೀಪರ್ ಡ್ರೋನ್‌ಗಳು ಅಲ್ಲಿನ ಜನರಲ್ ಅಟಾಮಿಕ್ಸ್ (General Atomics) ಕಂಪನಿಯ ಉತ್ಪನ್ನಗಳಾಗಿವೆ. ಭಾರತದ ಯಾವುದಾದರೂ ಕಂಪನಿ ಜೊತೆ ಸಹಭಾಗಿತ್ವದಲ್ಲಿ ಈ ಡ್ರೋನ್‌ಗಳನ್ನು ಭಾರತದಲ್ಲೇ ಅಸೆಂಬಲ್ ಮಾಡಲಾಗುತ್ತದೆ. ಈ ಡ್ರೋನ್‌ಗಳ ಕೆಲ ಬಿಡಿಭಾಗ ಗಳನ್ನೂ ಭಾರತದಲ್ಲಿ ತಯಾರಿಸುವ ಸಾಧ್ಯತೆ ಇದೆ. ಜೂನ್ 15ರಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ರಕ್ಷಣಾ ಖರೀದಿ ಮಂಡಳಿ (Defence Acquisitions Council) ಈ ಡ್ರೋನ್ ಖರೀದಿ ಒಪ್ಪಂದಕ್ಕೆ ಎಓಎನ್ (AoN- Acceptance of Necessity) ಹೊರಡಿಸಿತ್ತು. ಜುಲೈ ಮೊದಲ ವಾರದಲ್ಲಿ ಈ ಒಪ್ಪಂದದ ಮುಂದಿನ ಕ್ರಮದ ಬಗ್ಗೆ ಅಮೆರಿಕ ಸರ್ಕಾರಕ್ಕೆ ಮನವಿ ಹೋಗಲಿದೆ. ಒಪ್ಪಂದಕ್ಕೆ ಸಹಿ ಬಿದ್ದ ಬಳಿಕ ಎರಡು ವರ್ಷದೊಳಗೆ 10 ಡ್ರೋನ್‌ಗಳು ಸರಬರಾಜಾಗುವ ನಿರೀಕ್ಷೆ ಇದೆ. ಅದಾದ ಬಳಿಕ ಪ್ರತೀ 6 ತಿಂಗಳಿಗೊಮ್ಮೆ ಡ್ರೋನ್‌ಗಳು ಸರಣಿಯಾಗಿ ಭಾರತಕ್ಕೆ ಸಿಗಲಿವೆ.

ಬಹಳ ಶಕ್ತಿಶಾಲಿ ಡ್ರೋನ್‌ಗಳು: ಚಾಲಕರಹಿತವಾದ ಮತ್ತು ರಿಮೋಟ್ ಆಗಿ ನಿಯಂತ್ರಿಸಬಹುದಾದ ಎಂಕ್ಯೂ–9ಬಿ ರೀಪರ್ ಡ್ರೋನ್ ಬಹಳ ನಿಖರ ಸಾಮರ್ಥ್ಯಕ್ಕೆ ಹೆಸರಾಗಿದೆ. ಶತ್ರುಗಳ ಸ್ಥಳಕ್ಕೆ ಗುರಿ ಇಟ್ಟರೆ ತಪ್ಪದೇ ನಾಶ ಮಾಡುವ ಸಾಮರ್ಥ್ಯ ಹೊಂದಿದೆ. ದೂರ ಸ್ಥಳದ ಗುರಿಗೆ ಹೊಡೆಯಬಲ್ಲ ಕ್ಷಿಪಣಿಗಳು ಮತ್ತು ಸ್ಮಾರ್ಟ್ ಬಾಂಬ್‌ಗಳನ್ನು ಈ ಡ್ರೋನ್‌ಗಳು ಹೊತ್ತೊಯ್ಯಬಲ್ಲುವು. ಚೀನಾದ ಬಳಿ ಬಹಳಷ್ಟು ಡ್ರೋನ್‌ಗಳಿದ್ದು, ಅದಕ್ಕೆ ಪ್ರತಿಯಾಗಿ ಅವಕ್ಕಿಂತ ಶಕ್ತಿಶಾಲಿ ಡ್ರೋನ್‌ಗಳಾಗಿ ಎಂಕ್ಯೂ–9ಬಿ ಇವೆ.

ಅರ್ಜಿ ಆಹ್ವಾನ ಮಂಡ್ಯ, ಜೂ.25– ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ 2023–24ನೇ ಸಾಲಿನ (ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಾತಿಗೆ ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶ https://shp.karnataka.gov.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.15 ಕೊನೆ ದಿಟ ಎಂದು ಪ್ರಕಟಣೆ ತಿಳಿಸಿದೆ. ಹೆಚಿನ ಮಾಹಿತಿಗೆ ದೂ: 08232–297240, ತಾಲೂಕು ವಿಸ್ತರಣಾಧಿಕಾರಿ ದೂ: 9008211484, ತಾಲೂಕು ವಿಸ್ತರಣಾಧಿಕಾರಿ ಪಾಂಡವಪುರ ವಿಭಾಗದ ದೂ: 7019571032 ಅನ್ನು ಸಂಪರ್ಕಿಸಬಹುದು.

ರಾಜಣ್ಣ ನಿಧನ



ಮೈಸೂರು, ಜೂ.25– ಮೂಲತಃ ಯಳಂದೂರು ತಾಲೂಕು ಮಾಂಬಳ್ಳಿ ಗ್ರಾಮದ ಗೂಳಿ ನಂಜಯ್ಯ ಕುಟುಂಬದವರಾಗಿದ್ದು, ಮೈಸೂರಿನ ಜೆ.ಪಿ. ನಗರದಲ್ಲಿ ವಾಸಿಸುತ್ತಿದ್ದ ನಿವೃತ್ತ ಐಎಫ್‌ಎಸ್ (ಎಪಿಸಿಸಿಎಫ್) ಅಧಿಕಾರಿ ಎಸ್.ರಾಜಣ್ಣ (71) ಅವರು ಭಾನುವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ನಾಳೆ (ಸೋಮವಾರ) ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮವಾದ ಮಾಂಬಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಇಂದಿನ ಪೀಳಿಗೆ ಕಲೆಯನ್ನು ವ್ಯವಹಾರವಾಗಿಸಿಕೊಂಡಿರುವುದು ಬೇಸರದ ಸಂಗತಿ

ಶಾಸಕ ಜಿ.ಡಿ.ಹರೀಶ್‌ಗೌಡ ವಿಷಾದ



ಮೈಸೂರು, ಜೂ. 25(ಎಸ್‌ಪಿಎನ್)– ಹಿಂದಿನ ಕಾಲದಲ್ಲಿ ಕಲೆಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ವಿದ್ಯಾರ್ಥಿಗಳು ಸಾಧನೆಯೊಂದೇ ಮಾನದಂಡವಾಗಿಸಿಕೊಂಡಿದ್ದರು. ಆದರೆ, ಇಂದಿನ ಪೀಳಿಗೆ ಕಲೆಯನ್ನು ವ್ಯವಹಾರದತ್ತ ಕೊಂಡೊಯ್ಯುತ್ತಿರುವುದು ಬೇಸರದ ಸಂಗತಿ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ವಿಷಾದಿಸಿದರು.

ಮೈಸೂರು ಕುವೆಂಪುನಗರದಲ್ಲಿರುವ ಗಾನಭಾರತೀ ಸಭಾಂಗಣದಲ್ಲಿ ಭಾರತೀಯ ನೃತ್ಯ ಕಲಾ ಪರಿಷತ್ ವತಿಯಿಂದ ಆಯೋಜಿಸಿದ್ದ ಅವಿನ್ಯ ರಾಷ್ಟ್ರಮಟ್ಟದ ಭರತನಾಟ್ಯ ಸ್ಪರ್ಧೆಯಲ್ಲಿ ವಿಜೇತರಾದ ನೃತ್ಯ ಪಟುಗಳಿಗೆ ಬಹುಮಾನ ವಿತರಿಸಿ ಅವರು, ಮಾತನಾಡಿದರು. ಭಾರತದ ಹಲವು ಪ್ರದೇಶಗಳಲ್ಲಿ ವೈವಿಧ್ಯಮಯ ಕಲೆಗಳನ್ನು ನಾವು ಕಾಣಬಹುದು. ಭಾರತೀಯ ನೃತ್ಯ ಕಲಾ ಪರಿಷತ್‌ನ ವಿದ್ಯಾರ್ಥಿಗಳು ಭರತನಾಟ್ಯದಲ್ಲಿ ಪರಿಣಿತಿ ಹೊಂದಿ, ರಾಜ್ಯ ಮತ್ತು ದೇಶಕ್ಕೆ ಉತ್ತಮ ಹೆಸರು ತಂದು ಕೊಡಲಿ ಎಂದು ಆಶಿಸಿದರು.

ನಮ್ಮ ಕಲೆ, ಸಾಹಿತ್ಯ, ಭರತನಾಟ್ಯ, ಸಂಗೀತಕ್ಕೆ ದೇಶ–ವಿದೇಶಿ ನೆಲದಲ್ಲಿ ಉತ್ತಮ ಪ್ರತಿಕ್ರಿಯೆ ದೊರಕುತ್ತಿದೆ. ಇದರಲ್ಲಿ ಮೈಸೂರಿನ ಕೊಡುಗೆ ಅಪಾರ ಎಂದ ಶಾಸಕರು, ಮೈಸೂರು ಸಂಸ್ಥಾನ ಕಲೆ, ಸಾಹಿತ್ಯ ಹಾಗೂ ಇತರೆ ಕಲೆಗಳಿಗೆ ಉತ್ತಮ ವೇದಿಕೆ ಒದಗಿಸಿಕೊಟ್ಟಿದ್ದರು. ಅವರ ಸಾಧನೆಯನ್ನು ಇಂದಿನ ಪೀಳಿಗೆಯೂ ನೆನಪಿಟ್ಟುಕೊಳ್ಳುತ್ತಿದ್ದಾರೆ ಎಂದರು.

ಬೆಂಗಳೂರು ರಾಷ್ಟ್ರೀಯ ನಾಟಕ ಶಾಲೆಯ ವಿಶ್ರಾಂತ ನಿರ್ದೇಶಕ ಸಿ.ಬಸವಲಿಂಗಯ್ಯ ಮಾತನಾಡಿ, ಕಲೆಗಳಲ್ಲಿ ಶ್ರೇಷ್ಠ–ಕನಿಷ್ಠ ಎಂಬ ಭೇದ–ಭಾವವಿಲ್ಲ. ಕಲೆಗಳಲ್ಲಿ ತೊಡಗಿಸಿಕೊಳ್ಳುವವರು, ಯಾವುದೇ ಕಲೆಯನ್ನು ನಿಷ್ಠೆಯಿಂದ ಕಲಿತರೆ ಅದೇ ಶ್ರೇಷ್ಠ ಕಲೆಯಾಗುತ್ತದೆ. ಕಲಿಕೆ ಯಲ್ಲಿ ಯಾವುದೇ ಭಿನ್ನವಿದ್ದರೂ ಕಲೆಯಲ್ಲಿ ತೊಡಗಿಸಿಕೊಳ್ಳುತ್ತಿರುವವರ ಮನಸ್ಥಿತಿ ಸಾಧನೆಯಲ್ಲಿ ಸ್ಥಿರವಾಗಿರಬೇಕು ಎಂದರು.

ಸಬ್ ಜ್ಯೂನಿಯರ್ ನೃತ್ಯ ಸ್ಪರ್ಧೆಯಲ್ಲಿ ಎಸ್.ಎನ್. ಶರವಾಣಿ ಪ್ರಥಮ, ವಾರಿದಿ ಪಿ ಶೆಟ್ಟಿ (ದ್ವಿ), ಎಂ. ಸಿಂಧೂರ(ತೃ) ಸ್ಥಾನ ಪಡೆದಿದ್ದಾರೆ. **ಜ್ಯೂನಿಯರ್ ನೃತ್ಯ** ಸ್ಪರ್ಧೆ ಯಲ್ಲಿ ತಾನ್ವಿ ಪ್ರಕಾಶ್(ಪ್ರ), ಎಸ್.ಎನ್. ಆಕಾಶ್(ದ್ವಿ), ಬಿ.ಅನುಷ್ಕ(ತೃ) ಸ್ಥಾನ ಪಡೆದಿದ್ದಾರೆ. **ಹಿರಿಯರ ನೃತ್ಯ ಸ್ಪರ್ಧೆಯಲ್ಲಿ** ಎಚ್. ಮಹತಿ(ಪ್ರ), ಪೂರ್ವಿ ಕೃಷ್ಣ(ದ್ವಿ), ಎಸ್.ಭಾವನ(ತೃ) ಸ್ಥಾನ ಪಡೆದಿದ್ದಾರೆ. **ಪ್ರೀ–ವಿದ್ವತ್ ನೃತ್ಯ** ಸ್ಪರ್ಧೆಯಲ್ಲಿ ಮಧನ (ಪ್ರ), ಮೇಘನ ಭಟ್(ದ್ವಿ), ಕೆ.ಹಂಸ ಲೇಖ(ತೃ) ಸ್ಥಾನ ಪಡೆದಿದ್ದಾರೆ. ಪೋಸ್ಟ್ ವಿದ್ವತ್ ನೃತ್ಯದಲ್ಲಿ ಪವನ್ ಕುಮಾರ್(ಪ್ರ), ಯುಕ್ತಿ ಉಡುಪ(ದ್ವಿ) ಮೇಘನಾ(ತೃ) ಸ್ಥಾನಪಡೆದಿದ್ದಾರೆ. ವೇದಿಕೆಯಲ್ಲಿ ಬಿಎನ್‌ಕೆಪಿ ಅಧ್ಯಕ್ಷ ವಿದ್ವಾನ್. ವಿಜಯಮೂರ್ತಿ, ಕಾರ್ಯದರ್ಶಿ ವಿದ್ವಾನ್ ಕುಮುದಿನಿ ಆಚಾರ್ಯ, ವಿದುಷಿ ಡಾ,ಕುಮುದಿನಿ ಆಚಚಿ, ಖಜಾಂಚಿ ವಿದಾನ್ ವಿ.ಭಾವನಾ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 26 ಜೂನ್ 2023

ರಾಷ್ಟ್ರೀಯ ಜೂನಿಯರ್ ಹಾಕಿ ತಂಡಕ್ಕೆ ಕೊಡಗಿನ ಶ್ರಾವ್ಯ ಗೋಲ್‌ಕೀಪರ್



ನಾಪೋಕ್ಲು, ಜೂ.25– ಒಡಿಶಾದಲ್ಲಿ ಜೂ.27ರಿಂದ ನಡೆಯಲಿರುವ ರಾಷ್ಟ್ರೀಯ ಜೂನಿಯರ್ ಹಾಕಿ ಪಂದ್ಯಾವಳಿಯಲ್ಲಿ ಕರ್ನಾಟಕ ತಂಡದ ಗೋಲ್ ಕೀಪರ್ ಆಗಿ ಕುಂಜಿಲ–ಕಕ್ಕಬ್ಬೆಯ ಪಿ.ಡಿ.ಶ್ರಾವ್ಯ ಆಯ್ಕೆಯಾಗಿದ್ದಾರೆ.

ಈಕೆ ಮಡಿಕೇರಿಯ ಸಾಯಿ ಬಾಲಕಿಯರ ಕ್ರೀಡಾ ವಸತಿ ನಿಲಯದಲ್ಲಿ ಇದ್ದು ಸರಕಾರಿ ಜೂನಿಯರ್ ಕಾಲೇಜಿನಲ್ಲಿ ಎರಡನೇ ವರ್ಷದ ಪಿಯುಸಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇವರು ಕುಂಜಿಲ ಗ್ರಾಮದ ದೇವಯ್ಯ–ಚಿತ್ರಾ ದಂಪತಿಗಳ ಪುತ್ರಿ.

ಕೊಡಗು ಜಿಲ್ಲೆಯಲ್ಲಿ ಸಾಮಾಜಿಕ ಅಭದ್ರತೆ

ಹೊರಗಿನವರಿಗೆ ಭೂಮಿ ಮಾರದಂತೆ ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಮನವಿ



ಮಡಿಕೇರಿ, ಜೂ.25– ಜಿಲ್ಲೆಯ ಶ್ರೀಮಂತ ಸಂಸ್ಕೃತಿಯ ಮೇಲೆ ಅತ್ಯಾಚಾರ ನಡೆಯುತ್ತಿದ್ದು, ಜಿಲ್ಲೆಯಲ್ಲಿ ಸಾಮಾಜಿಕ ಅಭದ್ರತೆ ಕಾಡುತ್ತಿದೆ. ಯಾವುದೇ ಕಾರಣಕ್ಕೂ ಕೊಡವರು ತಮ್ಮ ಜಾಗವನ್ನು ಹೊರಗಿನವರಿಗೆ ಮಾರಾಟ ಮಾಡಿ ಹೋಗದಂತೆ ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಕರೆ ನೀಡಿದ್ದಾರೆ.

ಕೊಡವ ರೈಡರ್ಸ್ ಕ್ಲಬ್ ಮುಂದಾಳತ್ವದಲ್ಲಿ ಬಾಂಡಿಂಗ್ ಬ್ಲೂಮ್ಸ್ ಕೊಡಗು ಸಂಸ್ಥೆ ಹಾಗೂ ಗೋಣಿಕೊಪ್ಪ ಕಾವೇರಿ ಕಾಲೇಜು ಸಹಯೋಗದಲ್ಲಿ ಕೋಣಂಗೇರಿ ತುಪ್ಪಾಣಿ ಭಗವತಿ ದೇವಸ್ಥಾನದ ಆವರಣದಲ್ಲಿ ನಡೆದ ಗಿಡ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತ ನಾಡಿದ ಅವರು, ಜಿಲ್ಲೆಯ ಪರಿಸ್ಥಿತಿ ಹಿಂದಿನಂತಿಲ್ಲ ಎಂದರು.

ಜಿಲ್ಲೆಯಲ್ಲಿ ಸಾಮಾಜಿಕ ಅಭದ್ರತೆ ಕಾಡುವುದರ ಜೊತೆಗೆ ಪ್ರಾಕೃತಿಕ ಅಸಮತೋಲನ ಎದುರಾಗಿದೆ. ಒಂದೆಡೆ ಗಿಡ ನೆಡುವ ಕೆಲಸವಾಗುತ್ತಿದ್ದರೆ ಮತ್ತೊಂದೆಡೆ ಕಾಡಿನಲ್ಲಿ ಮಾತ್ರವಲ್ಲ. ನಾಡಿನಲ್ಲಿ ಕೂಡ ಮರಗಳ ಹನನವಾಗುತ್ತಿದೆ. ಸ್ಥಳೀಯರಿಂದ ಅರಣ್ಯವನ್ನು ಕಾಪಾಡುವ ಕೆಲಸವಾದರೆ, ಹೊರಗಿನ ಮರಗಳ್ಳರಿಂದ ಅರಣ್ಯ ನಾಶವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಖಿಲ ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಚಮ್ಮಟೀರ ಪ್ರವೀಣ್ ಉತ್ತಪ್ಪ ಮಾತನಾಡಿ, ಒಂದು ಸಮಯದಲ್ಲಿ ಭತ್ತದ ಕಣಜವಾಗಿದ್ದ ಕೊಡಗಿನಲ್ಲಿ ಭತ್ತ ಬೆಳೆಯುವ ಪ್ರದೇಶಗಳು ಮಾಯವಾಗಿದೆ. ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು ಇದಕ್ಕೆ ಮೂಲ ಕಾರಣವಾಗಿದೆ. ರೈತರ ಭತ್ತ ಬೆಳೆಯುವ ಪ್ರದೇಶಕ್ಕೆ ಇಂತಿಷ್ಟು ಸಹಾಯಧನ ನೀಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರಿನ ಹವಾ ನಿಯಂತ್ರಣ ಕೊಠಡಿಯಲ್ಲಿ ಕುಳಿತು ಅರಣ್ಯದ ಬಗ್ಗೆ ಕಾನೂನು ರೂಪಿಸುವ ಮಂದಿಯಿಂದ ಇಂದು ಅರಣ್ಯ ನಾಶವಾಗಿದೆ. ಇದರಿಂದಲೇ ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ಕಾಡನ್ನು ಕಡಿದು ತೇಗ, ಬೀಟೆ ಹಾಗೂ ನೀಲಗಿರಿ ತೋಪುಗಳಾಗಿ ಪರಿವರ್ತನೆ ಮಾಡಿರುವುದರ ಫಲ ಇವತ್ತು ವನ್ಯಮೃಗಗಳು ಆಹಾರ ಅರಸಿ ನಾಡಿಗೆ ಬರುವಂತಾಗಿದೆ ಎಂದು ಹೇಳಿದರು.

ಸಮಾಜ ಸೇವಕಿ ಅಜ್ಜಿಕುಟ್ಟೀರ ಕಮಲ ಪೂಣಚ್ಚ ಮಾತನಾಡಿ, ಕಾಡು ಪ್ರಾಣಿಗಳಿಗೆ ಕಾಡಿನಲ್ಲಿ ಸರಿಯಾದ ಆಹಾರ ದೊರಕದೆ ಅವು ನಾಡಿಗೆ ಲಗ್ಗೆ ಇಡುತ್ತಿದ್ದು, ಕಾಡಿನಲ್ಲಿ ಸರಿಯಾದ ನೀರಿನ ವ್ಯವಸ್ಥೆ ಹಾಗೂ ಆಹಾರ ದೊರೆತರೆ ಅವು ಖಂಡಿತಾ ನಾಡಿಗೆ ಬರುವುದಿಲ್ಲ. ಕಾಡಿನೊಳಗೆ ಇವುಗಳಿಗೆ ಆಹಾರ ಮತ್ತು ನೀರಿನ ವ್ಯವಸ್ಥೆಯನ್ನು ಮಾಡಬೇಕಿದೆ. ಬಹುತೇಕ ಅರಣ್ಯ ನಾಶವಾಗಿರುವುದೇ ವನ್ಯಮೃಗಗಳು ನಾಡಿಗೆ ಬರಲು ಕಾರಣವಾಗಿದೆ ಎಂದರು. ನಾವು ತಿಂದು ಬಿಸಾಡುವ ಹಣ್ಣಿನ ಬೀಜಗಳನ್ನು ಕಾಡಿಗೆ ಬಿಸಾಡುವುದರ ಮೂಲಕ ಮತ್ತೆ ಕಾಡನ್ನು ಸೃಷ್ಟಿಸಬಹುದು ಎಂದು ಸಲಹೆ ನೀಡಿದರು.

ಕೊಡವ ರೈಡರ್ಸ್ ಕ್ಲಬ್ ಸ್ಥಾಪಕಾಧ್ಯಕ್ಷ ಅಜ್ಜಿಕುಟ್ಟೀರ ಪೃಥ್ವಿ ಸುಬ್ಬಯ್ಯ ಕ್ಲಬ್ ಬೆಳೆದು ಬಂದಿರುವ ಹಾದಿಯ ಬಗ್ಗೆ ತಿಳಿಸಿ, ಗಿಡನೆಡುವ ಉದ್ದೇಶಗಳನ್ನು ಹಾಗೂ ಪ್ರತಿವರ್ಷ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ದೇವಸ್ಥಾನ ಆವರಣದಲ್ಲಿ ಹಾಗೂ ಹುದಿಕೇರಿ ಸಮುದಾಯ ಆರೋಗ್ಯ ಕೇಂದ್ರ ಆವರಣದಲ್ಲಿ ಕೊಡವ ಜನಾಂಗದ ಕಾರೋಣ ಹಿಡಿಯುವ ಗೆಜ್ಜೆತಂಡ್ ಬಳಕೆಯ ಕುಮರ ಸೇರಿದಂತೆ, ಹಣ್ಣಿನ ಗಿಡಗಳು, ಕಾಡು ಜಾತಿಯ ಗಿಡಗಳನ್ನು ನೆಡಲಾಯಿತು.

ಈ ಸಂದರ್ಭ ದಾನಿಗಳು ಹಾಗೂ ಸಮಾಜ ಸೇವಕ ಅಜ್ಜಿಕುಟ್ಟೀರ ಶಾಂತು ಪೂಣಚ್ಚ ಬಾಂಡಿಂಗ್ ಬ್ಲೂಮ್ಸ್ ಕೊಡಗು ಅಧ್ಯಕ್ಷೆ ಬಾಚಮಾಡ ಲಿಜೇಟ್ ಭವಿ ಕುಮಾರ್, ತುಪ್ಪಾಣಿ ಭಗವತಿ ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕುಪ್ಪಣಮಾಡ ಗಣೇಶ್, ಅಂಜಿಕೇರಿ ನಾಡ್ ಜೋಡಿ ತಕ್ಕರಲ್ಲಿ ಒಬ್ಬರಾದ ಚಕ್ಕೇರ ರಾಜೇಶ್, ಕಾವೇರಿ ಕಾಲೇಜು ಎನ್.ಎಸ್.ಎಸ್ ವಿಭಾಗದ ಅಧಿಕಾರಿ ಮಂದೆಯಂಡ ವನಿತ್ ಕುಮಾರ್ ಉಪಸ್ಥಿತರಿದ್ದರು.

ಸುಂಟಿಕೊಪ್ಪ ರಾಷ್ಟ್ರೀಯ ಹೆದ್ದಾರಿಯಲ್ಲಿ ತಲೆ ಎತ್ತಿದ ಗೂಡ್ಸ್ ವಾಹನಗಳ ವ್ಯಾಪಾರ

ವಾಹನಗಳ, ಸಾರ್ವಜನಿಕರ ಸಂಚಾರಕ್ಕೆ ಅಡ್ಡಿ, ಟ್ರಾಫಿಕ್ ಜಾಮ್ ಸಮಸ್ಯೆ



ಸುಂಟಿಕೊಪ್ಪ ಜೂ.25– ರಾಷ್ಟ್ರೀಯ ಹೆದ್ದಾರಿ ರಸ್ತೆ ಬದಿ ದಿಢೀರನೆ ಗೂಡ್ಸ್ ವಾಹನಗಳಲ್ಲಿ ಚಪ್ಪಲಿ, ಹಣ್ಣು ಹಂಪಲು ಅಂಗಡಿ ಗಳು ಸೇರಿದಂತೆ ಇತರೆ ಸಾಮಗ್ರಿಗಳ ಅಂಗಡಿಗಳು ತಲೆ ಎತ್ತಿದ್ದು, ವಾಹನ ಸಂಚಾರಕ್ಕೆ ತೊಡಕುಂಟಾಗಿದೆ.

ಸುಂಟಿಕೊಪ್ಪ ಪಟ್ಟಣದಲ್ಲಿ ಭಾನುವಾರ ಸಂತೆ ದಿನವಾಗಿದ್ದು, ಪಟ್ಟಣ ಸೇರಿದಂತೆ ಗ್ರಾಮೀಣ ಪ್ರದೇಶದಿಂದಲೂ ಸಂತೆ ಮಾರುಕಟ್ಟೆಗೆ ಜನರು ಬರುತ್ತಾರೆ. ಶನಿವಾರ ಹಾಗೂ ಭಾನುವಾರ ಮಡಿಕೇರಿಗೆ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಆಗಮಿಸುತ್ತಿದ್ದು, ಪ್ರವಾಸಿಗರ ವಾಹನಗಳು ಸುಂಟಿಕೊಪ್ಪ ಮೂಲಕ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುತ್ತವೆ.

ಹೆದ್ದಾರಿ ಬದಿಯಲ್ಲೇ ಗೂಡ್ಸ್ ವಾಹನಗಳನ್ನು ನಿಲ್ಲಿಸಿಕೊಂಡು ಮಾರಾಟ ಮಾಡುತ್ತಿರುವುದು ಮತ್ತು ಕೆಲ ಖಾಸಗಿ ವಾಹನ ನಿಲುಗಡೆಗೊಳಿಸುತ್ತಿರುವುದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತಿದೆ. ಇದರ ಪರಿಣಾಮ ಅನಾಹುತ ಹಾಗೂ ಪಾದಚಾರಿಗಳ ಜೀವಕ್ಕೆ ಕಂಟಕವಾಗುವ ಸಾಧ್ಯತೆ ಹೆಚ್ಚಿದೆ. ಸಂಬಂಧಿಸಿದ ಗ್ರಾಮ ಪಂಚಾಯಿತಿ, ಪೊಲೀಸ್ ಇಲಾಖೆ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಪ್ರಜಾತಂತ್ರದ ಬೇರು ಗಟ್ಟಿಯಾಗಬೇಕು, ಜಾತಿ ವ್ಯವಸ್ಥೆ ತೊಲಗಬೇಕು

ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಂಕೇತ್‌ಪೂವಯ್ಯ ಕರೆ



ಮಡಿಕೇರಿ, ಜೂ.25– ಇನ್ನೊಬ್ಬರ ಒತ್ತಡಕ್ಕೆ ಮಣಿಯದೆ ತಮ್ಮ ಮನಸ್ಸಿಗೆ ಹಿಡಿಸುವ ವೃತ್ತಿಯ ಕಡೆಗೆ ಆಸಕ್ತಿ ಬೆಳೆಸಿಕೊಂಡು ಮಕ್ಕಳು ಈ ನಿಟ್ಟಿನಲ್ಲಿ ವಿದ್ಯಾಭ್ಯಾಸ ಮುಂದುವರೆಸಬೇಕು ಎಂದು ಸಮಾಜ ಸೇವಕ ಮತ್ತು ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಕಿವಿಮಾತು ಹೇಳಿದರು.

ಕೊಡಗು ಪ್ರೆಸ್ ಕ್ಲಬ್ ವತಿಯಿಂದ ಪತ್ರಿಕಾ ಭವನದಲ್ಲಿ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮಕ್ಕಳನ್ನು ಪ್ರಕೃತಿ ಮಡಿಲಿಗೆ ಕರೆದುಕೊಂಡು ಹೋಗಿ ಕಲಿಸುವ ವ್ಯವಸ್ಥೆ ಆಗಬೇಕು. ಮಕ್ಕಳಿಗೆ ಕಾಡು ತೋರಿಸುವ ವಿಚಾರದಲ್ಲಿ ಸರ್ಕಾರದ್ದು ಎಂದ ಅವರು ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ದೇಶ ಮತ್ತು ಸಮಾಜಕ್ಕೆ ನಿರೀಕ್ಷಿತ ಕೊಡುಗೆ ಸಿಗುತ್ತಿಲ್ಲ ಎಂದು ವಿಷಾದಿಸಿದರು. ಪ್ರಜಾತಂತ್ರ ಬೇರು ಗಟ್ಟಿ ಮಾಡಬೇಕು. ಜಾತಿ ವ್ಯವಸ್ಥೆ ತೊಲಗಿಸಬೇಕು. ಈ ನಿಟ್ಟಿನಲ್ಲಿ ಮಕ್ಕಳು ತಮಗಿದ್ದ ಸಿದ್ಧಾಂತ ಅಳವಡಿಸಿಕೊಳ್ಳಬೇಕು ಎಂದರು.

ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಆಚರಣಾ ಸಮಿತಿ ಅಧ್ಯಕ್ಷ ಉಳ್ಳಿಯಡ ಪೂವಯ್ಯ ಮಾತನಾಡಿ, ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸುವುದು ಸ್ವಾಗತಾರ್ಹ. ಮಕ್ಕಳ ಪ್ರತಿಭೆ ಗುರುತಿಸುವ ಅವಕಾಶ ಸಿಗಬೇಕು. ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವುದರಿಂದ ಅವರ ಬದುಕಿಗೆ ದಾರಿ ತೋರಿಸಿದಂತಾಗುತ್ತದೆ ಎಂದು ಹೇಳಿದರು.

ಬೆಳ್ಳಿಹಬ್ಬ ಆಚರಣಾ ಸಮಿತಿ ಮಹಾ ಪೋಷಕ ಜಿ. ರಾಜೇಂದ್ರ ಮಾತನಾಡಿ, ಮಾಧ್ಯಮದವರು ಎಂದರೆ ಪ್ರಚಾರಕ್ಕೆ ಬಳಸಿಕೊಳ್ಳುವ ಯಂತ್ರ ಎಂಬಂತೆ ಪರಿಗಣಿಸಲಾಗಿದೆ. ಪತ್ರಕರ್ತರಿಗೆ ಬೈಗುಳವೇ ಸಿಗುತ್ತಿದೆ. ಸುದ್ದಿ ಪ್ರಕಟವಾದಾಗ ಗುರುತಿಸುವುದು ಕಡಿಮೆ. ಪ್ರತಿಭಾ ಪುರಸ್ಕಾರದಂತಹ ಕಾರ್ಯ ಮುಂದುವರಿಯಬೇಕು. ಪತ್ರಕರ್ತರಲ್ಲಿ ಒಗ್ಗಟ್ಟು ಇರಬೇಕು. ಪತ್ರಕರ್ತರ ಸಂಕಷ್ಟಗಳಿಗೆ ಸಹಕಾರಿ ಆಗಲು ಶಾಶ್ವತ ನಿಧಿ ಒಂದನ್ನು ಸ್ಥಾಪಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕೊಡಗು ಪ್ರೆಸ್ ಕ್ಲಬ್ ಉಪಾಧ್ಯಕ್ಷ ಚೆಯಂಡ ತೇಜಸ್ ಪಾಪಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭ ಹಿರಿಯ ಪತ್ರಕರ್ತ ಹಿಂಕರ ರವಿ ಅವರಿಗೆ ಕೆ.ಬಿ. ಮಹಾಂತೇಶ್ ಸ್ಮಾರಕ ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕ್ಲಬ್ ಸದಸ್ಯರ 31 ಪ್ರತಿಭಾನ್ವಿತ ಮಕ್ಕಳಿಗೆ ಇದೇ ವೇಳೆ ಗೌರವ ಸಮರ್ಪಣೆ ಮಾಡಲಾಯಿತು. ಕೊಡಗು ಪ್ರೆಸ್‌ಕ್ಲಬ್ ಅಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಕಾರ್ಯದರ್ಶಿ ಕೆ.ಕೆ. ರೆಜಿತ್ ಕುಮಾರ್ ಗುತ್ತಿ ಸೇರಿದಂತೆ ಪ್ರೆಸ್ ಕ್ಲಬ್ ಪದಾಧಿಕಾರಿಗಳು ಇದ್ದರು.

ಚಾಲಕನ ನಿಯಂತ್ರಣ ತಪ್ಪಿ ಮನೆಯಂಗಳಕ್ಕೆ ಬಿದ್ದ ಕಾರು



ಮಡಿಕೇರಿ, ಜೂ.25– ಚಾಲಕನ ನಿಯಂತ್ರಣ ತಪ್ಪಿ ಇನ್ನೋವಾ ಕಾರೊಂದು ಮನೆಯ ಅಂಗಳಕ್ಕೆ ಉರುಳಿ ಬಿದ್ದ ಘಟನೆ ಮಡಿಕೇರಿ–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರ ಸಿಂಕೋನ ಬಳಿ ನಡೆದಿದೆ.

ಮಂಗಳೂರು ಮೂಲದ 8 ಮಂದಿ ಯುವಕರು ಮಡಿಕೇರಿ ಮಾರ್ಗವಾಗಿ ಕುಶಾಲನಗರ ಕಡೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಸಿಂಕೋನ ಬಳಿ ತಿರುವಿನಲ್ಲಿ ಕಾರು ಚಾಲಕನ ನಿಯಂತ್ರಣ ತಪ್ಪಿ ಮನೆಯ ಮುಂದಿನ ಅಂಗಳಕ್ಕೆ ಉರುಳಿ ಬಿದ್ದಿದೆ. ತುಂತುರು ಮಳೆ ಮತ್ತು ದಟ್ಟ ಮಂಜು ಮುಸುಕಿದ ವಾತಾವರಣ ಇದ್ದ ಕಾರಣ ಈ ಘಟನೆ ನಡೆದಿದೆ ಎನ್ನಲಾಗುತ್ತಿದೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರಿಗೆ ಹಾನಿಯಾಗಿದ್ದು, ಮನೆ ಮಂದಿಯೂ ಅಪಾಯದಿಂದ ಪಾರಾಗಿದ್ದಾರೆ.

ಉನ್ನತ ಶಿಕ್ಷಣದತ್ತ ವಿದ್ಯಾರ್ಥಿಗಳ ಗುರಿ ಇರಲಿ

ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ



ಚಾಮರಾಜನಗರ, ಜೂ.25– ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವ ಗುರಿ ಹೊಂದಬೇಕು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಸಲಹೆ ನೀಡಿದರು.

ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ (ಎನ್ ಎಸ್‌ಯುಐ) ವತಿಯಿಂದ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಪಡೆದ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುವ ವಿದ್ಯಾರ್ಥಿಗಳು ಅಲ್ಲಿಗೆ ಶಿಕ್ಷಣ ಮೊಟಕುಗೊಳಿಸದೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣ ಪಡೆಯುವ ಮೂಲಕ ಉನ್ನತ ಹುದ್ದೆ ಅಲಂಕರಿಸುವ ಮೂಲಕ ಸುಂದರ ಬದುಕು ಕಟ್ಟಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ಮೊರಾರ್ಜಿ ಶಾಲೆ, ಆದರ್ಶ ಶಾಲೆ, ಮೆಡಿಕಲ್ ಕಾಲೇಜು, ಇಂಜಿನಿಯರ್ ಕಾಲೇಜು, ಕಾನೂನು ಕಾಲೇಜು, ಕೃಷಿ ಕಾಲೇಜು, ಹೆಣ್ಣುಮಕ್ಕಳ ಪದವಿ ದರ್ಜೆ ಕಾಲೇಜುಗಳಿದ್ದು, ಎಲ್ಲಾ ರೀತಿಯ ಶಿಕ್ಷಣ ಸಂಸ್ಥೆಗಳಲ್ಲೂ ಉತ್ತಮ ಶಿಕ್ಷಣ ದೊರೆಯುತ್ತಿದೆ. ಪೋಷಕರು ಮಕ್ಕಳಿಗೆ ಇಂತಹ ಕೋರ್ಸ್‌ಗಳನ್ನೇ ಓದುವಂತೆ ಒತ್ತಡ ಹಾಕಬಾರದು. ಮಕ್ಕಳಿಗೆ ಅವರು ಇಷ್ಟಪಟ್ಟು ಓದುವ ಕೋರ್ಸ್‌ಗಳನ್ನು ಓದಲು ಅವಕಾಶ ಮಾಡಿಕೊಟ್ಟರೇ ಯಶಸ್ಸು ಕಾಣಬಹುದು ಎಂದರು.

ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ ಹಮ್ಮಿಕೊಂಡಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಬಹಳ ಅರ್ಥಪೂರ್ಣವಾಗಿದೆ. ಇಂತಹ ಕಾರ್ಯಕ್ರಮಗಳು ಹೆಚ್ಚು ನಡೆದು ಜಿಲ್ಲೆಯ ವಿದ್ಯಾರ್ಥಿಗಳು ಚೆನ್ನಾಗಿ ಓದಲು ಪ್ರೋತ್ಸಾಹಿಸುವಂತಾಗಲಿ ಎಂದು ಆಶಿಸಿದರು. ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಮಾತನಾಡಿ, ಪರೀಕ್ಷೆಯ ಅಂಕಗಳೇ ವಿದ್ಯಾರ್ಥಿಗಳ ಜೀವನದ ಮಾನದಂಡವಲ್ಲ. ಕಡಿಮೆ ಅಂಕ ಪಡೆದಿರುವ ಮಕ್ಕಳೇ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಹಾಗಾಗಿ ಪೋಷಕರು ತಮ್ಮ ಮಕ್ಕಳಿಗೆ ಹೆಚ್ಚು ಅಂಕ ಪಡೆಯುವಂತೆ ಒತ್ತಡ ಹಾಕಬಾರದು ಎಂದರು.

ಯಾವುದೇ ಸಮಸ್ಯೆ ಬಂದರೂ ಅದನ್ನು ಎದುರಿಸುವ ಆತ್ಮವಿಶ್ವಾಸವನ್ನು ಪೋಷಕರು ಮಕ್ಕಳಲ್ಲಿ ಬೆಳೆಸಬೇಕು. ಕನ್ನಡ ಮಾಧ್ಯಮದ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಏಕಾಗ್ರತೆ, ಆತ್ಮವಿಶ್ವಾಸ, ಧೈರ್ಯ ಬೆಳಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ನಿಮ್ಮ ಭವಿಷ್ಯ ಉಜ್ವಲವಾಗಲಿ ಎಂದು ಶುಭ ಕೋರಿದರು.

ಎನ್‌ಎಸ್‌ಯುಐ ಜಿಲ್ಲಾಧ್ಯಕ್ಷ ಮೋಹನ್ (ನಗು) ಮಾತನಾಡಿ, ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಮಾಜಿ ಸಂಸದ ದಿ.ಧ್ರುವ ನಾರಾಯಣ್ ಅವರ ಕನಸಿನ ಕೂಸಾಗಿತ್ತು. ಜಿಲ್ಲೆಯ ವಿದ್ಯಾರ್ಥಿಗಳನ್ನೂ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ತಾಲೂಕು ಮಟ್ಟದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಇದೇ ವೇಳೆ 400 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ನೆನಪಿನ ಕಾಣಿಕೆಯೊಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ನಿಯೋಜಿತ ನಳಂದ ಬೌದ್ಧ ವಿಶ್ವವಿದ್ಯಾನಿಲಯದ ಕಾರ್ಯದರ್ಶಿ ಬಂತೇ ಬೋಧಿದತ್ತತೇರ, ಸಂತ ಫ್ರಾನ್ಸಿಸ್ ಆಂಗ್ಲ ಮಾಧ್ಯಮ ಶಾಲೆ ಪ್ರಾಂಶುಪಾಲ ಬ್ರದರ್ ಪ್ರಭಾಕರ್ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು.

ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ಹೆಚ್.ಎ. ರಫೀಕ್ ಅಲಿ ವಿಚಾರ ಮಂಡಿಸಿದರು. ಬೆಂಗಳೂರು ಐಎಎಸ್ ತರಬೇತುದಾರ ಮೋಹನ್, ಎನ್.ಎಂ.ನವೀನ್‌ಕುಮಾರ್ ಮುಖ್ಯಭಾಷಣ ಮಾಡಿದರು. ಶಾಸಕ ಗಣೇಶ್ ಪ್ರಸಾದ್, ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಎಸ್‌ಟಿ ವಿಭಾಗದ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್, ಅರಕಲವಾಡಿ ಗುರುಸ್ವಾಮಿ, ಎಪಿಎಂಸಿ ನಿರ್ದೇಶಕ ಪ್ರದೀಪ್, ನಗರಸಭಾ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, ಚೇತನ್ ದೊರೆರಾಜ್, ಜಿಲ್ಲಾ ಕಾಂಗ್ರೆಸ್ ಮಾಧ್ಯಮ ಕಾರ್ಯದರ್ಶಿ ವಕೀಲ, ಅಂಬೇಡ್ಕರ್ ಸೇನೆ ಜಿಲ್ಲಾಧ್ಯಕ್ಷ ಗಣೇಶ್‌ಪ್ರಸಾದ್, ಎನ್‌ಎಸ್‌ಯುಐ ಪ್ರಚಾರ ಸಮಿತಿ ಅಧ್ಯಕ್ಷ ಆರ್.ಎಸ್. ಅಕ್ಷಯ್‌ಕುಮಾರ್, ಜಿಲ್ಲಾ ಉಪಾಧ್ಯಕ್ಷರಾದ ಸ್ಟ್ಯಾನ್ಲಿ ಬಾಲರಾಜ್, ವೈಸಿ. ಕುಮಾರ್, ತಾಲೂಕು ಅಧ್ಯಕ್ಷರಾದ ಮುತ್ತು ರಾಜ್, ಆದರ್ಶ, ದಸ್ತಗಿರಿ, ಸುದೀಪ್ ಇತರರಿದ್ದರು.

ಭಗೀರಥ ಮಹರ್ಷಿ ಛಲ, ದೃಢ ಸಂಕಲ್ಪದ ಪ್ರತೀಕ



ಚಾಮರಾಜನಗರ, ಜೂ.25– ಭಗೀರಥ ಮಹರ್ಷಿ ಛಲ, ದೃಢ ಸಂಕಲ್ಪದ ಪ್ರತೀಕ ಎಂದು ಗ್ರಾಮಾಂತರ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಚಿಕ್ಕರಾಜಶೆಟ್ಟಿ ತಿಳಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಜಿಲ್ಲಾ ಉಪ್ಪಾರ ಯುವಕರ ಸಂಘದಿಂದ ನಡೆದ ಶ್ರೀಭಗೀರಥ ಜಯಂತ್ಯೋತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಭಗೀರಥ ಮಹರ್ಷಿಗಳು ಕಠಿಣ ತಪಸ್ಸು ಮಾಡುವ ಮೂಲಕ ಧರೆಗೆ ಗಂಗೆಯನ್ನು ತಂದು ಕೊಟ್ಟಿದ್ದಾರೆ. ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಹಿಂದುಳಿದಿರುವ ಉಪ್ಪಾರ ಸಮಾಜಕ್ಕೆ ಶಿಕ್ಷಣವೇ ಆಸ್ತಿ ಆಗಿರುವುದರಿಂದ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಸಲಹೆ ನೀಡಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ವೃತ್ತ ನಿರೀಕ್ಷಕ ಕೆ.ಎಂ.ಮಹದೇವಶೆಟ್ಟಿ, ಜಿಲ್ಲಾ ಭಗೀರಥ ಯುವಕರ ಸಂಘ ತಮ್ಮನ್ನು ಗುರುತಿಸಿ ಸನ್ಮಾನಿಸಿರುವುದು ಸಂತಸ ತಂದಿದೆ. ಸಮಾಜದ ನೌಕರರು ಸಮುದಾಯದ ಅಭಿವೃದ್ಧಿ ಕಡೆಗೂ ಗಮನ ಹರಿಸುವುದು ಅಗತ್ಯ ಎಂದರು.

ಜಿಲ್ಲಾ ಉಪ್ಪಾರ ಯುವಕರ ಸಂಘದ ಜಿಲ್ಲಾಧ್ಯಕ್ಷ ಜಯಕುಮಾರ್ ಮಾತನಾಡಿದರು. ಐಟಿಐ ಕಾಲೇಜು ಪ್ರಾಂಶುಪಾಲ ಟಿ.ಎಂ.ರಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸರ್ಕಾರಿ ಪದವಿ ಪೂರ್ವ ಬಾಲಕರ ಕಾಲೇಜು ಪ್ರಾಂಶುಪಾಲ ಎಂ. ಸೋಮಣ್ಣ, ಹರದನಹಳ್ಳಿ ಉಪ್ಪಾರ ಜನಾಂಗದ ಗಡಿಮನೆ ಯಜಮಾನ ಜಯಸ್ವಾಮಿ, ಬಾಲ ಕಾರ್ಮಿಕ ಇಲಾಖೆ ಮಹೇಶ್, ಪೊಲೀಸ್ ಮಂಜುನಾಥ್, ರಾಜು ಕೆಸ್ತೂರು, ಜಿಲ್ಲಾ ಉಪ್ಪಾರ ಯುವಕರ ಸಂಘದ ಪ್ರಧಾನ ಕಾರ್ಯದರ್ಶಿ ನಾಗರಾಜು, ಹೋರಾಟಗಾರ ಸಿದ್ದಶೆಟ್ಟಿ, ಪ್ಲಬಿಂಗ್ ಶಿವಕುಮಾರ್, ಜಯಸಿದ್ದು, ಹೂವಿನ ಸೋಮು, ಮಹೇಂದ್ರ, ಚಂದ್ರು, ಮಂಜುನಾಥ್, ಶಂಕರರಾಜು ಹಾಜರಿದ್ದರು.



ಛಲವಾದಿ ಮಹಾಸಭಾಗೆ ನಟರಾಜ್ ಅಧ್ಯಕ್ಷ

ಕೊಳ್ಳೇಗಾಲ, ಜೂ.25– ಪಟ್ಟಣದ ಎಪಿಎಂಸಿ ಆವರಣದಲ್ಲಿ ರಾಜ್ಯ ಛಲವಾದಿ ಮಹಾಸಭಾ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ನೇತೃತ್ವದಲ್ಲಿ ಛಲವಾದಿ ಮಹಾಸಭಾ ತಾಲೂಕು ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆಯಿತು.

ತಾಲೂಕು ಛಲವಾದಿ ಮಹಾಸಭಾ ನೂತನ ಅಧ್ಯಕ್ಷರಾಗಿ ನಟರಾಜ್, ಗೌರವಾಧ್ಯಕ್ಷರಾಗಿ ಅಂಕಯ್ಯ, ಉಪಾಧ್ಯಕ್ಷ ಅಶೋಕ್, ಪ್ರಧಾನ ಕಾರ್ಯದರ್ಶಿ ಬಿ.ಶಾಂತರಾಜು, ಸಂಘಟನಾ ಕಾರ್ಯದರ್ಶಿ ಲೋಕೇಶ್, ಖಜಾಂಚಿ ಮುಕುಂದರಾಜು, ಸಹ ಕಾರ್ಯದರ್ಶಿಯಾಗಿ ಮರುಳಸಿದ್ದಯ್ಯ ಆಯ್ಕೆಯಾದರು.

ರಾಜ್ಯ ಛಲವಾದಿ ಮಹಾಸಭಾ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಮಾತನಾಡಿ, ಛಲವಾದಿ ಮಹಾಸಭಾ ಸಂಘಟನೆಯನ್ನು ಜಿಲ್ಲಾದ್ಯಂತ ಬಲಪಡಿಸುವ ನಿಟ್ಟಿನಲ್ಲಿ ಆಯಾ ತಾಲೂಕಿನಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಮೂಲಕ ಸಂಘಟನೆಗೆ ಶಕ್ತಿ ನೀಡಲಾಗುತ್ತಿದೆ. ಛಲವಾದಿ ಮಹಾಸಭಾ ಭವನ ಸ್ಥಾಪಿಸುವ ಮೂಲಕ ಸಮಾಜದವರ ಏಳ್ಗೆಗಾಗಿ ಕೈಲಾದ ಸಹಾಯ ಮಾಡಬೇಕು. ಅನ್ಯಾಯದ ವಿರುದ್ಧ ಹೋರಾಟ ಮಾಡುವ ಮೂಲಕ ನೊಂದವರ ಧ್ವನಿಯಾಗುವುದು ಇದರ ಪ್ರಮುಖ ಉದ್ದೇಶ ಎಂದರು.

ಈ ಸಂದರ್ಭ ಛಲವಾದಿ ಮಹಾಸಭಾ ಜಿಲ್ಲಾಧ್ಯಕ್ಷ ರಮೇಶ್, ಪ್ರಧಾನ ಕಾರ್ಯದರ್ಶಿ ಮಹದೇವ, ಸಂಘಟನಾ ಕಾರ್ಯದರ್ಶಿ ವೆಂಕಟೇಶ್, ಸಹ ಕಾರ್ಯದರ್ಶಿ ಬಸವರಾಜು, ಖಂಜಾಚಿ ಜವರಪ್ಪ, ಉಪಾಧ್ಯಕ್ಷ ಮಂಟೇಸ್ವಾಮಿ ಇನ್ನಿತರರಿದ್ದರು.

ವಿದ್ಯುತ್ ದರ ಹೆಚ್ಚಳ ಖಂಡಿಸಿ ತಮಟೆ ಪ್ರತಿಭಟನೆ



ಚಾಮರಾಜನಗರ, ಜೂ.25– ವಿದ್ಯುತ್ ದರ ಹೆಚ್ಚಳ ಖಂಡಿಸಿ ಹಾಗೂ ಗ್ಯಾರಂಟಿ ಯೋಜನೆಗಳಿಗೆ ಯಾವುದೇ ಷರತ್ತು ವಿಧಿಸಬಾರದು ಎಂದು ಒತ್ತಾಯಿಸಿ ಕರ್ನಾಟಕ ಸೇನಾಪಡೆ ವತಿಯಿಂದ ತಮಟೆ ಚಳವಳಿ ನಡೆಸಲಾಯಿತು. ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿ ರಾಜ್ಯ ಸರ್ಕಾರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರ ವಿದ್ಯುತ್ ದರ ಹೆಚ್ಚಳ ಮಾಡಿರುವುದರಿಂದ ಕೈಗಾರಿಕೆಗಳು ಮುಚ್ಚುವಂತಾಗಿದೆ. ಅಲ್ಲದೇ ಜನಸಾಮಾನ್ಯರಿಗೆ ಹೊರೆಯಾಗಿದೆ. ಕೂಡಲೇ ವಿದ್ಯುತ್ ದರ ಹೆಚ್ಚಳ ಕೈ ಬಿಡಬೇಕು ಹಾಗೂ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಿಗೆ ಯಾವುದೇ ಷರತ್ತು ವಿಧಿಸದೇ ಯಥಾವತ್ತಾಗಿ ಜಾರಿ ಮಾಡುವ ಮೂಲಕ ಗೊಂದಲ ನಿವಾರಿಸಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ನಮ್ಮ ಸಂಘಟನೆಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ನಿಜಧ್ವನಿ ಗೋವಿಂದರಾಜು, ಗು.ಪುರುಷೋತ್ತಮ್, ಪಣ್ಯದ ಹುಂಡಿ ರಾಜು, ಚಾ.ವೆಂ.ರಾಜ್ ಗೋಪಾಲ್, ಕುಮಾರ ಸ್ವಾಮಿ, ಮಹದೇವನಾಯಕ, ಶಿವಶಂಕರನಾಯಕ, ಲಿಂಗರಾಜು, ಚಂದ್ರಕುಮಾರ್ ಇತರರಿದ್ದರು.

ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜೂ.25– ಅಲ್ಪ ಸಂಖ್ಯಾಂತರ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಸಾಲಿನ ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ ಆನ್‌ಲೈನ್ ವೆಬ್‌ಸೈಟ್ http://shp.karnataka.gov.in ಮೂಲಕ ಜುಲೈ 15ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್‌ಗೆ ಸನ್ಮಾನ

ಗುಂಡ್ಲುಪೇಟೆ, ಜೂ.25– ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಅಭಿಮಾನಿ ಬಳಗದಿಂದ ಪುರಸಭೆ ಸದಸ್ಯ ರಮೇಶ್ ನೇತೃತ್ವದಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಗಣೇಶ್‌ಪ್ರಸಾದ್, ಕ್ಷೇತ್ರದ ಜನತೆ ನನ್ನ ಮತ್ತು ನಮ್ಮ ಕುಟುಂಬದ ಮೇಲೆ ಇಟ್ಟಿರುವ ನಂಬಿಕೆಗೆ ನಾನು ಚಿರಋಣಿ. ಕ್ಷೇತ್ರದ ಅಭಿವೃದ್ಧಿ ನನ್ನ ಮೂಲ ಮಂತ್ರವಾಗಿದೆ ಎಂದರು.

ಈ ವೇಳೆ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಮುಖಂಡರಾದ ಎಸ್‌ಆರ್‌ಎಸ್ ರಾಜಶೇಖರ್, ಸುರೇಶ್, ಲಾಯರ್ ಸುನೀಲ್, ಕುಮಾರ್, ಶಾಂತರಾಮು, ಪಿಗ್ಮಿ ಅನಂತು, ಸತೀಶ್, ಪಿ.ಸುರೇಂದ್ರ, ವೈಎನ್.ಉಮೇಶ್, ಅಸಿಮ್, ಉದ್ಯಮ್ ಪ್ರದೀಪ್, ರವಿ, ಶಿವಕುಮಾರ್, ಚಂದ್ರಶೇಖರ್ ಸೇರಿದಂತೆ ಇತರರಿದ್ದರು.



ಇಷ್ಟೊಂದು ಸುಳ್ಳು ಹೇಳುವ ಪ್ರಧಾನಿಯನ್ನು ನೋಡಿಲ್ಲ

ಸಾಂಗ್ಲಿಯಲ್ಲಿ ಮೋದಿ ವಿರುದ್ಧ ಗುಡುಗಿದ ಸಿದ್ದರಾಮಯ್ಯ



ಸಾಂಗ್ಲಿ, ಜೂ.25– ತಮ್ಮ 40 ವರ್ಷಗಳ ರಾಜಕೀಯ ಜೀವನದಲ್ಲಿ ಇಷ್ಟೊಂದು ಸುಳ್ಳು ಹೇಳುವ ಪ್ರಧಾನಿಯನ್ನು ನೋಡಿಲ್ಲ ಎಂದು ಹೇಳುವ ಮೂಲಕ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯಲ್ಲಿ ರಾಜ್ಯ ಕಾಂಗ್ರೆಸ್‌ನಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಬಿಜೆಪಿ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದರು. ನರೇಂದ್ರ ಮೋದಿ ಸರ್ಕಾರವನ್ನು ಸೋಲಿಸಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಸುವ ಜವಾಬ್ದಾರಿ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರ ಮೇಲಿದೆ ಎಂದರು.

2014ರಲ್ಲಿ ಮೋದಿ ಜನರ ಬ್ಯಾಂಕ್ ಖಾತೆಗಳಿಗೆ 15 ಲಕ್ಷ ರೂ ಜಮೆ, ಎರಡು ಕೋಟಿ ಉದ್ಯೋಗ ಸೃಷ್ಟಿ ಮತ್ತು ಅಚ್ಛೇ ದಿನ್ (ಒಳ್ಳೆಯ ದಿನಗಳು) ತರುವ ಬಗ್ಗೆ ಮಾತನಾಡಿದ್ದರು. ಈ ರೀತಿಯ ಏನಾದರೂ ಆಗಿದೆಯೇ? ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜೊತೆಗೆ ರಾಜ್ಯದ ಮೂಲೆ ಮೂಲೆಗಳಿಗೆ ಭೇಟಿ ನೀಡಿ ಹಿಂದಿನ ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಜನರಿಗೆ ವಿವರಿಸಿದೆವು, ವಿವಿಧ ಕೆಲಸಗಳಿಗಾಗಿ 40 ಪರ್ಸೆಂಟ್ ಕಮಿಷನ್ ಬಗ್ಗೆ ಜನರಿಗೆ ಮನವರಿಕೆ ಮಾಡಲಾಯಿತು. ಬಿಜೆಪಿ ಎಂದರೆ ಭ್ರಷ್ಟಾಚಾರ, ಭ್ರಷ್ಟಾಚಾರ ಎಂದರೆ ಬಿಜೆಪಿ ಎಂದು ಆರೋಪಿಸಿದರು.

ಕರ್ನಾಟಕದಲ್ಲಿ ಹಿಂದೆ ಬಿಜೆಪಿ ಗೆದ್ದಿದ್ದು ಜನಾದೇಶದಿಂದಲ್ಲ, ಶಾಸಕರಿಗೆ ಹಣದ ಆಮಿಷ ಒಡ್ಡುವ ಆಪರೇಷನ್ ಕಮಲ ಮೂಲಕ ಅಧಿಕಾರಕ್ಕೆ ಬಂದಿದ್ದರು ಎಂದು ತಿಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಾರಾಷ್ಟ್ರದಲ್ಲಿ ಏಕನಾಥ್ ಶಿಂಧೆ–ದೇವೇಂದ್ರ ಫಡ್ನವಿಸ್ ಸರ್ಕಾರ ಕೂಡ ಭ್ರಷ್ಟವಾಗಿದೆ ಮತ್ತು ಅವರನ್ನು ಸೋಲಿಸುವುದು ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಕೆಲಸವಾಗಿದೆ ಎಂದು ಹೇಳಿದರು.

ದೇಶ, ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ನಾವೆಲ್ಲರೂ ಮತ್ತೊಂದು ಸ್ವಾತಂತ್ರ್ಯ ಹೋರಾಟವನ್ನು ನಡೆಸಬೇಕಾಗಿದೆ. ನಾನು ಮುಖ್ಯಮಂತ್ರಿಯಾಗಲು ಅಂಬೇಡ್ಕರ್ ಕಾರಣ. ಬಿಜೆಪಿಯವರು ಧರ್ಮ, ಪ್ರದೇಶ, ಜಾತಿ ಮತ್ತು ಭಾಷೆಯ ಆಧಾರದ ಮೇಲೆ ಜನರನ್ನು ವಿಭಜಿಸುತ್ತಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣ ಪ್ರಾರಂಭವಾಗಬೇಕಿದ್ದ ಐದು ಖಾತರಿಗಳಲ್ಲಿ ಒಂದಾದ ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡದಂತೆ ಭಾರತೀಯ ಆಹಾರ ನಿಗಮಕ್ಕೆ ಬಿಜೆಪಿ ಹೇಳುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಸಂವಿಧಾನವನ್ನು ಬದಲಾಯಿಸಲು ಕಾಂಗ್ರೆಸ್ ಎಂದಿಗೂ ಬಿಡುವುದಿಲ್ಲ ಮತ್ತು ಅದನ್ನು ರಕ್ಷಿಸಲು ಪಕ್ಷದ ಎಲ್ಲಾ ಕಾರ್ಯಕರ್ತರು ಯಾವುದೇ ತ್ಯಾಗಕ್ಕೂ ಸಿದ್ಧರಾಗಿರಬೇಕು ಎಂದು ಕರೆ ನೀಡಿದ ಸಿದ್ದರಾಮಯ್ಯ, ಸಾಂಗ್ಲಿಯ ಜತ್ ತಾಲೂಕಿನ ನೀರಿನ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಿ ಜನರಿಗೆ ನೀರು ಸಿಗುವಂತೆ ಮಾಡುವುದಾಗಿ ಭರವಸೆ ನೀಡಿದರು.

ಮೂರನೇ ಪುಟದಿಂದ

ಅಧಿಕಾರ ಬಿಟ್ಟು ತೊಲಗಿ

ಶುಕ್ರವಾರ ಪಾಟ್ನಾದಲ್ಲಿ ಪ್ರಧಾನಿ ಮೋದಿಯವರನ್ನು ಅಧಿಕಾರದಿಂದ ಇಳಿಸಲು ಏನೇನು ಮಾಡಬಹುದು ಎಂದು ಚರ್ಚೆ ನಡೆಸಿದ್ದಾರೆ. ನೀವು ಮುಂದಿನ ಚುನಾವಣೆಯಲ್ಲಿ ಮೋದಿಯವರನ್ನು ಅವಿರೋಧವಾಗಿ ಆಯ್ಕೆ ಮಾಡೋಣ ಎಂದು ಹೇಳಬೇಕಾಗಿತ್ತು. ನಿಮ್ಮ ಯೋಗ್ಯತೆಗೆ ಅದು ಆಗಲಿಲ್ಲ. ಸೂರ್ಯ ಚಂದ್ರರಿರುವವರೆಗೆ ಮತ್ತೊಮ್ಮೆ ಮೋದಿ ಪ್ರಧಾನಿ ಆಗುವುದು ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ 25 ಸ್ಥಾನ ಗೆಲ್ಲುವ ಮೂಲಕ ಮೋದಿಗೆ ನಾವು ಕೊಡುಗೆ ನೀಡಬೇಕಿದೆ. ಸಾಮಾನ್ಯ ಜನ ಕಟ್ಟೋಕೆ ಆಗದ ರೀತಿ ಕರೆಂಟ್ ಬಿಲ್ ಜಾಸ್ತಿ ಮಾಡಿದ್ದಾರೆ. ಕೈಗಾರಿಕಾ ಉದ್ಯಮಗಳು ಮುಚ್ಚುವ ಸ್ಥಿತಿಗೆ ಬಂದಿದೆ. ಗೋಹತ್ಯೆ ನಿಷೇದ ಕಾಯ್ದೆ ರದ್ದು ಮಾಡ್ತೇವೆ ಎಂದು ಹೇಳ್ತಾ ಇದ್ದಾರೆ. ಅದಕ್ಕೆ ನಾವು ಅವಕಾಶ ನೀಡಬಾರದು ಎಂದರು. ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಹೋಗಬೇಕು ಎಂದು ತೀರ್ಮಾನ ಮಾಡಿದ್ದೇನೆ. ಕಾಂಗ್ರೆಸ್ ಬಣ್ಣ ಬಯಲು ಮಾಡಬೇಕಾಗಿದೆ. ಅಧಿವೇಶನದ ವೇಳೆ ರಾಜ್ಯಪಾಲರ ಭಾಷಣ ಮುಗಿದ ಬಳಿಕ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ನಾನು ಧರಣಿ ಕುಳಿತುಕೊಳ್ಳುತ್ತೇನೆ, ಗ್ಯಾರಂಟಿಗಳನ್ನು ಕೊಡೋವರೆಗೂ ಸತ್ಯಾಗ್ರಹ ಮಾಡುತ್ತೇವೆ. ಅಧಿವೇಶನದ ಒಳಗೆ ನಮ್ಮ ಶಾಸಕರಿಂದ ಹೋರಾಟ ನಡೆಯಲಿದೆ. ಗಾಂಧಿ ಪ್ರತಿಮೆ ಬಳಿ ನಾನು ನಮ್ಮ ಮುಖಂಡರ ಜತೆ ಸತ್ಯಾಗ್ರಹ ಮಾಡುತ್ತೇನೆಂದು ಎಚ್ಚರಿಕೆ ನೀಡಿದರು.

ಕೇದಾರನಾಥ ಯಾತ್ರೆ ತಾತ್ಕಾಲಿಕ ಸ್ಥಗಿತ

ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಉತ್ತರ ಭಾರತದಲ್ಲಿ ಮಾನ್ಸೂನ್ ಮಾರುತಗಳು ಪ್ರವೇಶ ಮಾಡಿದ್ದು, ಅಸ್ಸಾಂ, ಉತ್ತರಾಖಂಡ, ಹಿಮಾಚಲ ಪ್ರದೇಶ, ಮ್ಮು ಮತ್ತು ಕಾಶ್ಮೀರ ಸೇರಿದಂತೆ ಹಲವು ಭಾಗಗಳಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಪ್ರಮುಖವಾಗಿ ಉತ್ತರಾಖಂಡದಲ್ಲಿ ಮಳೆ ಮುಂದುವರೆದಿದ್ದು, ಹರಿದ್ವಾರದಲ್ಲಿ ಕಳೆದ 24 ಗಂಟೆಗಳಲ್ಲಿ 78 ಮಿಮೀ ಮಳೆಯಾಗಿದೆ. ಅಂತೆಯೇ ರಾಜಧಾನಿ ಡೆಹ್ರಾಡೂನ್ 33.2 ಮಿ.ಮೀ ಮಳೆಯಾಗಿದ್ದು, ಉತ್ತರಕಾಶಿ 27.7ಮಿ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಮುಂದಿನ ಐದು ದಿನಗಳ ಕಾಲ ಪೂರ್ವ ಮಧ್ಯ ಮತ್ತು ವಾಯುವ್ಯ ಭಾರತದ ರಾಜ್ಯಗಳಲ್ಲಿ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಇದಲ್ಲದೆ, ನೈಋತ್ಯ ಮಾನ್ಸೂನ್ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಛತ್ತೀಸ್‌ಗಢ, ಪೂರ್ವ ಮಧ್ಯಪ್ರದೇಶ, ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶಗಳಿಗೆ ಮುನ್ನುಗ್ಗುತ್ತಿದೆ.

ದುರ್ವರ್ತನೆ ತೋರಿದರೆ ಶಿಸ್ತು ಕ್ರಮ

ಸುತ್ತೋಲೆ ಹೊರಡಿಸಿದೆ. ಶಕ್ತಿ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ನಿಗಮದ ಚಾಲನಾ ಸಿಬ್ಬಂದಿ ಪರಿಶ್ರಮ ಹೆಚ್ಚಿನ ಮಟ್ಟದಲ್ಲಿದೆ. ಆದರೆ, ಕೆಲವೊಂದು ಅಹಿತಕರ ಘಟನೆಗಳು ಈ ಮಹತ್ವದ ಯೋಜನೆಯ ಬಗ್ಗೆ ಭಿನ್ನಾಭಿಪ್ರಾಯಗಳು ಮೂಡುವಂತೆ ಮಾಡುತ್ತಿದೆ. ಚಾಲನಾ ಸಿಬ್ಬಂದಿಗಳು ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಮಹಿಳಾ ಪ್ರಯಾಣಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಬೇಕು. ಈ ಬಗ್ಗೆ ಮಹಿಳಾ ಪ್ರಯಾಣಿಕರಿಂದ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕರ್ತವ್ಯ ನಿರ್ವಹಿಸಬೇಕು.

ಮಹಿಳೆಯರು ಇರುವ ಬಸ್ ನಿಲ್ದಾಣ/ಬಸ್ ನಿಲುಗಡೆ ಸ್ಥಳಗಳಲ್ಲಿ ಬಸ್ ನಿಲ್ಲಿಸದೇ ಇರುವುದು ಅಥವಾ ಮಹಿಳಾ ಪ್ರಯಾಣಿಕರಿಗೆ ಉಚಿತವಾಗಿ ಪ್ರಯಾಣಿಸುವ ಕುರಿತು ಅಪಹಾಸ್ಯ ಮಾಡುವುದು, ಇನ್ನಿತರೆ ರೀತಿಯಲ್ಲಿ ಮಹಿಳೆಯರೊಂದಿಗೆ ಅಗೌರವದಿಂದ ನಡೆದುಕೊಳ್ಳುತ್ತಿರುವ ಪ್ರಕರಣಗಳ ಘಟನೆಗಳು ಬೆಳಕಿಗೆ ಬಂದಿವೆ. ಈ ರೀತಿ ಘಟನೆಗಳು ಮತ್ತೆ ಮರುಕಳಿಸಬಾರದು. ಒಂದು ವೇಳೆ ಅನುಚಿತವಾಗಿ ಮಹಿಳೆಯರೊಂದಿಗೆ ವರ್ತಿಸುವುದು ಅಪಹಾಸ್ಯ ಮಾಡುತ್ತಿರುವ ಬಗ್ಗೆ ದೂರು ಬಂದರೆ ಅಂತಹ ವ್ಯಕ್ತಿಗಳ ವಿರುದ್ಧ ಗಂಭೀರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದೆ. ಮಹಿಳೆಯರಿಗೆ ವಿತರಿಸುವ ಟಿಕೇಟ್ ಮೊತ್ತವನ್ನು ಸಾರಿಗೆ ಆದಾಯವೆಂದು ಪರಿಗಣಿಸಲಾಗುತ್ತಿದೆ. ಈ ಹಿನ್ನೆಲೆ, ನಿಗಮದ ಚಾಲಕ ಮತ್ತು ನಿರ್ವಾಹಕರುಗಳು ನಿಗದಿತ ಎಲ್ಲ ಬಸ್ ನಿಲ್ದಾಣ/ಬಸ್ ನಿಲುಗಡೆ ಸ್ಥಳಗಳಲ್ಲಿ ನಿಲುಗಡೆ ನೀಡಿ, ಪ್ರಯಾಣಿಕರನ್ನು ವಿಶೇಷವಾಗಿ ಮಹಿಳೆಯರು/ವಿದ್ಯಾರ್ಥಿಗಳನ್ನು ಹತ್ತಿಸಿ/ಇಳಿಸಬೇಕು ಎಂದು ತಿಳಿಸಿದೆ.

ಇಬ್ಬರ ದುರ್ಮರಣ

ಹಿಂಬದಿ ಸವಾರ ಜನಾರ್ಧನ್ ಪೂಜಾರಿ ಚಿಕಿತ್ಸೆ ಫಲಕಾರಿಯಾಗದೇ ಮದ್ದೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ವಾರಾಂತ್ಯದ ರಜೆ ಹಿನ್ನೆಲೆಯಲ್ಲಿ ಬೈಕ್‌ನಲ್ಲಿ ಬೆಂಗಳೂರಿನಿಂದ ಮೈಸೂರಿನತ್ತ ತೆರಳುತ್ತಿದ್ದ ವೇಳೆ ಅಪರಿಚಿತ ವಾಹನಕ್ಕೆ ಭಾನುವಾರ ಬೆಳಗ್ಗೆ 6ರ ಸುಮಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಈ ಘಟನೆ ಸಂಭವಿಸಿದೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮದ್ದೂರು ಸಂಚಾರಿ ಠಾಣೆ ಎಸ್‌ಐ ಸಿದ್ದರಾಜು ಪರಿಶೀಲಿಸಿ ಬಳಿಕ ಪ್ರಕರಣ ದಾಖಲಿಸಿಕೊಂಡು, ಶವಗಳನ್ನು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಗಿದೆ.

ರಾಜ್‌ಕುಮಾರ್ ಸಂಬಂಧಿ ಸೂರಜ್

ಪಾಲ್ಗೊಂಡಿದ್ದರು. 'ಭಗವಾನ್ ಶ್ರೀಕೃಷ್ಣ ಪರಮಾತ್ಮ' ಸೇರಿದಂತೆ ಒಂದೆರಡು ಸಿನಿಮಾಗಳನ್ನು ಅವರು ಅನೌನ್ಸ್ ಮಾಡಿದ್ದರು. ಚಾಮರಾಜನಗರದ ಗುಂಡ್ಲುಪೇಟೆ ತಾಲೂಕಿನ ಬೇಗೂರು ಠಾಣಾ ವ್ಯಾಪ್ತಿಯಲ್ಲಿ ಅಪಘಾತ ನಡೆದಿದೆ. ಸದ್ಯ ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಇನ್ನೂ ಕೆಲವು ದಿನಗಳ ಕಾಲ ಐಸಿಯುನಲ್ಲೇ ಇರಲು ವೈದ್ಯರು ಸೂಚಿಸಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸದ್ಯ ಆಸ್ಪತ್ರೆಗೆ ನಿರ್ಮಾಪಕ ಚಿನ್ನೇಗೌಡ, ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್ ಸೇರಿದಂತೆ ಡಾ.ರಾಜ್ ಕುಟುಂಬದ ಹಲವರು ಭೇಟಿ ನೀಡಿದ್ದಾರೆ.

ಗುಣಮಟ್ಟದ ಪರಿಕಲ್ಪನೆಗಳ ಕುರಿತು ವಾರ್ಷಿಕ ಸಮಾವೇಶ

ಗುಣಮಟ್ಟ ಕಾಯ್ದುಕೊಳ್ಳಲು ಉದ್ಯಮಗಳಿಗೆ ಕ್ಯೂಸಿಎಫ್‌ಐ ಉತ್ತಮ ವೇದಿಕೆ

ಮೈಸೂರು,ಜೂ.25(ಪಿಎಂ)– ಉತ್ಪನ್ನಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯಾ (ಕ್ಯೂಸಿಎಫ್‌ಐ) ಒಂದು ಉತ್ತಮ ವೇದಿಕೆಯಾಗಿದ್ದು, ಉದ್ಯಮಗಳು ಈ ವೇದಿಕೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕ್ಯೂಸಿಎಫ್‌ಐ ಸಂಸ್ಥಾಪಕ ಸದಸ್ಯ ಪ್ರೊ. ನಾರಾಯಣ ಸಲಹೆ ನೀಡಿದರು.

ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಸಾಹುಕಾರ್ ಚನ್ನಯ್ಯ ಸಭಾಂಗಣದಲ್ಲಿ ಕ್ವಾಲಿಟಿ ಸರ್ಕಲ್ ಫೋರಂ ಆಫ್ ಇಂಡಿಯಾ (ಕ್ಯೂಸಿಎಫ್‌ಐ) ಮೈಸೂರು ಘಟಕದ ವತಿಯಿಂದ 'ಉತ್ತಮ ಭವಿಷ್ಯಕ್ಕಾಗಿ ಗುಣಮಟ್ಟದ ಪರಿಕಲ್ಪನೆಗಳನ್ನು ಪಾಲಿಸಿ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಗುಣಮಟ್ಟದ ಪರಿಕಲ್ಪನೆಗಳ ಕುರಿತು 7ನೇ ವಾರ್ಷಿಕ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯಮಗಳು ತಮ್ಮ ಉತ್ಪನ್ನಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳುವುದು ಅತ್ಯಂತ ಅಗತ್ಯ. ಗುಣಮಟ್ಟದ ಉತ್ಪನ್ನಗಳನ್ನು ಗ್ರಾಹಕರಿಗೆ ಪೂರೈಸಿದರೆ ಮಾತ್ರವೇ ಉದ್ಯಮಗಳು ಉಳಿದು ಬೆಳೆಯಲು ಸಾಧ್ಯ. ಗುಣಮಟ್ಟದ ಉತ್ಪನ್ನಗಳ ತಯಾರಿಕೆಗೆ ಆದ್ಯತೆ ನೀಡುವುದು ಯಾವುದೇ ಉದ್ಯಮದ ಕರ್ತವ್ಯವೂ ಹೌದು. ದೇಶದಲ್ಲಿ ಮೊಟ್ಟ ಮೊದಲಿಗೆ 1986ರಲ್ಲಿ ಹೈದರಾಬಾದಿನ ಬಿಹೆಚ್‌ಇಎಲ್‌ನಲ್ಲಿ ಕ್ವಾಲಿಟಿ ಸರ್ಕಲ್ ಆಫ್ ಇಂಡಿಯಾ ಕಾರ್ಯಾರಂಭ ಮಾಡಿತು ಎಂದರು. ಸಣ್ಣದಾಗಿ ಆರಂಭವಾದ ಕ್ಯೂಸಿಎಫ್‌ಐ ಈಗ ದೇಶದಲ್ಲಿ 36 ಘಟಕಗಳನ್ನು ಒಳಗೊಂಡಿದೆ. ಆ ಮೂಲಕ ಎಲ್ಲಾ ಘಟಕಗಳು ತಮ್ಮ ವ್ಯಾಪ್ತಿಯ ಉದ್ಯಮಗಳು ಗುಣಮಟ್ಟ ಕಾಯ್ದುಕೊಳ್ಳಲು ಮಾರ್ಗದರ್ಶನ ನೀಡುತ್ತಿವೆ ಎಂದು ಹೇಳಿದರು.

ಕ್ಯೂಸಿಎಫ್‌ಐ ಸಂಸ್ಥಾಪಕ ಸದಸ್ಯ ಪ್ರೊ.ನಾರಾಯಣ



ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸದಾಶಿವೇಗೌಡ ಮಾತನಾಡಿ, ಗುಣಮಟ್ಟದ ಬಗ್ಗೆ ಉದ್ಯಮಗಳು ತಮ್ಮ ಕಾರ್ಯವಿಧಾನಗಳನ್ನು ಸಾದರಪಡಿಸಲು ಈ ಸಮಾವೇಶ ಸಹಕಾರಿ. ಇದರಿಂದ ಗುಣಮಟ್ಟದ ಪರಿಕಲ್ಪನೆಯ ಜ್ಞಾನ ಪಸರಿಸಲಿದೆ. ಆ ಮೂಲಕ ಉತ್ತಮ ಕಾರ್ಯವಿಧಾನಗಳನ್ನು ಇತರೆ ಉದ್ಯಮಗಳು ಅಳವಡಿಸಿಕೊಳ್ಳಲು ಸಹಕಾರಿಯಾಗಲಿದೆ. ಈ ಹಿನ್ನೆಲೆಯಲ್ಲಿ ಕ್ಯೂಸಿಎಫ್‌ಐನ ಈ ಸಮಾವೇಶ ಮಹತ್ವದ ಪಾತ್ರ ವಹಿಸಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಪರ್ಧೆಗಳು: ಸಮಾವೇಶದ ಅಂಗವಾಗಿ ನಡೆದ ಮುಖ್ಯ ಮೂರು ಸ್ಪರ್ಧೆಗಳಲ್ಲಿ ವಿವಿಧ ಉದ್ಯಮಗಳ 134 ತಂಡಗಳು ಭಾಗವಹಿಸಿದ್ದವು. ಆ ಮೂಲಕ ಸಾವಿರಾರು ಉದ್ಯೋಗಿಗಳು ಹಾಗೂ ಕಾರ್ಮಿಕರು ತಮ್ಮ ಉತ್ಪನ್ನಗಳ ತಯಾರಿಕೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಅನ್ವೇಷಿಸಿರುವ ಕೌಶಲ್ಯಗಳನ್ನು ಪ್ರದರ್ಶಿಸಿದರು.

ಕೈಜೆನ್ ಪ್ರದರ್ಶನ ಸ್ಪರ್ಧೆಯಲ್ಲಿ 47 ತಂಡಗಳು, ಕ್ವಾಲಿಟಿ ಸರ್ಕಲ್ ಕೇಸ್ ಸ್ಟಡೀಸ್ ಸ್ಪರ್ಧೆಯಲ್ಲಿ 19 ತಂಡಗಳು ಹಾಗೂ ಅಲೈಡ್ ಕೇಸ್ ಸ್ಟಡಿಸ್ ವಿಭಾಗದಲ್ಲಿ 68 ತಂಡಗಳು ಪಾಲ್ಗೊಂಡಿದ್ದವು. ಈ ಪೈಕಿ ಉತ್ತಮ ಪ್ರದರ್ಶನ ನೀಡಿದ ತಂಡಗಳನ್ನು ಕ್ರಮವಾಗಿ ಗೋಲ್ಡ್, ಸಿಲ್ವರ್ ಮತ್ತು ಬ್ರೋಂಜ್ ಸ್ಥಾನಗಳನ್ನು ನೀಡಿ ಟ್ರೋಫಿಗಳನ್ನು ಪ್ರದಾನ ಮಾಡಲಾಯಿತು. ಸಂಜೆ ನಡೆದ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪದ್ಮಶ್ರೀ ಪುರಸ್ಕೃತ ಸಿರಿಧಾನ್ಯ ಪ್ರಚಾರಕ ಡಾ.ಖಾದರ್ ವಲ್ಲಿ ಟ್ರೋಫಿಗಳನ್ನು ಪ್ರದಾನ ಮಾಡಿದರು.

ಕ್ಯೂಸಿಎಫ್‌ಐ ದಕ್ಷಿಣ ಭಾರತದ ನಿರ್ದೇಶಕ ಎ.ಎಲ್.ಕಿಶನ್, ಬೆಂಗಳೂರು ಘಟಕದ ಮೆಂಟರ್ ಜಗದೀಶ್ ಪ್ರಸಾದ್, ಮೈಸೂರು ಘಟಕದ ಅಧ್ಯಕ್ಷ ಸತ್ಯೇಂದ್ರ ಓ.ದೇವರಕೊಂಡೆ, ಸಿಇಓ ಎಲ್. ಮುರಳಿ, ಮೆಂಟರ್ ಟಿ.ವಿ.ವೆಂಕಟರಾಮ್, ಕಾರ್ಯದರ್ಶಿ ವಾದಿರಾಜ್ ಕುಲಕರ್ಣಿ, ಖಜಾಂಚಿ ಸಿ.ಆರ್.ಅಶ್ವಥ್ ಮತ್ತಿತರರು ಹಾಜರಿದ್ದರು.

ಬೆಂಗಳೂರಲ್ಲಿ ಟಿಕ್ಯೂಎಂ ಸಮಾವೇಶ

ಮುಂಬರುವ ಅಕ್ಟೋಬರ್ ತಿಂಗಳಲ್ಲಿ ರಾಷ್ಟ್ರ ಮಟ್ಟದ 'ಟೋಟಲ್ ಕ್ವಾಲಿಟಿ ಮ್ಯಾನೇಜ್‌ಮೆಂಟ್ (ಟಿಕ್ಯೂಎಂ) ಸಮಾವೇಶ'ವು ಬೆಂಗಳೂರಿನಲ್ಲಿ ನಡೆಯಲಿದೆ. ಸಮಾವೇಶದಲ್ಲಿ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಕ್ಯೂಸಿಎಫ್‌ಐನ ಮೈಸೂರು, ಬೆಂಗಳೂರು ಮತ್ತು ಹೊಸೂರು ಘಟಕಗಳಿಂದ ಆಯೋಜಿಸುತ್ತಿರುವ ಈ ಸಮಾವೇಶದಲ್ಲಿ ಮೈಸೂರಿನ ಕೈಗಾರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ವಿವಿಧ ಸ್ಪರ್ಧೆಗಳಲ್ಲಿ ತಮ್ಮ ಗುಣಮಟ್ಟದ ಪರಿಕಲ್ಪನೆಯ ಕೌಶಲ್ಯ ಪ್ರದರ್ಶಿಸಬೇಕು.
–ಎ.ಎಲ್.ಕಿಶನ್, ನಿರ್ದೇಶಕರು, ದಕ್ಷಿಣ ಭಾರತ ಕ್ಯೂಸಿಎಫ್‌ಐ.

ಮಣಿಪುರ ಹಿಂಸಾಚಾರ: ಇಂಟರ್ನೆಟ್ ನಿಷೇಧ ಜೂನ್ 30ರವರೆಗೆ ವಿಸ್ತರಣೆ

ಇಂಫಾಲ್, ಜೂ.25– ಹಿಂಸಾಚಾರ ಪೀಡಿತ ಮಣಿಪುರದಲ್ಲಿ ಶಾಂತಿ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಯಾವುದೇ ತೊಂದರೆಯಾಗದಂತೆ ತಡೆಯಲು ರಾಜ್ಯದಲ್ಲಿ ಇಂಟರ್ನೆಟ್ ಸೇವೆಗಳ ಮೇಲಿನ ನಿಷೇಧವನ್ನು ಇನ್ನೂ ಐದು ದಿನಗಳವರೆಗೆ ವಿಸ್ತರಿಸಿ ಭಾನುವಾರ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಅಧಿಕೃತ ಪ್ರಕಟಣೆಯ ಪ್ರಕಾರ, ಜನಾಂಗೀಯ ಘರ್ಷಣೆಗಳು ಮತ್ತು ಹಿಂಸಾಚಾರದಿಂದ ತತ್ತರಿಸಿರುವ ಈಶಾನ್ಯ ರಾಜ್ಯದಲ್ಲಿ ಶಾಂತಿ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಯಾವುದೇ ತೊಂದರೆಯಾಗದಂತೆ ತಡೆಯಲು ಇಂಟರ್ನೆಟ್ ಸೇವೆಗಳ ಮೇಲಿನ ನಿಷೇಧವನ್ನು ಜೂನ್ 30 ರಂದು ಮಧ್ಯಾಹ್ನ 3 ರವರೆಗೆ ವಿಸ್ತರಿಸಲಾಗಿದೆ. ನಿರಂತರ ಅಶಾಂತಿಯಿಂದಾಗಿ ರಾಜ್ಯದಲ್ಲಿ ಮೊಬೈಲ್ ಇಂಟರ್ನೆಟ್ ಸೇವೆಗಳ ಮೇಲಿನ ನಿಷೇಧವನ್ನು ವಿಸ್ತರಿಸಲಾಗಿದೆ ಎಂದು ರಾಜ್ಯ ಸರ್ಕಾರದ ಪ್ರಕಟಣೆ ತಿಳಿಸಿದೆ. ಹಿಂಸಾಚಾರ, ದಾಳಿಗಳು ಮತ್ತು ಗುಂಡಿನ ಚಕಮಕಿ ಸೇರಿದಂತೆ ಮನೆ ಮತ್ತು ಆವರಣಗಳಿಗೆ ಬೆಂಕಿ ಹಚ್ಚುವ ಘಟನೆಗಳು ಇನ್ನೂ ವರದಿಯಾಗುತ್ತಿವೆ ಎಂದು ಮಣಿಪುರದ ಪೊಲೀಸ್ ಮಹಾನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕೆಲವು ಸಮಾಜ ವಿರೋಧಿ ಶಕ್ತಿಗಳು, ಸಾಮಾಜಿಕ ಮಾಧ್ಯಮವನ್ನು ದ್ವೇಷ ಭಾಷಣ ಮತ್ತು ದ್ವೇಷದ ವಿಡಿಯೋ ಸಂದೇಶಗಳ ಪ್ರಸಾರಕ್ಕಾಗಿ ವ್ಯಾಪಕವಾಗಿ ಬಳಸಬಹುದೆಂಬ ಆತಂಕವಿದೆ. ಇದು ಸಾರ್ವಜನಿಕರನ್ನು ಪ್ರಚೋದಿಸುತ್ತದೆ. ಹೀಗಾಗಿ ಇಂಟರ್ನೆಟ್ ನಿಷೇಧ ವಿಸ್ತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಶಿಸ್ತು ಪ್ರಾಧಿಕಾರಿ ಕರ್ತವ್ಯ ನಿರ್ವಹಿಸಲು ಸೂಚನೆ

ಮೈಸೂರು, ಜೂ.25(ಎಸ್‌ಪಿಎನ್)–ಸರ್ಕಾರದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರದ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಓ ಮತ್ತು ಉಪ ಕಾರ್ಯದರ್ಶಿಗಳು ಶಿಸ್ತು ಪ್ರಾಧಿಕಾರಿಯ ಕರ್ತವ್ಯವನ್ನು ನಿರ್ವಹಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ತಿಳಿಸಿದೆ. ಈ ಕುರಿತು ಇಲಾಖೆಯ ಉಪ ನಿರ್ದೇಶಕ ಹಾಗೂಅಧೀನ ಕಾರ್ಯದರ್ಶಿ (ಗ್ರಾಪಂ) ಬಿ.ನವೀನ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. ಹಲವಾರು ಜಿ.ಪಂ. ಗ್ರಾಪಂ ಕಾರ್ಯದರ್ಶಿ ಗ್ರೇಡ್–1 ಮತ್ತು ಗ್ರೇಡ್–2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ಜಿಪಂ ಸಿಇಓ ಅವರೇ ಶಿಸ್ತು ಪ್ರಾಧಿಕಾರಿವಾಗಿ ದಂಡನೆ ವಿಧಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಸರ್ಕಾರದ ಅಧಿಸೂಚನೆಯನ್ವಯ ಗ್ರಾಪಂ ಕಾರ್ಯದರ್ಶಿ ಗ್ರೇಡ್ –1 ಮತ್ತು ಗ್ರೇಡ್ –2 ಮತ್ತು ಎಸ್‌ಡಿಎ ಹಾಗೂ ಲೆಕ್ಕ ಸಹಾಯಕರುಗಳಿಗೆ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ (ಅಭಿವೃದ್ಧಿ) ಇವರನ್ನು ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾ ರಿಯನ್ನಾಗಿ ಪರಿಗಣಿಸಿದೆ. ಈ ನೌಕರರಿಗೆ ಇಲಾಖೆ ವಿಚಾರಣೆಯ ನಂತರ ಕಠಿಣ ದಂಡನೆ ವಿಧಿಸುವ ಅಧಿಕಾರವನ್ನು ಜಿ.ಪಂ.ಉಪ ಕಾರ್ಯದರ್ಶಿ (ಅಭಿವೃದ್ಧಿ) ಮತ್ತು ಜಿ.ಪಂ ಸಿಇಓ ಮೇಲ್ಮನವಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

5 ವರ್ಷವಾದರೂ ಕಾಮಗಾರಿ ಅಪೂರ್ಣ; ಈ ಉದ್ಯಾನವನ್ನು 'ದೇವರೆ' ಕಾಪಾಡಬೇಕು!

- ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯ
- ಅವ್ಯವಸ್ಥೆಯ ಆಗರ
- ಮದ್ಯವ್ಯಸನಿಗಳ ಅಡ್ಡಾ
- ಪಾರ್ಕ್ ಅಭಿವೃದ್ಧಿ ಕುಂಠಿತ



ಉದ್ಯಾನವನದಲ್ಲಿ ಹನಿ ನೀರಾವರಿ (ಸ್ಪ್ರಿಂಕ್ಲರ್) ಕಾಮಗಾರಿ ಆರಂಭಿಸಿದ್ದೇವೆ. ಏನೆಲ್ಲಾ ಸಮಸ್ಯೆಯಾಗಿದೆ ಅದನ್ನು ಸರಿಪಡಿಸುವ ಕೆಲಸಕ್ಕೆ ಮುಂದಾಗಿದ್ದೇವೆ. ಸಂಪೂರ್ಣ ಕಾಮಗಾರಿ ಮುಗಿದ ಬಳಿಕ ಲಾನ್ (ಹುಲ್ಲುಹಾಸು) ನಿರ್ಮಿಸಿ, ಪಾಲಿಕೆಯ ನಿರ್ವಹಣೆಗೆ ವಹಿಸುತ್ತೇವೆ. ಈಗಾಗಲೇ ಪಾಲಿಕೆ ಬಜೆಟ್‌ನಲ್ಲಿ ಕ್ಷೇತ್ರ ವ್ಯಾಪ್ತಿಯ ಎರಡು ಉದ್ಯಾನವನ್ನು ಅಭಿವೃದ್ಧಿಪಡಿಸುವ ಬಗ್ಗೆ ಸೂಚನೆ ದೊರೆತಿದ್ದು, ಈ ಉದ್ಯಾನವನ್ನು ಪರಿಗಣಿಸಬೇಕಿದೆ.
–ವೇದಾವತಿ, ನಗರಪಾಲಿಕೆ ಸದಸ್ಯೆ, ವಾರ್ಡ್ ನಂ. 21.

■ ಚೇತನ್ ನರಸಿಂಹ.ವಿ

ಮೈಸೂರು, ಜೂ.25–ಎಲ್ಲಿ ನೋಡಿದರಲ್ಲಿ ಕಸದ ರಾಶಿ, ಮದ್ಯದ ಬಾಟಲಿಗಳು, ಮುರಿದು ಬಿದ್ದ ರೆಂಬೆ–ಕೊಂಬೆಗಳು, ಭದ್ರತೆ ಇಲ್ಲದ ಗೇಟ್, ದುರ್ವಾಸನೆ ಬೀರುವ ಶೌಚಾಲಯ, ಸ್ವಚ್ಛತೆ ಕಾಣದ ಉಗ್ರಾಣ, ದೀಪಗಳ ಕೊರತೆ, ಅನೈತಿಕ ಚಟುವಟಿಕೆ ತಾಣವಾಗಿ ಮಾರ್ಪಟ್ಟಿರುವ ತಾಣ.

ಈ ಎಲ್ಲ ದೃಶ್ಯಗಳು ನಿಮಗೆ ಒಂದೇ ಕಡೆ ಸಿಗುತ್ತದೆ. ಚಾಮರಾಜ ವಿಧಾನಸಭಾ ಕ್ಷೇತ್ರದ, ನಗರಪಾಲಿಕೆ ವಾರ್ಡ್ ನಂ.21ರ ವ್ಯಾಪ್ತಿಯ ಸರಸ್ವತಿಪುರಂ 5ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ನಡುವೆ ನಿರ್ಮಿಸಲಾಗಿರುವ 'ಶ್ರೀರಾಮ' ಉದ್ಯಾನವನದಲ್ಲಿ.

ನಗರ ಪಾಲಿಕೆ ವ್ಯಾಪ್ತಿಗೆ ಬರುವ ಈ ಉದ್ಯಾನವನ ಅಭಿವೃದ್ಧಿಗೆ ಹಿಂದಿನ ಶಾಸಕರು ಎನ್‌ಎಫ್‌ಸಿ ಅನುದಾನದಡಿಯಲ್ಲಿ 50 ಲಕ್ಷ ರೂಪಾಯಿ ಮಂಜೂರು ಮಾಡಿಸಿದ್ದರು. ಆದರೆ 5 ವರ್ಷ ಕಳೆದರೂ ಇಲ್ಲಿಯವರೆಗೆ ಅಭಿವೃದ್ಧಿ ಕೆಲಸಗಳಾಗದೇ, ಸರಿಯಾದ ನಿರ್ವಹಣೆ ಇಲ್ಲದೇ, ಕಸ ವಿಲೇವಾರಿಯೂ ಆಗದೇ ವಾಯುವಿಹಾರಗಳಿಗೆ ಸಾಕಷ್ಟು ಸಮಸ್ಯೆಯಾಗಿದೆ. ಪಾರ್ಕ್‌ನ ಅಂದಕ್ಕೆ ಮಸಿ ಬಳಿಯುವ ಕೆಲಸ ನಡೆಯುತ್ತಿದೆ.

ಇಲ್ಲಿ ಓದುಗರಿಗಾಗಿ ಗ್ರಂಥಾಲಯ ನಿರ್ಮಿಸಲಾಗಿದೆ. ಅವರಿಗಾಗಿ ನಿರ್ಮಿಸಿರುವ ಶೌಚಾಲಯ ಬಳಸಲು ಯೋಗ್ಯವಾಗಿಲ್ಲ. ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿದ್ದರೂ ಕೂಡ ನಿರ್ವಹಣೆ ಇಲ್ಲದೇ ಗಬ್ಬು ನಾರುತ್ತಿದೆ. ಶೌಚಾಲಯದತ್ತ ಸುಳಿಯಲು ಮನಸ್ಸಾಗುವುದಿಲ್ಲ. ಇನ್ನು ಪಕ್ಕದಲ್ಲೇ ಪ್ರತಿಷ್ಠಿತ ಕಾಲೇಜು ಕಾರ್ಯನಿರ್ವಹಿಸುತ್ತಿರುವುದರಿಂದ ಅವರೂ ಗ್ರಂಥಾಲಯದ ಉಪಯೋಗ ಪಡೆದುಕೊಳ್ಳುತ್ತಾರೆ. ಆದರೆ ಕುಡಿಯುವ ನೀರಿನ ಸಮಸ್ಯೆ ಇದೆ. ಜೊತೆಗೆ ಕಸದ ರಾಶಿ ಪಕ್ಕದಲ್ಲೇ ಬಿದ್ದಿದ್ದು ಅಸಹ್ಯಕರ ವಾತಾವರಣ ಉಂಟು ಮಾಡುತ್ತಿದೆ ಎಂದು ಓದುಗರೊಬ್ಬರು ತಿಳಿಸಿದರು. ಉದ್ಯಾನವನವು ಅನೈತಿಕ ಚಟುವಟಿಕೆಯ ತಾಣವಾಗಿದ್ದು, ಅಲ್ಲಲ್ಲಿ ಒಡೆದ ಮದ್ಯದ ಬಾಟಲಿಗಳು, ಕಸ ಕಡ್ಡಿಗಳು ಪಾರ್ಕಿನ ಅಂದಕ್ಕೆ ಚ್ಯುತಿ ತಂದಿವೆ.








ಒಂದು ಪಾರ್ಕ್ ಅಭಿವೃದ್ಧಿ ಪಡಿಸಲು ಹಲವು ವರ್ಷ ತೆಗೆದುಕೊಂಡಿದ್ದಾರೆ. ಉದ್ಯಾನವನ ಕಾಮಗಾರಿಗೆ ಕೈ ಹಾಕಿ, ಸುಮಾರು 5 ವರ್ಷ ಆಗುತ್ತಾ ಬರುತ್ತಿದೆ. ಆದರೆ ಇದುವರೆಗೂ ಕಾಮಗಾರಿ ಪೂರ್ಣವಾಗಿಲ್ಲ. ಕೇಳಿದರೆ ಇನ್ನೂ 1 ತಿಂಗಳೊಳಗೆ ಕೆಲಸ ಪೂರ್ತಿಯಾಗುತ್ತೆ ಎಂದು ಹೇಳುತ್ತಾರೆ. ಈಗಾಗಲೇ ಪಾಲಿಕೆ ಆಯುಕ್ತರಿಗೆ, ವಲಯ ಅಧಿಕಾರಿಗೆ ದೂರು ನೀಡಿದ್ದೇವೆ. ಇದೇ ರೀತಿ ನಿರ್ಲಕ್ಷ್ಯ ವಹಿಸಿದರೆ, ಮುಂದಿನ ದಿನಗಳಲ್ಲಿ ಹೋರಾಟ ನಡೆಸಲಾಗುವುದು.
–ಅನಂತ್‌ರಾಜು ಸೂರ್ಯ, ಎಎಪಿ ಮುಖಂಡ



ಗ್ರಂಥಾಲಯದಲ್ಲಿ ಓದುವ ಸಲುವಾಗಿ ಅನೇಕ ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳು ಬರುತ್ತಾರೆ. ಅವರಿಗೆ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ. ಶೌಚಾಲಯವಿದ್ದರೂ ಬಳಸಲು ಯೋಗ್ಯವಿಲ್ಲ. ತಕ್ಷಣ ಈ ಸಮಸ್ಯೆಗಳನ್ನು ಬಗೆಹರಿಸಬೇಕು. ಉದ್ಯಾನವನ ನಿರ್ವಹಣೆಗೆ ಖಾಯಂ ಕಾವಲುಗಾರನನ್ನು ನೇಮಿಸಬೇಕು.
–ವಿಕಾಸ್ ಬಿ.ಸಿ. ಸ್ಪರ್ಧಾತ್ಮಕ ಪರೀಕ್ಷಾರ್ಥಿ





ಇಲ್ಲಿನ ಬಹುದೊಡ್ಡ ಸಮಸ್ಯೆ ಎಂದರೆ ಅನೈರ್ಮಲ್ಯ. ಬೆಳಗ್ಗೆ ಹಾಗೂ ಸಂಜೆ, ನಾವು ವಾಯುವಿಹಾರಕ್ಕೆಂದು ಬರುತ್ತೇವೆ. ಶೌಚಾಲಯ ವ್ಯವಸ್ಥೆ ಇಲ್ಲ. ದಿನೇದಿನೆ ಈ ಅವ್ಯವಸ್ಥೆ ಕಂಡು ತುಂಬಾ ಬೇಸರವಾಗುತ್ತದೆ. ಇಷ್ಟೊಂದು ಹಣ ವ್ಯಯಿಸಿ ವ್ಯವಸ್ಥಿತ ನಿರ್ವಹಣೆ ಇಲ್ಲದೇ ಇದ್ದರೇ ಹೇಗೆ? ಹೆಣ್ಣು ಮಕ್ಕಳು ಶೌಚಾಲಯದತ್ತ ಸುಳಿಯಲೂ ಆಗಲ್ಲ. ಕನಿಷ್ಠ ಪಕ್ಷ ಒಬ್ಬರನ್ನು ನೇಮಿಸಿ ಹಣ ಕೊಟ್ಟಾದರೂ ಶೌಚಾಲಯ ಉಪಯೋಗಿಸುವಂತೆ ಮಾಡಬೇಕು. ಆದಷ್ಟೂ ಬೇಗ ಈ ಉದ್ಯಾನದ ಕಾಮಗಾರಿ ಪೂರ್ಣಗೊಳಿಸಿ, ಪಾಲಿಕೆ ನಿರ್ವಹಣೆಗೆ ವಹಿಸಬೇಕು.
–ಜಾನ್ಸಿ, ಸ್ಥಳೀಯ ನಿವಾಸಿ, ಸರಸ್ವತಿಪುರಂ

ಉದ್ಯಾನದ ಅಭಿವೃದ್ಧಿ ಹಾಗೂ ವೃತ್ತ, ರಸ್ತೆ ನಿರ್ಮಾಣಕ್ಕಾಗಿ ಈ ಹಿಂದೆ 1 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಈಗಾಗಲೇ 50 ಲಕ್ಷ ವೆಚ್ಚದಲ್ಲಿ, ಜೆಎಸ್‌ಎಸ್ ವಿದ್ಯಾಸಂಸ್ಥೆಯಿಂದ ಕುಕ್ಕರಹಳ್ಳಿ ರಸ್ತೆವರೆಗೂ ಸರ್ಕಲ್ ಹಾಗೂ ರಸ್ತೆ ಕಾಮಗಾರಿಗೆ ಹಣ ಖರ್ಚಾಗಿದೆ. ಉಳಿದ 50 ಲಕ್ಷ ರೂ.ಗಳಲ್ಲಿ ಶ್ರೀರಾಮ ಪಾರ್ಕ್ ಅಭಿವೃದ್ಧಿ, ಇಂಟರ್‌ಲಾಕ್ ವ್ಯವಸ್ಥೆ, ಮಂಟಪ ನಿರ್ಮಾಣ ಕಾಮಗಾರಿ ಮುಂದುವರಿದಿದೆ. ಇನ್ನು ಸ್ಪ್ರಿಂಕ್ಲರ್ (ಹನಿ ನೀರಾವರಿ ವ್ಯವಸ್ಥೆ) ಕಾಮಗಾರಿ ಬಳಿಕ ಲಾನ್ (ಹುಲ್ಲು ಹಾಸು) ಬೆಳೆಸಲಾಗುವುದು. ಒಂದು ತಿಂಗಳಲ್ಲಿ ಶ್ರೀರಾಮ ಉದ್ಯಾನವನದ ಸಂಪೂರ್ಣ ಕಾಮಗಾರಿ ಮುಗಿಯಲಿದೆ.
–ಸಿದ್ದರಾಮೇಗೌಡ, ಪಾಲಿಕೆ ವಲಯ 4, ಅಭಿಯಂತರರು

ಬೃಹತ್ ಒಳಾಂಗಣ ಭದ್ರತಾ ಸೌಲಭ್ಯ ಅಳವಡಿಸಿದ ಪ್ರದೇಶವಿದ್ದರೂ, ಜನರಿಗೆ ಉದ್ಯಾನ ಬಳಸಲು ಸಾಧ್ಯವಾಗದ ಪರಿಸ್ಥಿತಿ ಇದೆ ಎಂದು ಹಿರಿಯ ನಾಗರಿಕರೊಬ್ಬರು ಆಕ್ರೋಶ ವ್ಯಕ್ತಪಡಿಸಿದರು.

ಬೇರೆಡೆಯಂತೆ ಇಲ್ಲೂ ಮಕ್ಕಳಿಗೆ ಆಟವಾಡಲು ಹಲವು ಆಟಿಕೆಗಳನ್ನು ಅಳವಡಿಸಲಾಗಿದೆ. ಆದರೆ ಕೆಲವು ತುಕ್ಕು ಹಿಡಿದು ಹಾಳಾಗಿವೆ ಜಾರು ಬಂಡೆಯೊಂದು ಸಂಪೂರ್ಣ ಹಾಳಾಗಿ ಮರಕ್ಕೆ ವಾಲಿಸಿ ಶೋಗಾಗಿ ಇಡಲಾಗಿದೆ. ಇನ್ನು ಈ ದುರವಸ್ಥೆ ಅರಿತ ಪೋಷಕರು ಮಕ್ಕಳನ್ನೂ ಆಟವಾಡಲು ಕರೆತರುತ್ತಿಲ್ಲ. ಮಕ್ಕಳು ಆಡುವ ಜಾಗದಲ್ಲಿ ದೊಡ್ಡವರೇ ಕುಳಿತು ಹಾಳು ಮಾಡಿದ್ದಾರೆ ಎಂದು ಪೋಷಕರೊಬ್ಬರು ದೂರಿದರು. ಉದ್ಯಾನದ ಪಕ್ಕವೇ ಕಾಲೇಜು ಹಾಗೂ ವಸತಿ ಪ್ರದೇಶವಿದೆ. ಉದ್ಯಾನ ದುರಸ್ತಿಗೊಂಡು ಬಳಸಲು ಯೋಗ್ಯವಾದರೆ ಜನರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಇಲ್ಲಿನ ಅವ್ಯವಸ್ಥೆಯ ಬಗ್ಗೆ ಈಗಾಗಲೇ ಪಾಲಿಕೆಯ ಆಯುಕ್ತರಿಗೆ ಹಲವಾರು ಬಾರಿ ದೂರು ಸಲ್ಲಿಸಿದ್ದೇವೆ. ಆದರೂ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ. ಈಗಲಾದರೂ ಪಾಲಿಕೆ ಎಚ್ಚೆತ್ತು ಉದ್ಯಾನದ ಅಭಿವೃದ್ಧಿ ಕಾರ್ಯಕ್ಕೆ ಮತ್ತಷ್ಟು ವೇಗ ಕೊಡಬೇಕಿದೆ ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಪಾಲಿಕೆ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಸ್ಥಳೀಯರು ಎಚ್ಚರಿಕೆ ನೀಡಿದ್ದಾರೆ.

ಎನ್‌ಆರ್ ಕ್ಷೇತ್ರದಲ್ಲಿ ಬಿಜೆಪಿ ಮಹಾ ಸಂಪರ್ಕ ಅಭಿಯಾನಕ್ಕೆ ಚಾಲನೆ



ಮೈಸೂರು, ಜೂ.25– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ 9 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಪಕ್ಷದ ರಾಜ್ಯ ಘಟಕದ ವತಿಯಿಂದ ಮಹಾ ಸಂಪರ್ಕ ಅಭಿಯಾನ ಹಮ್ಮಿಕೊಂಡಿದ್ದು, ಮೈಸೂರಿನ ನರಸಿಂಹರಾಜ(ಎನ್‌ಆರ್) ಕ್ಷೇತ್ರದಲ್ಲಿ ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿಯಾನಕ್ಕೆ ಚಾಲನೆ ನೀಡಿದರು.

ಮೋದಿ ಸರ್ಕಾರದ ಸಾಧನೆಯ ಕೈಪಿಡಿಯನ್ನು ಕ್ಯಾತಮಾರನಹಳ್ಳಿಯಲ್ಲಿ ಮನೆ ಮನೆಗೆ ಹಂಚುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರ 9 ವರ್ಷದ ಆಡಳಿತ ಸ್ಮರಣೀಯ. ದೇಶದ ಪ್ರತಿಯೊಬ್ಬ ಪ್ರಜೆಯ ಅಭಿವೃದ್ಧಿ ದೃಷ್ಟಿಯಿಂದ ಅವರು ಕಾರ್ಯಕ್ರಮ ರೂಪಿಸಿದ್ದಾರೆ. ದೇಶದ ಅಭಿವೃದ್ಧಿಗಾಗಿ ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದರು.

ಆರ್ಥಿಕ ಸುಧಾರಣೆ, ತಂತ್ರಜ್ಞಾನ, ಯುವ ಸಬಲೀಕರಣ, ರೈತರ ಕಲ್ಯಾಣ, ಆರೋಗ್ಯ ಕ್ಷೇತ್ರ, ರಾಷ್ಟ್ರೀಯ ಸುರಕ್ಷತೆ ಮತ್ತು ವಿದೇಶಿ ನೀತಿ, ಹೀಗೆ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಯೊಂದಿಗೆ ದೇಶವನ್ನು ಮುನ್ನಡೆಸುತ್ತಿದ್ದಾರೆ. ಮೋದಿಯವರನ್ನು ಇಡೀ ವಿಶ್ವವೇ ಪ್ರಶಂಸಿಸುತ್ತಿದೆ. ವಿರೋಧ ಪಕ್ಷದವರು ರಾಜಕೀಯವಾಗಿ ಏನೇ ಟೀಕೆ ಮಾಡಿದರೂ ಮೋದಿಯವರ ಆಡಳಿತವನ್ನು ಜನ ಮೆಚ್ಚಿದ್ದಾರೆ. ದೇಶದ ಹಿತದೃಷ್ಟಿಯಿಂದ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಮತ್ತೆ ಬೆಂಬಲಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಭಾನುಪ್ರಕಾಶ್, ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಮುಖಂಡರಾದ ಡಾ. ಅನಿಲ್ ಥಾಮಸ್, ವೇಲು, ನಾರಾಯಣಪ್ಪ, ನವೀನ್ ಶೆಟ್ಟಿ, ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ, ತಮಿಳು ಭಾಷೆಗಳ ಬಾಂಧವ್ಯ ವೃದ್ಧಿಸಬೇಕು

ಗಡಿನಾಡು ಸಾಂಸ್ಕೃತಿಕ ಉತ್ಸವದಲ್ಲಿ ರಂಗಕರ್ಮಿ ಕೆ.ವೆಂಕಟರಾಜು ಅಭಿಪ್ರಾಯ



ಮೈಸೂರು, ಜೂ.25– ಕನ್ನಡ ಮತ್ತು ತಮಿಳು ಭಾಷೆಗಳ ಬಾಂಧವ್ಯವನ್ನು ವೃದ್ಧಿಸುವ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು ಎಂದು ರಂಗಕರ್ಮಿ ಕೆ. ವೆಂಕಟರಾಜು ತಿಳಿಸಿದರು.

ತಾಳವಾಡಿಯಲ್ಲಿ ಗಡಿನಾಡು ಸಾಂಸ್ಕೃತಿಕ ಉತ್ಸವದಲ್ಲಿ ಆಯೋಜಿಸಿದ್ದ ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜೆಎಸ್‌ಎಸ್ ಸಂಸ್ಥೆ ಮತ್ತು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇದಕ್ಕೆ ಮುನ್ನುಡಿ ಬರೆದಿವೆ. ಎರಡೂ ಸಂಸ್ಕೃತಿಗಳು ಬೆಳೆಯುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು. ಗಡಿಭಾಗಗಳಲ್ಲಿ ಎರಡೂ ಭಾಷೆಗಳನ್ನೂ ವೃದ್ಧಿಸುವ ಕೆಲಸವಾಗಬೇಕು. ಕವಿರಾಜಮಾರ್ಗಕಾರ ಪ್ರಸ್ತಾಪಿಸಿರುವ ಕಾವೇರಿಯಿಂದ ಗೋದಾವರಿವರೆಗಿನ ಕನ್ನಡ ನಾಡು–ನುಡಿಯ ವಿಶೇಷತೆಯನ್ನು ತಿಳಿಸಿದರು. ಕರ್ನಾಟಕದ ಮಣ್ಣಿನಲ್ಲಿ ಅಪೂರ್ವವಾದ ಸಹನಾ ಶಕ್ತಿಯಿದೆ ಎಂದು ಹೇಳಿದರು.

ತಾಳವಾಡಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಬಸವರಾಜು ಅವರು 'ಕನ್ನಡ ಸಾಹಿತ್ಯ ನೆಲ–ಜಲ ಸಂಸ್ಕೃತಿಗೆ ತಾಳವಾಡಿಗರ ಕೊಡುಗೆ' ವಿಷಯ ಕುರಿತು ಮಾತನಾಡುತ್ತಾ ತಾಳವಾಡಿ ಅರಣ್ಯ ಹಾಗೂ ಬೆಟ್ಟಗುಡ್ಡಗಳಿಂದ ಕೂಡಿದಂತಹ ಪ್ರದೇಶ. ಈ ಪ್ರದೇಶದ ಮಾತೃಭಾಷೆ ಕನ್ನಡ. ತಾಳವಾಡಿಯಲ್ಲಿ ಕನ್ನಡ ಭಾಷೆ ಬೆಳೆಯಲು ಅನೇಕ ಮಹನೀಯರು ಸಹಕರಿಸಿದ್ದಾರೆ. ಇವರಲ್ಲಿ ಡಾ. ರಾಜ್‌ಕುಮಾರ್, ಅಬ್ದುಲ್ ನಜೀರ್ ಸಾಬ್, ಅರಳವಾಡಿ ಕೃಷ್ಣಮೂರ್ತಿ, ಸದಾಶಿವಮೂರ್ತಿ ಗುಮಟಾಪುರ, ಗಟ್ಟವಾಡಿ ರಾಮರಾವ್ ಸೇನಾನಿಯವರುಗಳು ಪ್ರಮುಖರು. ತಾಳವಾಡಿಯ ಸಾಕಷ್ಟು ಪ್ರತಿಭಾವಂತರು ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಈಗ ಕನ್ನಡ ಸಂಘದ ಅಧ್ಯಕ್ಷ ಎಸ್. ಚನ್ನಂಜಪ್ಪನವರು ಇಲ್ಲಿನ ಜನರ ಏಳ್ಗೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ ಎಂದು ತಿಳಿಸಿದರು.

ತಾಳವಾಡಿ ಪಂಚಾಯತ್ ಯೂನಿಯನ್ ಮಾಧ್ಯಮಿಕ ಶಾಲೆಯ ಶಿಕ್ಷಕ ಗುರುಮಲ್ಲಪ್ಪನವರು 'ತಾಳವಾಡಿ ಜನರ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳು' ವಿಷಯ ಕುರಿತು ಉಪನ್ಯಾಸ ನೀಡಿದರು. ಎಂ. ಶಿವಕುಮಾರಸ್ವಾಮಿ ಸ್ವಾಗತಿಸಿದರು. ಕೆಂಪರಾಜು ಕಾರ್ಯಕ್ರಮ ನಿರೂಪಿಸಿದರು.

ತಿ.ನರಸೀಪುರದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಸ್ಥಾಪನೆ

ತಲಕಾಡಿನ ಕೃತಜ್ಞತಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಘೋಷಣೆ





ತಿ.ನರಸೀಪುರ ಜೂ.25– ಗ್ರಾಮೀಣ ಪ್ರದೇಶಗಳ ಸಾರಿಗೆ ಸಮಸ್ಯೆ ಕೊರತೆಯನ್ನು ನಿವಾರಿಸಲು, ಕಟ್ಟ ಕಡೆಯ ಹಳ್ಳಿಗೂ ಸರ್ಕಾರಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು, ನರಸೀಪುರದ ಜನರು ಹಲವು ವರ್ಷಗಳಿಂದ ನಿರೀಕ್ಷಿಸುತ್ತಿರುವ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಆರಂಭಿಸಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಘೋಷಿಸಿದ್ದಾರೆ.

ತಾಲೂಕಿನ ತಲಕಾಡು ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹೋಬಳಿ ಮತದಾರರಿಗೆ ಕೃತಜ್ಞತಾ ಸಮಾರಂಭವನ್ನು ಉದ್ಘಾಟಿಸಿ, ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಉನ್ನತ ಮಟ್ಟದ ಅಧಿಕಾರಿಗಳ ಸಭೆ ನಡೆಸಿ ಸೂಚಿಸಿದ್ದೇನೆ. ಕೆಎಸ್‌ಆರ್‌ಟಿಸಿ ಬಸ್ ಡಿಪೋ ಆರಂಭಕ್ಕೆ ಆಡಳಿತಾತ್ಮಕ ಕ್ರಮವನ್ನು ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಾಕೀತು ಮಾಡಿದ್ದೇನೆ ಎಂದು ತಿಳಿಸಿದರು.

ಅಭಿವೃದ್ಧಿ ಮತ್ತು ಜನರ ಕೆಲಸ ಮಾಡಲು ಗುಂಡಿಗೆ ಬೇಕು. ಅಷ್ಟೊಂದು ಶಕ್ತಿಯನ್ನು ಕ್ಷೇತ್ರದ ಜನರು ಸತತವಾಗಿ ಚುನಾಯಿಸಿ ನನಗೆ ನೀಡಿದ್ದೀರಿ. ಶಾಸಕ, ಸಚಿವ ಆಗುತ್ತಿದ್ದಂತೆ ಸೂಚಿಸಿದ್ದರೂ ನೀರಾವರಿ ನಿಗಮದ ಎಂಡಿ ಮತ್ತು ಮುಖ್ಯ ಇಂಜಿನಿಯರ್ ಮಾಧವ ಮಂತ್ರಿ ಅಣೆಕಟ್ಟೆಗೆ ಬೇಟಿ ಕೊಟ್ಟು ಕಾಮಗಾರಿಯನ್ನು ಆರಂಭಿಸಿದ್ದಾರೆ. ಅಣೆಕಟ್ಟೆಯ ಆಸು ಪಾಸಿನಲ್ಲಿ ಉದ್ಯಾನವನ, ನಾಲೆಯ ರಸ್ತೆಯನ್ನು ಡಾಂಬರೀಕರಣ ಮಾಡುವಂತೆ ಸಲಹೆ ನೀಡಿದ್ದೇನೆ. ರಾಮಸ್ವಾಮಿ ನಾಲೆಯ ಕೊನೆಯ ಅಚ್ಚುಕಟ್ಟು ಪ್ರದೇಶಕ್ಕೆ ಎರಡು ಬೆಳೆಗೆ ನೀರಾವರಿ ಕಲ್ಪಿಸಲು ಮುಡುಕುತೊರೆ ಏತ ನೀರಾವರಿ ಯೋಜನೆಗೆ 80 ಕೋಟಿ ರೂಗಳ ಅನುದಾನವನ್ನು ನೀಡಲಾಗಿತ್ತು ಎಂದರು.

ಗಂಗರಸರು ಆಳಿದ ತಲಕಾಡು ಐತಿಹಾಸಿಕ ಸ್ಥಳವಾಗಿದ್ದು, ಪ್ರಮುಖ ಪ್ರವಾಸೋದ್ಯಮ ಕೇಂದ್ರವನ್ನಾಗಿಯೂ ಅಭಿವೃದ್ಧಿ ಪಡಿಸಲು, ಸಾರಿಗೆ ಸಂಪರ್ಕವನ್ನು ಸುಧಾರಣೆ ತರಲು ಕಾವೇರಿಪುರ ಬಳಿ ಸೇತುವೆ ನಿರ್ಮಾಣ ಮಾಡಲಾಯಿತು. ಪೂರ್ಣಗೊಳ್ಳದಿರುವ ಮಾಲಂಗಿ ಸೇತುವೆಯ ತಾಂತ್ರಿಕ ಸಮಸ್ಯೆಯನ್ನು ಸರಿಪಡಿಸಿ, ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದರು.

ವಸತಿ ಯೋಜನೆ ಸಮಿತಿಯ ಮಾಜಿ ಅಧ್ಯಕ್ಷ ಕಾಂಗ್ರೆಸ್ ಯುವ ಮುಖಂಡ ಸುನೀಲ್ ಬೋಸ್ ಮಾತನಾಡಿ, ತಲಕಾಡಿನಲ್ಲಿ ಜೊತೆಯಲ್ಲಿದ್ದುಕೊಂಡು ತಿಂದುಂಡು ತೇಗಿದವ ಚುನಾವಣೆಯ ವೇಳೆ ಅಪ್ಪ ಮಗನಿಂದ ಅನ್ಯಾಯವಾಗಿದೆ. ಇದೊಂದು ಬಾರಿ ಸೋಲಿಸಿ ಬಿಟ್ಟರೆ ಮುಂದಿನ ಬಾರಿ ಹೊಸ ಅಭ್ಯರ್ಥಿ ಕರೆ ತರುತ್ತೇನೆ ಎಂದು ಅಪಪ್ರಚಾರ ಮಾಡಿದರೂ ಹೋಬಳಿಯ ಜನ ನಮ್ಮ ಕೈ ಬಿಡದೆ ಮಹದೇವಪ್ಪ ಅವರನ್ನು ಆಯ್ಕೆ ಮಾಡಿ ಅಧಿಕಾರ ನೀಡಿದ್ದಕ್ಕೆ ಅಭಾರಿಯಾಗಿದ್ದೀವೆ ಎಂದರು.

ತಲಕಾಡು ಗ್ರಾಮಕ್ಕೆ ಆಗಮಿಸಿದ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಪೂಜೆ ಸಲ್ಲಿಸಿದ ಬಳಿಕ ಶ್ರೀ ಬಂಡರಸಮ್ಮ ದೇವಾಲಯದಿಂದ ತೆರೆದ ವಾಹನದಲ್ಲಿ ಕೃತಜ್ಞತಾ ಸಮಾರಂಭ ನಡೆಯುವ ವೇದಿಕೆಗೆ ಮೆರವಣಿಗೆಯಲ್ಲಿ ಕರೆ ತರಲಾಯಿತು. ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಹಾಗೂ ಮುಖಂಡ ಕಲಿಯೂರು ವೆಂಕಟೇಶ್ ಮಾತನಾಡಿದರು. ತಾಪಂ ಮಾಜಿ ಸದಸ್ಯ ಕುಕ್ಕೂರು ಗಣೇಶ್ ಸೇರಿದಂತೆ ವಿವಿಧ ಗ್ರಾಮ ಪಂಚಾಯಿತಿಗಳ ವತಿಯಿಂದ ಸಚಿವರನ್ನು ಸನ್ಮಾನಿಸಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಮೈಮುಲ್ ನಿರ್ದೇಶಕ ಚೆಲುವರಾಜ್. ಜಿ.ಪಂ ಮಾಜಿ ಸದಸ್ಯರಾದ ಕೆ.ಜಿ. ಚಂದ್ರಶೇಖರ್, ಹೊನ್ನನಾಯಕ, ಮಾಜಿ ಪ್ರಧಾನ ಹೆಚ್.ವಿ.ಶೇಷಾದ್ರಿ, ಸೋಸಲೆ ಪಿಎಸಿಸಿಎಸ್ ಅಧ್ಯಕ್ಷ ಪರಶಿವಮೂರ್ತಿ. ಡೈರಿ ಕಾರ್ಯದರ್ಶಿ ನಿಂಗಯ್ಯ, ದೊಡ್ಡನಹುಂಡಿ ನಂಜುಂಡಸ್ವಾಮಿ, ಪುರಸಭೆ ಮಾಜಿ ಅಧ್ಯಕ್ಷ ಡಿ.ಪದ್ಮನಾಭ, ಸಹಾಯಕ ಪ್ರಾಧ್ಯಾಪಕ ಡಾ.ಬಿ.ಕೆ.ಜ್ಞಾನಪ್ರಕಾಶ್, ಡಿಸಿಸಿ ಕಾರ್ಯದರ್ಶಿ ಎಸ್.ಮಹದೇವಶೆಟ್ಟಿ ತಾಪಂ ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನಸ್ವಾಮಿ, ಮಾಜಿ ಅಧ್ಯಕ್ಷ ವಾಟಾಳ್ ನಾಗೇಶ್, ಉಪಾಧ್ಯಕ್ಷ ಪ್ರಸನ್ನ, ಗ್ರಾಪಂ ಅಧ್ಯಕ್ಷರಾದ ಜಿ.ಕೆಂಪಯ್ಯ, ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ಸುಂದರ ನಾಯಕ, ಮಾಜಿ ಅಧ್ಯಕ್ಷರಾದ ಮಲ್ಲಣ್ಣಿ, ಅಕ್ಕೂರು ಗುರುಮೂರ್ತಿ, ಅಕ್ಕಿ ರಮೇಶ್, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎನ್.ರವಿಕುಮಾರ್, ಲಕ್ಷ್ಮೀನಾರಾಯಣ, ಎಂ.ಕೆ.ಗಣೇಶ್ ಮೂರ್ತಿ, ಪಿಕಾರ್ಡ್ ಬ್ಯಾಂಕ್ ಉಪಾಧ್ಯಕ್ಷ ಬಿ.ಎಂ.ಲಿಂಗರಾಜು, ಮಹಿಳಾ ಅಧ್ಯಕ್ಷೆ ವೀಣಾ ಶಿವಕುಮಾರ್, ಪುರಸಭೆ ಮಾಜಿ ಸದಸ್ಯ ಎಸ್.ಸಿದ್ದೇಗೌಡ, ತಾ.ಪಂ ಮಾಜಿ ಸದಸ್ಯರಾದ ನರಸಿಂಹಮಾದ ನಾಯಕ, ರಾಮಲಿಂಗಯ್ಯ, ಮಲ್ಲಾಜಮ್ಮ, ಕೋಕಿಲ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ಸುನಿಲ್ ಬೋಸ್ ಯುವ ಬ್ರಿಗೇಡ್‌ನ ಪ್ರಭು, ಭರತ್, ಆನಂದ್, ಮುಖಂಡರಾದ ವಿಜಯ ಕುಮಾರ್, ಮರಡಿಪುರ ಗೋಪಾಲ್, ಕಾಳಿಹುಂಡಿ ಮಹೇಂದ್ರ, ಹೆಮ್ಮಿಗೆ ಸೋಮಣ್ಣ, ಎಂ.ಬಿ.ಚಂದ್ರಶೇಖರ್, ಕುಕ್ಕೂರು ಶಂಭುಲಿಂಗ, ಶಂಕರ, ಎಸ್.ಶಿವಮೂರ್ತಿ, ಮಲ್ಲೇಶ, ಕಲಿಯೂರು ಶಿವಣ್ಣ, ಸಿದ್ದರಾಜು, ಕಾವೇರಿಪುರ ಮಲ್ಲು,ಮಲ್ಲಣ್ಣಿ, ಲಕ್ಷ್ಮಣ, ವಸಂತ, ಶೂರ್ಫಾನ್, ಆಟೋ ರಘು, ಹೆಚ್. ರಾಜು, ಪಾರ್ವತಮ್ಮ, ಕೆ.ಎನ್.ಕುಮಾರ್ ಹಾಗೂ ಇನ್ನಿತರರು ಹಾಜರಿದ್ದರು.

ಹುಣಸೂರು ಜೋಡಿ ಕೊಲೆ ಪ್ರಕರಣ

ಬಾಲಾಪರಾಧಿ ಸೇರಿ ಇಬ್ಬರ ಬಂಧನ

ಬಾಲಾಪರಾಧಿ ರಿಮ್ಯಾಂಡ್ ಹೋಂಗೆ, ಇನ್ನೊಬ್ಬ ಜೈಲಿಗೆ



ಹುಣಸೂರು, ಜೂ.25–ಹುಣಸೂರು ಪಟ್ಟಣದ ಜೋಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಲಾಪರಾಧಿ ಸೇರಿದಂತೆ ಇಬ್ಬರನ್ನು ಹುಣಸೂರು ಟೌನ್ ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಬಜಾರ್ ರಸ್ತೆಯ ಮುಸ್ಲಿಂ ಬ್ಲಾಕ್ ನಿವಾಸಿ ತೌಸಿಬ್ ಅಹಮದ್ ಖಾನ್ ಅವರ ಪುತ್ರ ತೌಸಿಬ್(30) ಮತ್ತು 16 ವರ್ಷದ ಬಾಲಕನನ್ನು ಬಂಧಿಸಿದ್ದು, ತೌಸಿಬ್‌ನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ. ಮತ್ತೋರ್ವ ಆರೋಪಿಯಾದ ಬಾಲಕನನ್ನು ರಿಮ್ಯಾಂಡ್ ಹೋಂಗೆ ಕಳುಹಿಸಲಾಗಿದೆ. ಆರೋಪಿ ತೌಸಿಬ್ ಮತ್ತು ಬಾಲಕ ಗಾಂಜಾ ವ್ಯಸನಿಗಳಾಗಿದ್ದು, ತಮ್ಮ ದುಶ್ಚಟಗಳಿಗೆ ಹಣ ಹೊಂದಿಸುವ ಸಲುವಾಗಿ ಈ ಕೃತ್ಯದಲ್ಲಿ ಭಾಗಿಯಾಗಿದ್ದರು ಎನ್ನಲಾಗಿದೆ. ಈ ಪ್ರಕರಣದ ಪ್ರಮುಖ ಆರೋಪಿ ಪಟ್ಟಣದ ಸರಸ್ವತಿಪುರಂ ನಿವಾಸಿ ಮಾದಯ್ಯ ಅವರ ಪುತ್ರ ಅಭಿಷೇಕ್‌ನನ್ನು ಈಗಾಗಲೇ ಬಂಧಿಸಲಾಗಿದೆ.

ಪಟ್ಟಣದ ಪರಸಯ್ಯನ ಛತ್ರದ ಬಳಿಯಿರುವ ಎಸ್.ಎಸ್.ಸಾಮಿಲ್‌ನಲ್ಲಿ ವಾಚ್‌ಮ್ಯಾನ್ ಆಗಿದ್ದ ವೆಂಕಟೇಶ್(70) ಮತ್ತು ವಾರಸುದಾರರಿಲ್ಲದ ಷಣ್ಮುಖ ರಾವ್ ಅಲಿಯಾಸ್ ಕೋಳಿ(72) ಎಂಬುವರನ್ನು ಅಭಿಷೇಕ್, ಬಾಲಕ ಮತ್ತು ತೌಸಿಬ್ ಅವರುಗಳು ಸೇರಿ ಕಬ್ಬಿಣದ ಆಯುಧದಿಂದ ಹೊಡೆದು ಕೊಲೆ ಮಾಡಿ ತಮ್ಮ ದುಶ್ಚಟಗಳಿಗೆ ಅವರುಗಳ ಬಳಿಯಿದ್ದ 485 ರೂ.ಗಳನ್ನು ದೋಚಿದ್ದರು. ಟೌನ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುವುದ ರೊಂದಿಗೆ ಈ ಜೋಡಿ ಕೊಲೆಗೆ ಸಂಬಂಧಿಸಿದಂತೆ ಎಲ್ಲಾ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಲ್ಕುಂಡಿಯಲ್ಲಿ ಬುದ್ಧ ಪ್ರತಿಮೆ ಅನಾವರಣ

ಬುದ್ಧ, ಬಸವ, ಅಂಬೇಡ್ಕರ್ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಳ್ಳಲು ಕರೆ



ಮಲ್ಕುಂಡಿ, ಜೂ.25 – ಪ್ರತಿಯೊಬ್ಬರು ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಾಗ ಮಾತ್ರ ಅವರ ಹಾದಿಯಲ್ಲಿ ನಡೆಯಲು ಸಾಧ್ಯ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಹೇಳಿದರು,

ಗ್ರಾಮದಲ್ಲಿ ಬುದ್ದ ಪ್ರತಿಮೆಯನ್ನು ಅನಾವರಣಗೊಳಿಸಿ ಮಾತನಾಡಿದ ಅವರು, ಬುದ್ದ, ಅಂಬೇಡ್ಕರ್ ಅವರುಗಳ ಪುತ್ಥಳಿಯನ್ನು ಪೂಜಾ ವಸ್ತುವಾಗಿ ಮಾಡಬೇಡಿ. ಸಂವಿಧಾನದ ಅವಕಾಶಗಳನ್ನು ನಾವೆಲ್ಲರೂ ಸಮ ಸಮಾಜದ ನಿರ್ಮಾಣಕ್ಕೆ ಬಳಸಿಕೊಳ್ಳಬೇಕಾಗಿದೆ. ಪ್ರತಿಯೊಬ್ಬರು ಬುದ್ದನ ಮಾರ್ಗದಲ್ಲಿ ನಡೆದಾಗ ಮಾತ್ರ ದೇಶದ ಉತ್ತಮ ಪ್ರಜೆಯಾಗಲು ಸಾಧ್ಯ ಎಂದರು

ತಾಪಂ ಮಾಜಿ ಅಧ್ಯಕ್ಷ ನಾಗೇಶರಾಜ್ ಮಾತನಾಡಿ, ಹಳ್ಳಿಗಳಲ್ಲಿ ಮೂಢನಂಬಿಕೆಯನ್ನೇ ನಂಬಿದ್ದಾರೆ. ಮೊದಲು ಮೂಢನಂಬಿಕೆಯಿಂದ ದೂರ ಉಳಿಯಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಮೂಲಕ ನಾವೆಲ್ಲರೂ ಸಾಗಬೇಕಿದೆ. ಡಾ ಬಿ.ಆರ್. ಅಂಬೇಡ್ಕರ್ ಅವರು ಕಡು ಬಡತನದಲ್ಲಿ ವಿದ್ಯಾಭ್ಯಾಸ ಮಾಡಿ ದೇಶದಲ್ಲಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು ಎಂದು ಪಣ ತೊಟ್ಟು ಎಲ್ಲಾ ಕಷ್ಟಗಳನ್ನು ಅರಿತು ದೇಶಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಸಾಹಿತಿ ಮಹದೇವಸ್ವಾಮಿ, ಮುಖಂಡರುಗಳಾದ ಪುಟ್ಟಬುದ್ಧಿ, ವಕೀಲ ಶ್ರೀನಿವಾಸ, ಎಂ.ಪುಟ್ಟಸ್ವಾಮಿ, ಮಹೇಶ್, ಎಂ.ಎನ್. ಸತೀಶ್, ದುಂಡಯ್ಯ, ಶಿವರುದ್ರ ಸೇರಿದಂತೆ ಪ್ರಮುಖರು ಹಾಜರಿದ್ದರು. ಇದೇ ವೇಳೆ ಬುದ್ದ ಪ್ರತಿಮೆಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೇಣದ ಬತ್ತಿ ಮೂಲಕ ಮೆರವಣಿಗೆ ಮಾಡಲಾಯಿತು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿ ಕೇರಳ ಸ್ಟೋರಿ (ಹಿಂ): ಬೆ.10.25ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ಡೇರ್‌ಡೆವಿಲ್ ಮುಸ್ತಫಾ (ಕ): ಬೆ.10.05ಕ್ಕೆ, ಸಂ.6.50ಕ್ಕೆ, **ಗಾರ್ಡಿಯನ್ಸ್ ಆಫ್ ಗ್ಯಾಲಕ್ಸಿ ವಾಲ್ಯೂಂ 3 (3ಡಿ)(ಇಂ)**: ಮ.1.10ಕ್ಕೆ, **ಜೆರ್ಸಿ ನಂಬರ್ 10 (ಕ)**: ಸಂ.4.05ಕ್ಕೆ, **ರಾಘವೇಂದ್ರ ಸ್ಟೋರ್ಸ್ (ಕ)**: ರಾ.10ಕ್ಕೆ.
ಸ್ಕ್ರೀನ್ 3	ಇವಿಲ್ ಡೆಡ್ ರೈಸ್ (ಇಂ): ಬೆ.11ಕ್ಕೆ, **ಪಿಚ್ಚೈಕಾರನ್2 (ತ)**: ಮ.1.20ಕ್ಕೆ, ಸಂ.4.25ಕ್ಕೆ, **ರಾಘವೇಂದ್ರ ಸ್ಟೋರ್ಸ್ (ಕ)**: ರಾ.7.30ಕ್ಕೆ, **ಚಾರ್ಲ್ಸ್ ಎಂಟರ್‌ಪ್ರೈಸಸ್ (ಮ)**: ಸಂ.9.55ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.10.45ಕ್ಕೆ, ಮ.1.35ಕ್ಕೆ, ಸಂ.4.25ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫಾಸ್ಟ್ X (3ಡಿ)(ಇಂ): ಬೆ.10.30, ಮ.1.30ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ದಿ ಕೇರಳ ಸ್ಟೋರಿ (ಹಿಂ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 3	ದಿ ಕೇರಳ ಸ್ಟೋರಿ (ಹಿಂ): ಬೆ.11ಕ್ಕೆ, ಮ.1.55ಕ್ಕೆ, ಸಂ.4.50ಕ್ಕೆ, ರಾ.10.30ಕ್ಕೆ, ಅನುರಾಗಂ (ಮ): ರಾ.7.45ಕ್ಕೆ.
ಸ್ಕ್ರೀನ್ 4	ಫಾಸ್ಟ್ X (3ಡಿ)(ಇಂ): ಬೆ.9.30ಕ್ಕೆ, **ಪಿಚ್ಚೈಕಾರನ್ 2(ತ)**: ಮ.12.20ಕ್ಕೆ, ರಾ.10.05ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಸಂ.6.50ಕ್ಕೆ

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ)**: ಸಂ.4.50ಕ್ಕೆ, **ಚೌಕಾಬಾರ (ಕ)**: ರಾ.7.50ಕ್ಕೆ, **ಕ್ರಿಷ್ 3 (ಇಂ)**: ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ)**: ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ)**: ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ)**: ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ)**: ಮ.2.45ಕ್ಕೆ, ರಾ.7.45ಕ್ಕೆ, **65 (ಇಂ)**: ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತಲೈ ನಾಗರಾಮ್ –2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆದಿಪುರುಷ (ಕ) ಆದಿಪುರುಷ (ಹಿ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಗಡಾರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಉಗ್ರಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಧೂಮಮ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪಾಯಮ್ ಓಲಿ ನೀ ಎನಕ್ಕು (ತ)	4 ಪ್ರದರ್ಶನಗಳು
ಸಂಗಂ	
ಆದಿಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಅಗ್ರಸೇನಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ವಾರಿಸು (ತ)	4 ಪ್ರದರ್ಶನಗಳು
ಪ್ರಭಾ	
ಜೈಲಲಿತ (ಕ)	4 ಪ್ರದರ್ಶನಗಳು

ಪುರಸಭೆಯ ವಿಶೇಷ ಅನುದಾನದಿಂದ ಹೊಸ ಬಡಾವಣೆಗಳ ಅಭಿವೃದ್ಧಿ

ವರಸಿದ್ಧಿ ವಿನಾಯಕ ಸೇವಾ ಸಮಿತಿಯ ವಾರ್ಷಿಕೋತ್ಸವದಲ್ಲಿ ಶಾಸಕ ರವಿಶಂಕರ್ ಭರವಸೆ



ಕೆ.ಆರ್.ನಗರ, ಜೂ.25– ಪಟ್ಟಣದ ಅಭಿವೃದ್ಧಿಗಾಗಿ ಪುರಸಭೆಗೆ ವಿಶೇಷ ಅನುದಾನ ನೀಡುವಂತೆ ಪೌರಾಡಳಿತ ಸಚಿವ ರಹೀಂಖಾನ್ ಅವರಿಗೆ ಮನವಿ ಸಲ್ಲಿಸಲಾಗಿದ್ದು, ಮುಂದಿನ 15 ದಿನಗಳ ಒಳಗೆ ಅನುದಾನ ಮಂಜೂರಾಗಲಿದೆ. ಆನಂತರ ಅಗತ್ಯ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತದೆ ಎಂದು ಶಾಸಕ ಡಿ.ರವಿಶಂಕರ್ ಹೇಳಿದರು.

ನಗರದ 17ನೇ ವಾರ್ಡಿನ ವರಸಿದ್ದಿ ವಿನಾಯಕ ಸೇವಾ ಸಮಿತಿಯ 20ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಪೌರಾಡಳಿತ ಇಲಾಖೆಯಿಂದ ಬರುವ ಅನುದಾನದಲ್ಲಿ ಸಾರ್ವಜನಿಕರಿಗೆ ಉಪಯುಕ್ತವಾದ ಮತ್ತು ಹೊಸ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಆದ್ಯತೆ ನೀಡುವಂತೆ ಪುರಸಭೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಈ ದೇವಾಲಯದ ಸುತ್ತ ಕಾಂಪೌಂಡ್ ನಿರ್ಮಾಣ ಮಾಡಿ ಮತ್ತು ಹೈಮಾಸ್ಕ್ ದೀಪ ಅಳವಡಿಸಲು ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದ ಶಾಸಕರು ಕನಕನಗರ, ಟೆಲಿಕಾಂ ಬಡಾವಣೆ, ಸಕ್ಕರೆ ನಗರದ ಜನತೆಗೆ ಎಲ್ಲಾ ರೀತಿಯ ಮೂಲ ಸೌಕರ್ಯ ಒದಗಿಸಲು ಬದ್ಧನಾಗಿದ್ದು ಕಾಲಾವಕಾಶ ನೀಡಬೇಕು ಎಂದು ಕೋರಿದರು.

ಹೊಸ ಬಡಾವಣೆಯಾಗಿರುವ 17ನೇ ವಾರ್ಡಿನ ಅಭಿವೃದ್ಧಿಗಾಗಿ 1 ಕೋಟಿ ರೂ.ಗಳನ್ನು ಬಿಜೆಪಿ ಸರ್ಕಾರದಲ್ಲಿ ಪೌರಾಡಳಿತ ಸಚಿವರಾಗಿದ್ದ ಎಂಟಿಬಿ ನಾಗರಾಜ್‌ರವರು ಮಂಜೂರು ಮಾಡಿಸಿದ್ದರು, ಸ್ಥಳೀಯ ಶಾಸಕರಾಗಿದ್ದವರಿಂದ ರಾಜಕೀಯ ಕಾರಣಕ್ಕಾಗಿ ಅನುದಾನವನ್ನು ತಡೆಹಿಡಿಸಿದ್ದರು ಎಂದು ಮಾಹಿತಿ ನೀಡಿದ ಶಾಸಕ ಡಿ.ರವಿಶಂಕರ್ ಈ ಅನುದಾನವನ್ನು ಮತ್ತೆ ಬಿಡುಗಡೆ ಮಾಡಿಸಲಾಗಿದ್ದು ಇದರಿಂದ ಬಡಾವಣೆ ಸಮಗ್ರ ಅಭಿವೃದ್ಧಿ ಕಾಣಲಿದೆ ಎಂದರು.

ಕೇಂದ್ರದ ಬಿಜೆಪಿ ಸರ್ಕಾರ ಅನಗತ್ಯ ತೊಂದರೆ ನೀಡಿದರೂ ಸಹ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸುವುದರ ಜತೆಗೆ ಉತ್ತಮ ಆಡಳಿತ ನೀಡಲಿದೆ ಇದರಲ್ಲಿ ಜನತೆ ವಿಶ್ವಾಸ ಇಡಬೇಕು ಎಂದು ಕೋರಿದ ಶಾಸಕರು ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಸಮಗ್ರ ಅಭಿವೃದ್ಧಿ ಮಾಡಲು ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ವಿಧಾನಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಮಾತನಾಡಿ, ಐದು ವರ್ಷಗಳ ಕಾಲ ಶಾಸಕರಾಗಿದ್ದವರು ತಾರತಮ್ಯ ರಾಜ ಕಾರಣ ಮಾಡಿದ್ದಕ್ಕಾಗಿ 27,242 ಮತಗಳ ಅಂತರದಿಂದ ಸೋಲು ಕಾಣಬೇಕಾಯಿತು, ತಾವು ಈ ರೀತಿಯ ರಾಜಕಾರಣ ಮಾಡಬಾರದು ಎಂದು ಸಲಹೆ ನೀಡಿದ್ದಲ್ಲದೆ ಸದಾ ಜನರೊಟ್ಟಿಗಿದ್ದು ಎರಡು ತಾಲೂಕುಗಳಲ್ಲಿರುವ ಜನತೆಯ ಸಮಸ್ಯೆಯನ್ನು ಆಲಿಸುವಂತಾಗಬೇಕು. ಯಾವುದೇ ಕಾರಣಕ್ಕೂ ಜಾತಿ ಕೇಳಿ ಕೆಲಸ ಮಾಡಬಾರದು ಎಂದು ಶಾಸಕ ಡಿ.ರವಿಶಂಕರ್‌ಗೆ ಕಿವಿಮಾತು ಹೇಳಿದರು.

ಜಿಪಂ ಮಾಜಿ ಸದಸ್ಯ ಜಿ.ಆರ್.ರಾಮೇಗೌಡ, ಹುಣಸೂರು ತಾಲೂಕು ಕುರುಬರ ಸಂಘದ ಅಧ್ಯಕ್ಷ ಕುನ್ನೇಗೌಡ, ಪುರಸಭೆ ಸದಸ್ಯ ನಟರಾಜು, ದೇವಾಲಯ ಸೇವಾ ಸಮಿತಿ ಅಧ್ಯಕ್ಷ ಬಿ.ಎಂ. ನಾಗರಾಜು, ಕಾರ್ಯದರ್ಶಿ ಜವರೇಗೌಡ, ಸದಸ್ಯರಾದ ಪ್ರಕಾಶ್, ಎಸ್.ಬಸವರಾಜು, ಸಣ್ಣತಮ್ಮೇಗೌಡ, ಶಶಿಧರ್, ಪಿ.ಪ್ರಶಾಂತ್, ಸುಬ್ಬೇಗೌಡ, ಮಣಿಯಮ್ಮ, ಪುಟ್ಟೇಗೌಡ, ಬಿ.ಆರ್.ನಂದೀಶ್, ಬೋರಲಿಂಗೇಗೌಡ, ಜಗದೀಶ್, ಲೋಕೇಶ್, ಪರಶಿವಮೂರ್ತಿ, ವೆಂಕಟೇಶ್, ಬ್ರಾಂಡ್ ಮಂಜು, ಡಿ.ಜಿ.ಕಿರಣ್, ಚೇತನ್‌ಶೆಟ್ಟಿ ಪ್ರದೀಪ್ (ದೀಪು), ಧ್ರುವರಾಜ್, ಪ್ರಮೋದ್, ಕೃಷ್ಣೇಗೌಡ, ನಾಗರಾಜು ಸೇರಿದಂತೆ ಮತ್ತಿತರರು ಹಾಜರಿದ್ದರು.

ಹೆಚ್.ಡಿ.ಕೋಟೆ, ಸರಗೂರು ತಾಲೂಕು ಅಭಿವೃದ್ಧಿಗೆ ಹೆಚ್ಚಿನ ಅನುದಾನ

ಕಾಂಗ್ರೆಸ್ ಮುಖಂಡರ ಮನವಿಗೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್‌ಗೆ ಭರವಸೆ



ಹೆಚ್.ಡಿ.ಕೋಟೆ, ಜೂ.25 – ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿಗೆ ನಮ್ಮ ಸರ್ಕಾರ ಹೆಚ್ಚಿನ ಅನುದಾನ ನೀಡುವ ಮೂಲಕ ಅಭಿವೃದ್ಧಿಗೆ ಸಹಕಾರ ನೀಡಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷಿ ಹೆಬ್ಬಾಳ್ಕರ್ ಭರವಸೆ ನೀಡಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟಕ್ಕೆ ಆಗಮಿಸಿ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದ ಸಚಿವರನ್ನು ಜಯಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷರು ಮತ್ತು ಕಾಂಗ್ರೆಸ್ ಮುಖಂಡರಾದ ಸತೀಶ್ ಗೌಡ, ಸ್ವಾಗತಿಸಿ ಸನ್ಮಾನಿಸಿ, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ಅಭಿವೃದ್ಧಿಗೆ ಸಹಕರಿಸುವಂತೆ ಕೋರಿ ಸಲ್ಲಿಸಿದ ಮನವಿ ಸ್ವೀಕರಿಸಿ ಅವರು ಈ ಭರವಸೆ ನೀಡಿದರು.

ಹೆಚ್.ಡಿ.ಕೋಟೆ ಕ್ಷೇತ್ರದ ಶಾಸಕ ಅನಿಲ್ ಚಿಕ್ಕಮಾದು ಅವರು ಎರಡು ತಾಲೂಕಿನಲ್ಲಿ ಈಗಾಗಲೇ ಸಾಕಷ್ಟು ಅನುದಾನಗಳನ್ನು ತಂದು ಅಭಿವೃದ್ಧಿ ಪಡಿಸಿದ್ದಾರೆ. ಆದರೆ ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಇರುವುದರಿಂದ ಕೋಟೆ ಮತ್ತು ಸರಗೂರಿಗೆ ಇನ್ನು ಹೆಚ್ಚಿನ ಅನುದಾನವನ್ನ ಕೊಡುವುದರ ಮೂಲಕ ಹೆಚ್ಚಿನ ಅಭಿವೃದ್ಧಿಗೆ ಮುಂದಾಗುತ್ತೇವೆ ಎಂದು ಸಚಿವರು ತಿಳಿಸಿದರು.

ನಾಗನಹಳ್ಳಿ ಪ್ರದೀಪ, ಗಣೇಶಾಚಾರ್, ಹೋಂಡಾ ನಯಾಜ್, ಕುಲಮೆ ರಾಜು, ಹೀರೋ ಜೈರಾಮ್, ವಡ್ಡರಗುಡಿ ರವಿ ಇನ್ನು ಮುಂತಾದವರು ಹಾಜರಿದ್ದರು.

ಟೈಲರಿಂಗ್ ಕಾರ್ಮಿಕರ ಟ್ರಸ್ಟ್‌ಗೆ ಪದಾಧಿಕಾರಿಗಳ ಆಯ್ಕೆ



ಹೆಚ್.ಡಿ.ಕೋಟೆ ಟೈಲರಿಂಗ್ ಕಾರ್ಮಿಕರ ಅಭಿವೃದ್ಧಿ ಟ್ರಸ್ಟ್‌ಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಎನ್.ರಂಗಸ್ವಾಮಿ, ಉಪಾಧ್ಯಕ್ಷ– ಪ್ರವೀಣ್, ಗೌರವಾಧ್ಯಕ್ಷ– ಟಿ.ಸಿ.ಜಗದೀಶ್, ಕಾರ್ಯದರ್ಶಿ– ಸದಾಶಿವಮೂರ್ತಿ, ಖಜಾಂಚಿ– ಜಿ.ಎಂ. ಪುಟ್ಟಮಾದು, ಸಹ ಕಾರ್ಯದರ್ಶಿ– ಕೋಟೆಗೌಡ, ನಿರ್ದೇಶಕರಾಗಿ ಸೈಯದ್ ಇನಾಯತ್, ಸ್ವಾಮಿರಾವ್, ಜಮೀರ್, ಷರೀಫ್ ಹಾಗೂ ಸಲಹಾ ಸಮಿತಿ ಸದಸ್ಯರಾಗಿ ಸ್ಟೈಲೆಟ್ ಮಣಿ, ಮಾಡ್ರನ್ ರಾಜು, ಕೃಷ್ಣಮೂರ್ತಿ ಅವರನ್ನು ಆಯ್ಕೆ ಮಾಡಲಾಯಿತು.

ಹುಣಸೂರು ತಾಲೂಕು ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿಗದಿ



ಹುಣಸೂರು, ಜೂ.25– ನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ನೇತೃತ್ವದಲ್ಲಿ ರಾಜ್ಯ ಚುನಾವಣಾ ಅಯೊಗದ ನಿರ್ದೇಶನದಂತೆ ಹುಣಸೂರು ತಾಲೂಕಿನ 41 ಗ್ರಾಮ ಪಂಚಾಯಿತಿಗಳ ಎರಡನೇ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದೆಗಳಿಗೆ ಮೀಸಲಾತಿಯನ್ನು ನಿಗದಿಪಡಿಸಿ, ಘೋಷಿಸಲಾಯಿತು.

ಹರವೆ; ಅಧ್ಯಕ್ಷ (ಎಸ್ಟಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಹಿರಿಕ್ಯಾತನಹಳ್ಳಿ;** ಅಧ್ಯಕ್ಷ (ಎಸ್ಟಿ ಮಹಿಳೆ), ಉಪಾಧ್ಯಕ್ಷ (ಕ್ಯಾಟಗರಿ.ಎ), **ಗಾವಡಗೆರೆ;** ಅಧ್ಯಕ್ಷ (ಎಸ್ಟಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಜಾಬಗೆರೆ;** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಟಿ), **ಮುಳ್ಳೂರು;** ಅಧ್ಯಕ್ಷ (ಕ್ಯಾಟಗರಿ.ಬಿ.ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಬೋಳನಹಳ್ಳಿ;** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ(ಸಾಮಾನ್ಯ ಮಹಿಳೆ),

ಹುಸೇನ್‌ಪುರ(ತೆಂಕನಕೊಪ್ಪಲು); ಅಧ್ಯಕ್ಷ (ಕ್ಯಾಟಗರಿ–ಎ.ಮಹಿಳೆ), ಉಪಾಧ್ಯಕ್ಷ (ಎಸ್ಸಿ), **ಹಳೇಬೀಡು;** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಬಿಳಿಕೆರೆ;** ಅಧ್ಯಕ್ಷ (ಎಸ್ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಮನುಗನಹಳ್ಳಿ;** ಅಧ್ಯಕ್ಷ(ಎಸ್ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಗಾಗೇನಹಳ್ಳಿ;** ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಚಿಕ್ಕಬೀಚನಹಳ್ಳಿ;** ಅಧ್ಯಕ್ಷ (ಕ್ಯಾಟಗರಿ.ಎ.ಮಹಿಳೆ), ಉಪಾಧ್ಯಕ್ಷ (ಎಸ್ಸಿ),

ಬನ್ನಿಕುಪ್ಪೆ; ಅಧ್ಯಕ್ಷ (ಎಸ್ಟಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಮರದೂರು;** ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಕ್ಯಾಟಗರಿ ಎ), **ಕಟ್ಟೆಮಳಲವಾಡಿ;** ಅಧ್ಯಕ್ಷ(ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಮೋದೂರು;** ಅಧ್ಯಕ್ಷ (ಕ್ಯಾಟಗರಿ ಎ), ಉಪಾಧ್ಯಕ್ಷ(ಎಸ್ಟಿ ಮಹಿಳೆ), **ಬಿಳಿಗೆರೆ;** ಅಧ್ಯಕ್ಷ(ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಟಿ), **ಕೊತ್ತೇಗಾಲ;** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಕ್ಯಾಟಗರಿ.ಎ.ಮಹಿಳೆ),

ಚಿಲ್ಕುಂದ; ಅಧ್ಯಕ್ಷ(ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ಕಲ್ಲಹಳ್ಳಿ;** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಬೀಜಗನಹಳ್ಳಿ;** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಮೂಕನಹಳ್ಳಿ(ರಾಂಪಟ್ಟಣ);** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್ಸಿ), **ಉದ್ದೂರು ಕಾವಲು;** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ),

ಉದ್ದೂರು; ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ಚಲ್ಲಹಳ್ಳಿ;** ಅಧ್ಯಕ್ಷ (ಎಸ್ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಶಿಂಗರಮಾರನಹಳ್ಳಿ;** ಅಧ್ಯಕ್ಷ(ಸಾಮಾನ್ಯ), ಉಪಾಧ್ಯಕ್ಷ (ಎಸ್ಟಿ ಮಹಿಳೆ), **ಕಮುದ್ದನಹಳ್ಳಿ;** ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), **ಧರ್ಮಾಪುರ;** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ).

ಉಯಿಗೊಂಡನಹಳ್ಳಿ; ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಕ್ಯಾಟಗರಿ.ಬಿ.ಮಹಿಳೆ), **ಆಸ್ಪತ್ರೆ ಕಾವಲ್;** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಟಿ ಮಹಿಳೆ), **ಗೋವಿಂದನಹಳ್ಳಿ;** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಕ್ಯಾಟಗರಿ–ಎ), **ಉಮ್ಮತ್ತೂರು;** ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಗುರುಪುರ;** ಅಧ್ಯಕ್ಷ(ಕ್ಯಾಟಗರಿ.ಎ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ತಟ್ಟೆಕೆರೆ;** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಕರ್ಣಕುಪ್ಪೆ;** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ),

ಕಡೇಮನುಗನಹಳ್ಳಿ; ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ನೇರಳಕುಪ್ಪೆ;** ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), **ಹನಗೋಡು;** ಅಧ್ಯಕ್ಷ (ಎಸ್ಸಿ), ಉಪಾಧ್ಯಕ್ಷ (ಕ್ಯಾಟಗರಿ.ಎ.ಮಹಿಳೆ), **ಹೆಗ್ಗಂದೂರು;** ಅಧ್ಯಕ್ಷ (ಕ್ಯಾಟಗರಿ.ಎ), ಉಪಾಧ್ಯಕ್ಷ (ಎಸ್ಸಿ ಮಹಿಳೆ), **ಕಿರಂಗೂರು;** ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಟಿ), **ದೊಡ್ಡಹೆಜ್ಜೂರು;** ಅಧ್ಯಕ್ಷ(ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ),

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ಮಾತನಾಡಿ, ಹುಣಸೂರು ತಾಲೂಕಿನ 41 ಗ್ರಾಮ ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿಯನ್ನು ರಾಜ್ಯ ಚುನಾವಣಾ ಆಯೋಗದ ನೇರ ದೇಶದಂತೆ ಎನ್.ಐ.ಸಿ ಸಾಫ್ಟ್‌ವೇರ್ ಉಪಯೋಗಿಸಿಕೊಂಡು ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ ಹಾಗೂ ಇದನ್ನು ವಿಡಿಯೊ ಚಿತ್ರೀಕರಣ ಸಹ ಮಾಡಲಾಗುತ್ತಿದೆ. ಈ ಬಗ್ಗೆ ತಮಗೆ ಅನುಮಾನ ಬಂದಲ್ಲಿ ವಿಡಿಯೊ ಚಿತ್ರೀಕರಣದ ನಕಲು ಪಡೆದು ರಾಜ್ಯ ಚುನಾವಣಾ ಅಯೋಗದಲ್ಲಿ ಪ್ರಶ್ನಿಸಬಹುದು ಎಂದರು.

ತಾಲೂಕಿನ 41 ಪಂಚಾಯಿತಿಗಳ ಪೈಕಿ ಎಸ್ಸಿಗೆ 7, ಎಸ್ಟಿಗೆ 7, ಕ್ಯಾಟಗರಿ.ಎ ಗೆ 5, ಕ್ಯಾಟಗರಿ ಬಿಗೆ 1, ಉಳಿದ 21 ಸ್ಥಾನಗಳು ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಲಾಗಿದೆ. ಅಂತೆಯೇ ಶೇ.50ರಷ್ಟು ಸ್ಥಾನಗಳು ಆಯಾಯ ವರ್ಗದ ಮಹಿಳೆಯರಿಗೂ ನಿಗದಿಪಡಿಸಲಾಗಿದೆ. ಪ್ರಕಟಗೊಂಡಿರುವ ಈ ಮೀಸಲಾತಿ ಸದಸ್ಯರಿಗೆ ಒಪ್ಪಿಗೆಯಾಗದಿದ್ದಲ್ಲಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ಎಂದರು.

ಮೀಸಲಾತಿಯನ್ನು ನಿಗದಿಪಡಿಸಿ ಪ್ರಕಟಿಸುವ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರೊಂದಿಗೆ ಅಯುಕ್ತೆ ಎಸಿ ರೂಪಾ, ಉಪವಿಭಾಗಾಧಿಕಾರಿ ರುಚಿಬಿಂದಾಲ್, ತಹಸೀಲ್ದಾರ್ ಡಾ.ಅಶೋಕ್, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮನು, ಕಂದಾಯ ಇಲಾಖೆ ಮತ್ತು ಚುನಾವಣಾ ವಿಭಾಗದ ಸಿಬ್ಬಂದಿ ಉಪಸ್ಥಿತರಿದ್ದರು.

ಗುಡ್ಡಪ್ಪ ರಾಜುಸ್ವಾಮಿ ನಿಧನ



ಸರಗೂರು: ಆಗತ್ತೂರು ಗ್ರಾಮದ ಶ್ರೀ ವೇಣುಗೋಪಾಲಸ್ವಾಮಿ ಗುಡ್ಡಪ್ಪ ರಾಜುಸ್ವಾಮಿ(55) ನಿಧನರಾಗಿದ್ದಾರೆ. ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಸಾವಿರಾರು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ರಾಜುಸ್ವಾಮಿ ಅವರ ಅಂತಿಮ ದರ್ಶನ ಪಡೆದರು.

ಗುಡ್ಡಪ್ಪನವರು ಭಕ್ತರ ಸಲಹೆ ಸಹಕಾರದಿಂದ ಹಲವಾರು ವರ್ಷಗಳಿಂದ ದೇವಾಲಯವನ್ನು ಗ್ರಾಮದಲ್ಲಿ ನಿರ್ಮಿಸಿ ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ಶನಿವಾರ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಅಪಾರ ಬಂಧು–ಬಳಗವನ್ನು ಅಗಲಿದ್ದು, ಅಂತ್ಯಕ್ರಿಯೆಯನ್ನು ಆಗತ್ತೂರು ಗ್ರಾಮದ ಕಪಿಲಾ ನದಿಯ ದಡದಲ್ಲಿ ಭಾನುವಾರ ನಡೆಸಲಾಯಿತು.


ಶ್ರೀ ಮಂಜುಗೌಡರ
ಸಿದ್ದಲಿಂಗಪುರ ಜಿಲ್ಲಾ ಪಂಚಾಯಿತಿ ಉಸ್ತುವಾರಿ ಹಾಗೂ ಎಂ.ಸಿ.ಡಿ.ಸಿ.ಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷರು
ಜನುಮ ದಿನದ ಶುಭಾಶಯಗಳು
VISMAYA
Advertisers
8050302424
ಶುಭಕೋರುವವರು : ಸಿದ್ಧಲಿಂಗಪುರ ಜಿಲ್ಲಾಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮುಖಂಡರು ಹಾಗೂ ಗ್ರಾಮಸ್ಥರು